ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ದೇಶಿ ಕಲಾಮಾಲೆ

# ರಂಗೋಲಿ ಚಿತ್ರಕಲೆ

• ಡಾ. ಎಸ್.ಸಿ. ಪಾಟೀಲ



# ರಂಗೋಲಿ ಚಿತ್ರಕಲೆ

ಲೇಖಕರು

ಡಾ.ಎಸ್.ಸಿ.ಪಾಟೀಲ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು ೫೬೦೦೦೨

**RANGOLI CHITRAKALE**
*By* : **Dr.S.C.Patil**
*Published by*
**B.T.Munirajayya, Registrar**
**Karnataka Lalithakala Academy**
**Kannada Bhavana, J.C.Road**
**BANGALORE-560002**
**First Impression : 2004**
**Pages : XII + Price Rs : 40-00**
ಬೆಲೆ ರೂ. : ೪೦-೦೦
ಪ್ರಥಮ ಮುದ್ರಣ : ೨೦೦೪
© ಲೇಖಕರದು
ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು
ಆಯಾ ಲೇಖಕರಿಗೆ ಸಂಬಂಧಿಸಿದ್ದು
*ಪ್ರಧಾನ ಸಂಪಾದಕರು*
ಶ್ರೀ ಪೀಟರ್ ಎ. ಲೂಯಿಸ್
*ಸಂಪಾದಕರು*
ಡಾ.ಎಸ್.ಸಿ.ಪಾಟೀಲ
*ಪ್ರಕಟಣಾ ಸಮಿತಿ ಸದಸ್ಯರು*
ಶ್ರೀ ಸುರೇಶ ಡಿ.ಹಾಲಬಾವಿ
ಡಾ. ಪೂರ್ಣಿಮಾ ಪಾಟೀಲ
ಶ್ರೀ ಪಿ.ಎಸ್.ಕಡೇಮನಿ
ಶ್ರೀ ಬಿ.ಎಸ್.ದೇಸಾಯಿ
ಶ್ರೀ ದಿಲೀಪಕುಮಾರ ಕಾಳೆ
*ಪ್ರಕಾಶಕರು*
ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
*ಸಮನ್ವಯಕಾರ* : ಶ್ರೀ ಪ.ಸ.ಕುಮಾರ
*ಮುಖಪುಟ* : ಶ್ರೀ ಸುಧಾಕರ ದರ್ಬೆ
*ಅಕ್ಷರ ಜೋಡಣೆ* : ಯಾಜಿ ಗ್ರಾಫಿಕ್ಸ್, ಹೊಸಪೇಟೆ
ಮುದ್ರಣ ಅಕ್ಷರೋಗಾಫಿಕ್ಸ್
ನಂ. 3/1, 6ನೇ ಅಡ್ಡರಸ್ತೆ, ಮಾಗಡಿ ಮುಖ್ಯರಸ್ತೆ,
ಅಗ್ರಹಾರ ದಾಸರಹಳ್ಳಿ, ಬೆಂಗಳೂರು - 560 079
ಫೋನ್ : 98451 63672, 23304131

# ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಯಂಗ್ ಸ್ಟ್ರೋಕ್ಸ್: ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

ಮನೆಗೊಂದು ಕಲಾಕೃತಿ : ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದೆವು. ಜನರ ಉತ್ಸಾಹ ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದು ನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

ನಿಮ್ಮೊಂದಿಗೆ ನಾವು : ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯವನ್ನು ಮಾಡಿಸಿದೆ.

**ಜನಪದ ಶೃತಿ-ಆಧುನಿಕ ಕೃತಿ :** ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

**ಯುವ ಕಲಾವಿದರಿಗೆ ಫೆಲೋಶಿಪ್ :** ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್. ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳೆ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ

೨. ಶೀಗಿ ಚಿತ್ರಕಲೆ

೩. ಕಸೂತಿ ಚಿತ್ರಕಲೆ

೪. ಹಚ್ಚೆ ಚಿತ್ರಕಲೆ

೫. ಬೆಳದಿಂಗಳ ಚಿತ್ರಕಲೆ

೬. ಚಿತ್ತಾರಗೊಂಬೆ ಚಿತ್ರಕಲೆ

೭. ನಾಗಾರಾಧನೆ ಮತ್ತು ಚಿತ್ರಕಲೆ

೮. ಯಕ್ಷಗಾನ ಮತ್ತು ಚಿತ್ರಕಲೆ

೯. ಬಿದರಿ ಚಿತ್ರಕಲೆ

೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಆಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿ ಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರ ವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯ ಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು — ಪೀಟರ್ ಎ. ಲೂಯಿಸ್

೨೦೦೪ — ಅಧ್ಯಕ್ಷರು

# ಸಂಪಾದಕೀಯ

ಎಲ್ಲ ಅನ್ಯಶಿಸ್ತುಗಳಲ್ಲಿ ಆದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನ ಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆ ಎಂಬ ಆತಂಕ ಕೂಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನೆಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಆದರೆ ಕಲೆಯ ತಾಯಿ ಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣ ಪ್ರಯತ್ನ ಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸ ನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು

ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಾಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟಿದ್ದು ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರ ಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ನಮ್ಮ ಮಾರ್ಗ ಸೂಚನೆಯ ಮೇರೆಗೆ ಹತ್ತುಜನ ವಿದ್ವಾಂಸರಿಗೆ ರಂಗೋಲಿ ಚಿತ್ರಕಲೆ, ಶೀಗಿ ಚಿತ್ರಕಲೆ, ಕಸೂತಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಚಿತ್ತಾರದ ಗೊಂಬೆ ಚಿತ್ರಕಲೆ, ನಾಗಾರಾಧನೆ ಮತ್ತು ಚಿತ್ರಕಲೆ ಯಕ್ಷಗಾನ ಮತ್ತು ಚಿತ್ರಕಲೆ, ಬಿದರಿ ಚಿತ್ರಕಲೆ, ಭೂತಾರಾಧನೆ ಮತ್ತು ಚಿತ್ರಕಲೆ ಎಂಬ ಹತ್ತು ವಿಷಯಗಳ ಕುರಿತು ಕಿರುಗ್ರಂಥಗಳನ್ನು ಬರೆಯಲು ವಿನಂತಿಸಿಕೊಳ್ಳಲಾಗಿತ್ತು, ಆದರೆ ಕೆಲವು ಜನ ವಿದ್ವಾಂಸರು ಒಪ್ಪಿಗೆ ಸೂಚಿಸಿ ಬರೆದು ಕೊಡುತ್ತೇವೆ ಎನ್ನುತ್ತಲೇ ದಿನಗಳನ್ನು ಮುಂದೂಡಿ ಕೊನೆಗೂ ಅವರಿಂದ ಬರವಣಿಗೆ ಬರದೇ ಇದ್ದಾಗ ಇಬ್ಬರು ಎರಡೆರಡು ಗ್ರಂಥಗಳನ್ನು ಬರೆಯುವುದು ಅನಿವಾರ್ಯವಾಯಿತು. ಭೂತಾರಾಧನೆ ಮತ್ತು ಚಿತ್ರಕಲೆ ಕುರಿತು ಗ್ರಂಥ ಇನ್ನು ನಮ್ಮ ಕೈ ಸೇರದೇ ಇರುವುದರಿಂದ ಸಧ್ಯ ಬಂದಿರುವ ಒಂಬತ್ತು ಕಿರು ಗ್ರಂಥಗಳನ್ನು ಪ್ರಕಟಿಸುತ್ತಿದ್ದೇವೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಅವರು ನನಗಿಂತಲೂ ಹೆಚ್ಚು ಕಾಳಜಿ ವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ.ಸ.ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯ ವಾಗಿದೆ.

ಬಸವ ಜಯಂತಿ
೨೦೦೪

ಡಾ. ಎಸ್. ಸಿ. ಪಾಟೀಲ
ಸಂಪಾದಕರು

ಯಾವುದೇ ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಧಿಕಾರ ಆಯಾ ದೇಶದ ಯಾವುದೇ ಕಲೆಗಳಿಗೆ ಇರುತ್ತದೆ. ಸಾಮಾನ್ಯವಾಗಿ ದೇಶಿ ಮೂಲದ ಕಲೆಗಳು ಅವುಗಳದೇ ಆದ ವಿಶಿಷ್ಟ ಸಾಂಸ್ಕೃತಿಕ ಹಿನ್ನಲೆಯನ್ನು ಹೊಂದಿರುತ್ತವೆ. ಅವು ತಲೆಮಾರಿನಿಂದ ತಲೆಮಾರಿಗೆ ಮುಂದುವರೆದು ಅದೊಂದು ಸಾಮೂಹಿಕವಾದ ಸೃಷ್ಟಿಯಾಗಿ ಸಂವಹನಗೊಳ್ಳುತ್ತವೆ. ಅಲ್ಲಿ ವಯಕ್ತಿಕ ಪ್ರತಿಭೆ ಕೆಲಸ ಮಾಡಿದರೂ ಅದು ಆಯಾ ಸಮೂದಾಯದ ಸಮಷ್ಟಿ ಸೃಷ್ಟಿಯಾಗಿ ಅಭಿವ್ಯಕ್ತಗೊಳ್ಳುತ್ತದೆ. ಹೀಗಾಗಿ ಒಂದು ವಸ್ತುವಿನ ಕಲಾತ್ಮಕತೆಯನ್ನು ಬೆಳೆಸುವಲ್ಲಿ ಗುಂಪಿನ ಪ್ರತಿಯೊಬ್ಬನ ಕೈವಾಡವು ಅದರಲ್ಲಿ ಕಾರ್ಯಮಾಡಿರುತ್ತದೆ. ಹೀಗೆ ಒಂದು ವಸ್ತುವಿಗೆ ಸಮೂಹದ ವ್ಯಕ್ತಿ ತನ್ನದೆನಿಸಿದ್ದು ಈ ವಸ್ತುವಿನಪೀಳಿಗೆಗೆ ತಮ್ಮದೆ ಆದ ಕ್ರಿಯಾತ್ಮಕ ಅಂಶಗಳನ್ನು ಪ್ರೇರಿಸುತ್ತಾನೆ. ಹೀಗೆ ಒಂದು ಪ್ರೇರಕ ಶಕ್ತಿ ಈ ಕಲೆಯ ಹಿಂದೆ ಕೆಲಸ ಮಾಡುತ್ತ ಹೋಗಿರುವದನ್ನು ಗುರುತಿಸಬಹುದು.

ಜನಪದ ಕಲೆ ಸೌಂದರ್ಯದ ಆಶಯವಾಗಿ ಧಾರ್ಮಿಕ ಹಿನ್ನಲೆಯಲ್ಲಿ, ಮತ್ತು ವೃತ್ತಿಮೂಲದ ಸಂದರ್ಭಗಳಲ್ಲಿ ಜನಿಸಿಬಂದಿರುವದು ಅವುಗಳ ಅಧ್ಯಯನದಿಂದ ಗೊತ್ತಾಗುವ ಸಂಗತಿಯಾಗಿದೆ. ಪ್ರತಿಯೊಂದು ದೇಶದ ಕಲೆಗಳು ಆಯಾ ದೇಶದ ಸಂಪತ್ತು ಅಷ್ಟೇ ಅಲ್ಲ ಆಯಾ ಸಂಸ್ಕೃತಿಯ ತೋರು ದೀವಿಗೆಗಳು ಕೂಡ. ಪರಂಪರಾಗತವಾಗಿ ಸಹಸ್ರಾರು ವರ್ಷಗಳಿಂದ ಉಳಿದು ಬಂದ ನಮ್ಮ ಕಲಾ ಸಂಪತ್ತು, ನಮ್ಮ ಹಿರಿಯರ ಸಾಧನೆ. ಈ ಸೃಜನಶೀಲ ಅಭಿವ್ಯಕ್ತಿಯು ಅಮೂಲ್ಯ ಆಸ್ಥಿಗಳಾಗಿ ಉಳಿದುಕೊಂಡು ಬಂದಿವೆ. ಈ ಕಲೆಗಳಲ್ಲಿ ಒಂದು ಜನಪದ ಮೂಲದ ಕಲೆಗಳು, ಇನ್ನೊಂದು ಶಿಷ್ಟಪದ ಮೂಲದ ಕಲೆಗಳೆಂದು ಪ್ರಮುಖವಾಗಿ ವಿಂಗಡಿಸಲಾಗುತ್ತದೆ. ಈ ವರ್ಗೀಕರಣ ಇಷ್ಟಕ್ಕೆ ನಿಲ್ಲದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೂರನೆಯದಾಗಿ ವರ್ಗಿಕರಣವನ್ನು

ಮಾಡಬಹುದಾಗಿದೆ. ಅವುಗಳನ್ನು ಹೀಗೆ ವರ್ಗೀಕರಿಸಬಹುದು. ಜನಪದ ಮೂಲದ ಕಲೆಗಳು, ಶಿಷ್ಟಪದ ಮೂಲದ ಕಲೆಗಳು, ಶಿಷ್ಟಪದ ಮತ್ತು ಜನಪದ ಮೂಲದ ಸಮ್ಮಿಶ್ರ ಕಲೆಗಳು ಎಂದು ವಿಭಾಗಿಸಿಕೊಂಡು ಅಧ್ಯಯನ ಮಾಡುವ ಸಂದರ್ಭವು ಈಗ ಬಂದಿದೆ. ಚಿತ್ರಕಲೆಯಂತಹ ವಿಷಯಕ್ಕೂ ಈ ವರ್ಗೀಕರಣವನ್ನೇ ನಾವು ಅನ್ವಯಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ. ಜನಪದ ಮೂಲದ ಚಿತ್ರಕಲೆ ಎಂದರೆ, ಶಿಷ್ಟಾಚಾರದ ಯಾವುದೇ ಶಿಸ್ತಿಗೆ ಸಿಲುಕದೇ ನಿಸರ್ಗ ಸಹಜವಾದ ರೂಪಗಳನ್ನು ತಮ್ಮ ಮನಸ್ಸಿನ ಭಾವನೆಗಳಿಗೆ ಅನುಗುಣವಾಗಿ ಸಹಜವಾಗಿ ಚಿತ್ರಿಸುವಂತಹ ಕಲೆ ಆಗಿದೆ. ಈ ಕಲೆ ಶಿಷ್ಟಪದ ಚಿತ್ರಕಲೆಯಿಂದ ಭಿನ್ನವಾಗಿರುವ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿರುವ ಕಲೆಯಾಗಿದೆ. ಸಾಮಾಜಿಕ ಜೀವನದ ಒಳ ರಕ್ತ- ಮಾಂಸಗಳನ್ನು ಅಮೂರ್ತಕಲ್ಪನೆಯ ಮೂಲಕ ಜಂಗಮವಾಗುವಂತೆ ಮಾಡುವ ಸಾಮರ್ಥ್ಯ ಜನಪದ ಚಿತ್ರಕಲೆಗ್ಗೆ ಇದೆ. ಅವು ಸರಳ ಚೌಕಟ್ಟಿನೊಂದಿಗೆ, ಮನಸ್ಸಿನ ಮುಕ್ತವಾದ ಸ್ವತಂತ್ರದೊಂದಿಗೆ ದೈನಂದಿನ ಜೀವನದ ಒಂದು ಭಾಗವಾಗಿ ಬೆಳದು ಬಂದಿವೆ.

ಶಿಷ್ಟಪದ ಚಿತ್ರಕಲೆ ಎಂದರೆ, ಶ್ಯಾಸ್ತ್ರೀಯ ನೀತಿ, ನಿಯಮಗಳ ಪ್ರಮಾಣ ಬದ್ಧ ಲಕ್ಷಣಯುಕ್ತ ಕಲೆ ಈ ಶಿಷ್ಟಪದ ಚಿತ್ರಕಲೆ. ಹೀಗೆ ಶ್ಯಾಸ್ತ್ರೋಕ್ತ ಕಲಿಕೆಗೆ ಒಳಪಟ್ಟ ಶಿಷ್ಟಕಲೆಯ ಸ್ವರೂಪವೇ ಬೇರೆಯಾಗಿರುತ್ತದೆ. ಪ್ರಕೃತಿ ಮತ್ತು ನಿತ್ಯದ ಬದುಕು ಜನಪದ ಕಲೆಗೆ ಆಶ್ರಯ ನೀಡಿದರೆ ಜನಪದಕಲೆಯಿಂದ ಶಿಷ್ಟಪದ ಕಲೆ ಬೌದ್ಧಿಕ ವಿಕಾಸ ಪಡೆದು ಬೆಳೆದುಬಂದಿದೆ ಎನ್ನಬಹುದು.

ಇನ್ನು ಶಿಷ್ಟ ಮತ್ತು ಜನಪದ ಮೂಲದ ಸಮ್ಮಿಶ್ರ ಕಲೆ ಎಂದರೆ, ಇವರೆಡೂ ಕಲೆಗಳ ಅಂಶಗಳನ್ನು ಒಳಗೊಂಡು ಇವೆರಡರ ಮಧ್ಯದಲ್ಲಿ ನಿರ್ಮಾಣಗೊಂಡ ಚಿತ್ರಗಳು. ಇವು ಈ ಕಲೆಯ ಶಿಷ್ಟ ಮತ್ತು ಜನಪದ ಚಿತ್ರಕಲೆಯ ಮಧ್ಯದ ಲಕ್ಷಣ ಹೊಂದಿವೆ. ಇಲ್ಲಿಯ ಕಲಾ ವಿನ್ಯಾಸ ಜನಪದ ಚಿತ್ರಕಲೆಯ ಅನುಕರಣೆಯಂತೆ ಇನ್ನೂ ಕೆಲವು ಸಲ ಶಿಷ್ಟಪದ ಚಿತ್ರಕಲೆಯ ಅನುಕರಣೆ ಎಂಬಂತೆ ಈ ಚಿತ್ರಗಳು ರೂಪ ಪಡೆದಿರುತ್ತವೆ. ಈ ಕಲೆಯ ರಚನಾ ವಿನ್ಯಾಸ ಮತ್ತು ವರ್ಣಗಾರಿಕೆ ಜನಪದ ಚಿತ್ರಕಲೆಯಷ್ಟು ಮುಕ್ತವೂ ಅಲ್ಲ. ಶಿಷ್ಟಪದ ಚಿತ್ರಕಲೆಯಷ್ಟು ಪ್ರಮಾಣಬದ್ಧವೂ ಅಲ್ಲ. ಹೀಗೆ ಮೌಖಿಕ ಸಂಪ್ರದಾಯ ಮತ್ತು ಲಿಖಿತ ಸಂಪ್ರದಾಯದ ಸಮ್ಮಿಶ್ರಣವಾಗಿ ಈ ಕಲೆ ಬೆಳದು ಬಂದಿದ್ದು ಈ ಕುರಿತಾಗಿಯೂ ಗಂಭೀರವಾಗಿ ಅಧ್ಯಯನ ನಡೆಯಬೇಕಾಗಿದೆ. ಇಲ್ಲಿ ಜನಪದ ಮೂಲದ ರಂಗೋಲಿ ಚಿತ್ರಕಲೆ ಮುಂದೆ ಶಿಷ್ಟಪದಕ್ಕೆ ತಿರುಗಿ ಶಿಷ್ಟಪದದಿಂದ ಮತ್ತೆ ಜನಪದ ಮೂಲಗಳ ಅಂಶಗಳನ್ನು ಹಾಗೂ ಶಿಷ್ಟಪದದ ಅಂಶಗಳನ್ನು ಒಳಗೊಂಡು ಸದ್ಯಸಮಕಾಲೀನ ಸಂದರ್ಭದಲ್ಲಿ

ಬೆಳವಣಿಗೆ ಆಗುತ್ತಿರವದನ್ನು ಕಾಣಬಹುದಾಗಿದೆ. ಇಲ್ಲಿ ಜನಪದ ಮೂಲದ ರಂಗೋಲಿ ಚಿತ್ರಕಲೆಯನ್ನು ಸ್ಥೂಲವಾಗಿ ಪರಿಚಯಸುವ ಉದ್ದೇಶವನ್ನು ಹೊಂದಲಾಗಿದೆ.

ರಂಗೋಲಿ ಚಿತ್ರಕಲೆ ಭಾರತೀಯ ಸಂಸ್ಕೃತಿಯಲ್ಲಿ ವಿವಿಧ ರಾಜ್ಯಗಳಲ್ಲಿ ವಿವಿಧ ಪ್ರದೇಶಗಳಲ್ಲಿ ಆಯಾ ಸಂಸ್ಕೃತಿಯ ಪ್ರಾದೇಶಿಕತೆಯ ಅಂಶಗಳನ್ನು ಪ್ರತಿನಿಧಿಸುವ ಒಂದು ಪ್ರಾಚೀನಕಲೆಯಾಗಿದೆ. ರಂಗೋಲಿ ಭಾರತದ ಅತ್ಯಂತ ಪ್ರಾಚೀನ ಜನಪದ ಚಿತ್ರಕಲೆ. ಬದುಕಿನ ಖುಷಿಯನ್ನು, ಸೌಭಾಗ್ಯ ಮಂಗಳಕರ ಪ್ರಸನ್ನತೆಯನ್ನು ಶುಭಸನ್ನಿವೇಶವನ್ನು ಹೇಳುವ ಲಾಲಿತ್ಯ ಪೂರ್ಣ ಕಲಾಕೌಶಲ್ಯವೇ ರಂಗೋಲಿ ಚಿತ್ರಕಲೆ. ಜನಪದ ಚಿತ್ರಕಲೆಗಳಲ್ಲೊಂದಾದ ಈ ಕಲೆಯಲ್ಲಿ ಶ್ರೇಷ್ಠ ಕಲೆಯ ಲಕ್ಷಣಗಳೆಲ್ಲವು ಇವೆ. ಇದು ಅಲಂಕಾರಿಕ ಮಾತ್ರವಲ್ಲ, ಮಂಗಳಕರವೂ ಆಗಿದೆ. ರಂಗೋಲಿ ಭಾರತದ ಹಳ್ಳಿ ಮೂಲೆಗಳಲ್ಲೆಲ್ಲ ತುಂಬಿರುವ ಸೌಂದರ್ಯಪ್ರಜ್ಞೆಯ ದ್ಯೋತಕ, ದೇವರನ್ನು ಒಲಿಸಿಕೊಳ್ಳುವ ಮಾರ್ಗ, ಈ ಕಲೆ ತಮಿಳುನಾಡಿನಲ್ಲಿ ಕೋಲಂ, ಆಂದ್ರದಲ್ಲಿ ಮುಗ್ಗಲು, ಮರಾಠಿಯಲ್ಲಿ ರಂಗೋಳಿ, ಗುಜರಾತದಲ್ಲಿ ಸಾಥ, ಬಂಗಾಳದಲ್ಲಿ ಅಲ್ಪನಾ, ಓರಿಸ್ಸಾದಲ್ಲಿ ಚಿತಾ, ರಾಜಸ್ಥಾನದಲ್ಲಿ ಮಾಂಡನಾ ಉತ್ತರಪ್ರದೇಶದಲ್ಲಿ ಸಾಂಝ್ ಎಂದು ಪ್ರಖ್ಯಾತಿ ಹೊಂದಿದೆ. ರಂಗೋಲಿ ಕಲೆಯ ಮೂಲ ಆಶಯ ಮಾತ್ರ ಎಲ್ಲ ಪ್ರದೇಶಗಳಲ್ಲಿಯೂ ಒಂದೇ ಆಗಿದೆ.


ರಂಗೋಲಿಯನ್ನು ಕರ್ನಾಟದಲ್ಲಿ ರಂಗವಾಲಿ, ರಂಗವಲ್ಲಿ, ರಂಗದಲ್ಲಿ, ರಂಗವಳಿ, ರಂಗವಾಳೆ, ರಂಗಾಲೆ, ರಂಗಾ ಹಾಕುವದು. ಮಂಡಲ ಬರೆಯುವುದು ಶೇಡಿ ಬರೆಯುವುದು, ಜೋಕೋ ಬರೆಯುವದು ಎಂದು ಹಲವು ರೀತಿಯಾಗಿ ಕರೆಯುತ್ತಾರೆ.

ರಂಗೋಲಿಯನ್ನು ಶಿವರಾಮಕಾರಂತರು ಮನೆಯ ಮುಂದೆ ಬರೆಯುವ ಚಿತ್ರ ಕೆಲಸವೆಂದು ಹೇಳಿದ್ದಾರೆ. ರಂಗೋಲಿ ಎಂಬುದು ಸಾಮಾನ್ಯವಾಗಿ ಮನೆಯ ಮುಂದೆ ಬರೆಯುವ ಚಿತ್ರಿಸುವ ಕಲೆಯೇ ದೇವರ ಜಗಲಿ, ವ್ರತಾಚರಣೆ, ಯಂತ್ರ ಮಂತ್ರಮಾಟದಲ್ಲಿ, ಸ್ಮಶಾನದಲ್ಲಿ ಹೆಣ ಹೂಳುವ ಸಂದರ್ಬದಲ್ಲಿ, ಮದುವೆ, ಮುಂಜಿವೆ, ಹಬ್ಬ-ಹರಿದಿನ, ಜಾತ್ರೆಗಳಲ್ಲಿ, ಸುಗ್ಗಿಯ ಸಂದರ್ಭದ ರಾಶಿಗಳಲ್ಲಿ ವ್ಯಾಧಿ ನಿವಾರಣೆ, ಯಜ್ಞ, ನವಗ್ರಹಶಾಂತಿ ಮುಂತಾದ ಶುಭ-ಅಶುಭ ಕಾರ್ಯಗಳಲ್ಲಿ ರಂಗೋಲಿ ಹಾಕುತ್ತಾರೆ. ಹೀಗೆ ರಂಗೋಲಿಯು ಸೀಮಿತ ಅರ್ಥದಲ್ಲಿ ನಿಲ್ಲದೆ, ವಿಶಾಲ ಅರ್ಥವನ್ನು ಹೊಂದಿರುವುದು ಗೊತ್ತಾಗುತ್ತದೆ. ಆದುದರಿಂದ ರಂಗೋಲಿಯನ್ನು ಧಾರ್ಮಿಕ ತಾಂತ್ರಿಕ ಹಿನ್ನಲೆಯ ಅಲಂಕಾರಿಕ ಕಲೆಯಂದು ಹೇಳಬಹುದಾಗಿದೆ.

ಇಲ್ಲಿ ರಂಗವೆಂದರೆ ಬಣ್ಣ ವಲ್ಲಿ ಎಂದರೆ ಬಳ್ಳಿ ಎಂದರ್ಥ. ಬಣ್ಣದ ಸಾಲು ರಂಗೋಲಿ ಪುಡಿ, ಬಣ್ಣಗಳಿಂದ ರಚಿಸಿದ ಬಳ್ಳಿ ಚಿತ್ರವೇ ರಂಗೋಲಿ. ಬಣ್ಣದ ಗೆರೆಗಳ ಸಮೂಹವೆಂದು ಬಣ್ಣಗಳ ವೃಂದವೆಂದೂ ಇದನ್ನು ಅರ್ಥೈಸಬಹುದು. ರಂಗೋಲಿಯು ರಂಗಬಲಿಯೆಂದೂ ಪ್ರಸಿದ್ಧವಾಗಿದೆ.

**ರಂಗೋಲಿಯ ಪ್ರಾಚೀನತೆ:**


ಮಾನವ ಬದುಕಿನಲ್ಲಿ ಚಿತ್ರಕಲೆಯ ಪ್ರವೇಶದೊಂದಿಗೆ ರಂಗೋಲಿ ಪ್ರವೇಶ ಪಡೆದಿದೆ. ಸಂತೋಷಕುಮಾರ ಗುಲ್ವಾಡಿಯವರು ರಂಗೋಲಿಯ ಪ್ರಾಚೀನತೆಯನ್ನು ಸುಮಾರು ೫೦೦೦ ವರ್ಷಗಳಷ್ಟು ಹಿಂದೆ ಎಳೆದು, ಪರಿಚಯಾತ್ಮಕ ಲೇಖನ ಬರೆದಿದ್ದಾರೆ. ಆದರೆ ಅದಕ್ಕಾಗಿ ಆಧಾರ ಸೂಚಿಗಳನ್ನು ಅವರು ಕೊಟ್ಟಿಲ್ಲ. ಆದಿ ಮಾನವನು ಗವಿ, ಕಲ್ಲುಬಂಡೆಗಳ ಮೇಲೆ ಚಿತ್ರಿಸಿದ್ದನ್ನು ನೋಡಿದರೆ, ರಂಗೋಲಿಯು ಇತಿಹಾಸಪೂರ್ವದ ಕಾಲಕ್ಕೆ ಹೋಗುತ್ತದೆ. ಜನಪದರ ಬಹುಪಾಲು ಕಲೆಗಳಿಗೆ ಲಿಖಿತ ಆಧಾರ ಗುರುತಿಸವುದು ಕಷ್ಟ ಸಾಧ್ಯವಾಗಿದೆ.



ಬಾಣ (ಕ್ರಿ.ಶ. ೬೦೬-೬೪೮) ತನ್ನ ಕಾದಂಬರಿಯಲ್ಲಿ ಸೂತಿಕಾಗೃಹದ ಮುಂದೆ ರಂಗೋಲಿ ಹಾಕುವುದನ್ನು ವಿವರಿಸಿದ್ದಾನೆ. ಇಲ್ಲಿ ಕುಲಾಚಾರ ಬಲ್ಲ ಮಗ ಅಥವಾ ಮಗಳು ಯಾರೋ ಒಬ್ಬರು ಬಾಗಿಲ ಎರಡು ಬದಿಯಲ್ಲಿ ಸೆಗಣಿಯಿಂದ ಚೌಕಾಕಾರ ಸಾರಿಸಿ, ವಿವಿಧ ಪ್ರಕಾರದ ಕ್ಯಾವಿ ಮುಂತಾದ ಸುಂದರ ಬಣ್ಣಗಳಿಂದ ಮನೋಹರವಾದ ಹತ್ತಿ ಹೂವಿನ ಕಣಗಳಿಂದ ಆ ಚೌಕಗಳನ್ನು ಚಿತ್ರಿಸುತ್ತಿದ್ದರು. ಮತ್ತು ಹೂವಿನ ಕೇಸರ ಸಂಯೋಗದಿಂದ ಅವುಗಳಿಗೆ ಕೆಂಪು ಕೆಂಪಾದ ಬಣ್ಣ ಮಾಡುತ್ತಿದ್ದರು. ಸೆಗಣಿಯಿಂದ ಸಾರಿಸಿದ ಚೌಕದಲ್ಲಿ ಸ್ವಸ್ತಿಕಗಳನ್ನು ತೆಗೆಯುತ್ತಿದ್ದರೆಂದು ವರ್ಣಿಸಲಾಗಿದೆ. ಈ ವಿವರಗಳನ್ನು ನೋಡಿದರೆ, ಪ್ರಾಚೀನ ಕಾಲದಿಂದಲೂ ಮನೆಯ ಮುಂದೆ ರಂಗೋಲಿ ಶುಭದ ಆಶಯದ ಹಿನ್ನಲೆಯಲ್ಲಿ ಮತ್ತು ಸೂತಿಕಾ ಗೃಹದ ಮುಂದೆ ಹಾಕುವ ರಂಗೋಲಿ ಬಗೆ ನೋಡಿದರೆ ಜನಪದರ ದೇವರು-ದೈವದಂಥ ನಂಬಿಕೆಗಳು ಇಲ್ಲಿ ಕಾರಣವಾಗಿವೆಯೆನ್ನಬೇಕು.

ವಾತ್ಸಾಯನನ ೬೪ ಕಲೆಗಳಲ್ಲಿ ತಂಡುಲಬಲಿಕುಸುಮವಿಕಾರವು ಆರ

ನೆಯ ಕಲೆಯಾಗಿದ್ದು, ಈ ಕಲೆಯ ಬಗೆಗೆ ವಿದ್ವಾಂಸರು ಚರ್ಚಿಸಿದ್ದಾರೆ. ಯಶೋಧರ ಪಂಡಿತನು ಇದರ ಅರ್ಥವನ್ನು ಸರಸ್ವತಿ, ಕಾಮದೇವ ಮುಂತಾದ ಚಿತ್ರಗಳನ್ನು ದೇವಾಲಯಗಳಲ್ಲಿ ಅಕ್ಕಿಯಿಂದ ರಚಿಸುತ್ತಿದ್ದ ಸುಂದರವಾದ ಕಲಾಕೃತಿಗಳು ಎನ್ನುತ್ತಾನೆ. ಅನಿಲ ಬರನ್ ಗಂಗೂಲಿಯವರು ತಂಡುಲಬಲಿಕುಸುಮವಿಕಾರವನ್ನು ಮೂರು ರೀತಿಯಲ್ಲಿ ವಿಭಾಗಿಸಿ ಅರ್ಥ ಮಾಡುತ್ತಾರೆ. ಅ) ತುಂಡಲವಿಕಾರ, ಬ) ಬಲಿವಿಕಾರ ಕ)ಕುಸುಮ ವಿಕಾರ. ತುಂಡುಲವಿಕಾರವೆಂದರೆ ಅಕ್ಕಿಯಿಂದ ರಚಿಸಿದ ರಂಗೋಲಿ, ಬಲಿವಿಕಾರವೆಂದರೆ ದೇವತಾನೈವೇಧ್ಯವನ್ನು ಅಣಿಗೊಳಿಸುವ ವಿಧಾನ. ಕುಸುಮವಿಕಾರವು ಹೂಗಳಿಂದ ರಂಗೋಲಿ ರೂಪವನ್ನು ಬದಲಿಸಿ, ಬೇರೆ ರೂಪ ಕೊಡುವುದು ಎಂದು ತಿಳಿಸುತ್ತಾರೆ. ಹೂಗಳಿಂದ ತಯಾರಿಸಿದ ಬಣ್ಣಗಳಿಂದ ಕೂಡಿದ ಅಕ್ಕಿಹಿಟ್ಟಿನ ರಂಗೋಲಿ ಎಂದು ಇದಕ್ಕೆ ಅರ್ಥವಮಾಡಬಹುದಾಗಿದೆ. ವಾತ್ಸಾಯನನು ಪಟ್ಟಿ ಮಾಡಿರುವ ೬೪ ಕಲೆಗಳಲ್ಲಿ ರಂಗೋಲಿ ಕುರಿತ ಬೇರೆ ಹೆಸರಿನ ಕಲೆಯೊಂದು ಇಲ್ಲದಿರುವುದೂ ಈ ಹೆಸರು ರಂಗೋಲಿಯನ್ನೇ



ಸೂಚಿಸುತ್ತದೆಯೆಂಬ ಭಾವನೆಗೆ ಅವಕಾಶ ನೀಡುತ್ತದೆ. ಕಾಮಶಾಸ್ತ್ರದ ತೆಲಗು ವ್ಯಾಖ್ಯಾನಕಾರರಾದ ಮೆಡಿಚರ್ಲ ಆಂಜನೇಯ ಶಾಸ್ತ್ರಿಯವರು ರಂಗೋಲಿ ಇದು ಚಿತ್ರಕಲೆಯಷ್ಟೇ ಪ್ರಾಚೀನವಾದುದು. ಮಂತ್ರಶಾಸ್ತ್ರ, ತಂತ್ರಶಾಸ್ತ್ರ ಮತ್ತು ಆಗಮಗಳಲ್ಲಿ ಉಕ್ತವಾಗಿರುವ ಅನೇಕ ಕಾಮ್ಯಕರ್ಮಗಳಲ್ಲಿ ದೇವತಾ ವಿಗ್ರಹ ಅಥವಾ ಕಲಶವನ್ನು ಸ್ಥಾಪಿಸುವೆಡೆಯಲ್ಲಿ ಬಣ್ಣ ಬಣ್ಣದ ಧಾನ್ಯಗಳಿಂದ ಅಥವಾ ಬಣ್ಣ ಹಚ್ಚಿದ ಅಕ್ಕಿಯಿಂದ ಕಲಾತ್ಮಕವಾದ ವಿವಿಧ ಮಂಡಲಗಳನ್ನು ಚಿತ್ರಿಸಿರುವುದುಂಟು. ಬಣ್ಣದ ಹೂಗಳ ರಸದಿಂದ ಅಕ್ಕಿಗೆ ಬಣ್ಣಕೊಟ್ಟು, ಅದರಿಂದ ದೇವತಾಸ್ವರೂಪಗಳನ್ನು ರಚಿಸಿ ಪೂಜಿಸುವ ವಾಡಿಕೆಯೂ ಉಂಟು. ರಂಗವಲ್ಲಿ ಕಲೆಗೆ ಇದೇ ಮೂಲ ಎಂದಿದ್ದಾರೆ. ಕಾಳಿದಾಸನ ಕಾಲದಲ್ಲಿ ಈ ಕಲೆ ಪ್ರಚಲಿತದಲ್ಲಿತ್ತೆಂಬುದು ಗೊತ್ತಾಗುತ್ತದೆ. ಕಾಳಿದಾಸನಿಗಿಂತ ವಾತ್ಸಾಯನನು ಹಿಂದೆ ಇದ್ದನೆಂಬ ವಿದ್ವಾಂಸರ ವಾದವನ್ನು ಗಮನಿಸಿದರೆ, ಸದ್ಯ ವಾತ್ಸಾಯನೊಕ್ತಿ, ರಂಗೋಲಿ ವಿವರವು ಕ್ರಿಪೂ.ಎರಡರ ಕಾಲಾವಧಿಯದೆಂದು ಊಹಿಸಲು ಸಾಧ್ಯವಿದೆ.

**ರಂಗೋಲಿ ಚಿತ್ರಕಲೆ ಕುರಿತ ಕಥೆ, ಐತಿಹ್ಯ:**

ಪ್ರಾಚೀನ ಪರಂಪರೆಯನ್ನು ಹೊಂದಿದ ರಂಗೋಲಿಯನ್ನು ಕುರಿತು ಹಲವಾರು, ಐತಿಹ್ಯಗಳಿದ್ದು, ಇವು ರಂಗೋಲಿಯ ಪ್ರಾಚೀನತೆಯನ್ನು ಸೂಚಿಸುತ್ತವೆ. ಇವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸಂಗ್ರಹಿಸಿ ವಿವರಿಸಲಾಗಿದೆ.

ರಾಮಾಯಣ ಕಥೆಯೊಂದರಲ್ಲಿ ಬರುವ ವಿವರ ಹೀಗಿದೆ: ಸೀತೆ, ರಾಮ, ಲಕ್ಷ್ಮಣರು ಹದಿನಾಲ್ಕು ವರ್ಷ ವನವಾಸಕ್ಕೆ ಹೋದಾಗ ಒಮ್ಮೆ ಪರ್ಣಕುಟೀರದಲ್ಲಿ ನಡೆದ ಘಟನೆಯ ಪ್ರಸ್ತಾಪ ಬರುತ್ತದೆ. ರಾಮ, ಸೀತೆಯರು ಆರಾಮವಾಗಿ ಕುಳಿತಿರುವ ಸಂದರ್ಭದಲ್ಲಿ ಬಸುರಿಯಾದ ಸೀತೆಗೆ ಏನು ಬಯಕೆಯಾಗಿದೆ. ಹೇಳು ಎಂದು ರಾಮ ಕೇಳಿದನಂತೆ. ಸೀತೆ ಅತ್ತ ಇತ್ತ ನೋಡುತ್ತಿರಲು ಬಂಗಾರ ವರ್ಣದ ಮಾಯಾಜಿಂಕೆಯೊಂದು ಕಂಡಿತು. ಆ ಸುಂದರವಾದ ಜಿಂಕೆಯನ್ನು ತನಗೆ ತಂದುಕೊಡು ಎಂದು ತನ್ನ ಮನದ ಇಂಗಿತವನ್ನು ರಾಮನಲ್ಲಿ ಪ್ರಕಟಪಡಿಸುತ್ತಾಳೆ. ರಾಮ ಆ ಜಿಂಕೆಯನ್ನು ತರಲು ಬಿಲ್ಲು ಬಾಣಗಳನ್ನು ಹೆಗಲಿಗೇರಿಸಿಕೊಂಡು ಜಿಂಕೆಯನ್ನು ಬೆನ್ನಟ್ಟಿ ಹೋಗುತ್ತಾನೆ. ಸ್ವಲ್ಪ ಹೊತ್ತಿನಲ್ಲಿಯೇ



ಹಾ ಲಕ್ಷ್ಮಣ ಹಾ ಸೀತೆ ಎಂಬ ಧ್ವನಿ ಕೇಳಿಬರುತ್ತದೆ. ಇದರಿಂದ ಸೀತೆ ಗಾಬರಿಯಾಗಿ, ಲಕ್ಷ್ಮಣನನ್ನು ಕರೆದು ರಾಮನಿಗೆ ಏನೋ ತೊಂದರೆಯಾಗಿದೆ. ನೀನು ಹೋಗಿ ಅವರನ್ನು ಸಂರಕ್ಷಿಸಿಕೊಂಡು ಬಾ ಎನ್ನುತ್ತಾಳೆ. ಸೀತೆಯ ರಕ್ಷಣೆಗಾಗಿ ಲಕ್ಷ್ಮಣ (ಮನೆಯ) ಪರ್ಣಕುಟೀರದ ಮುಂದೆ ರಂಗೋಲಿಯ ರೇಖೆಯನ್ನು, (ಗೆರೆಯನ್ನು) ಹಾಕಿ, ಈ ಗೆರೆಯನ್ನು ದಾಟಿ ಹೋಗಬಾರದು. ನಾವು ಬರುವವರೆಗೂ ಇದನ್ನು ಪಾಲಿಸಬೇಕು ಎಂದು ಹೇಳಿ ಹೋಗುತ್ತಾನೆ. ಈ ಸಂದರ್ಭದಲ್ಲಿಯೇ ಮೊದಲೇ ಹೊಂಚು ಹಾಕಿ ಕುಳಿತಿದ್ದ ರಾವಣ ಭಿಕ್ಷುಕನ ವೇಷದಿಂದ ಅಲ್ಲಿಗೆ ಬಂದು, ಭಿಕ್ಷೆ ಹಾಕಲು ಸೀತೆಗೆ ಕೇಳಿಕೊಳ್ಳುತ್ತಾನೆ. ಸೀತೆ ಭಿಕ್ಷೆ ನೀಡಲು ಲಕ್ಷ್ಮಣ ಹಾಕಿದ ಗೆರೆಯನ್ನು ಮರೆತು ದಾಟಿ ಬರುತ್ತಾಳೆ. ಆಗ ರಾವಣ ಸೀತೆಯನ್ನು ಹೊತ್ತುಕೊಂಡು ಲಂಕೆಗೆ ಹೋಗುತ್ತಾನೆ. ಲಕ್ಷ್ಮಣ ಹಾಕಿದ ಗೆರೆಯನ್ನು ಸೀತೆ ದಾಟಿದುದಕ್ಕೆ ಆಕೆಗೆ ತೊಂದರೆಯಾಯಿತೆಂಬ ಕಥೆ ಕರ್ನಾಟಕದುದ್ದಕ್ಕೂ ರೂಢಿಯಲ್ಲಿದೆ.

ಹೆಣ್ಣು, ರಂಗೋಲಿಯನ್ನು ದಾಟಬಾರದೆಂಬ ನಂಬಿಕೆ ಈಗಲೂ ಜನಪದರಲ್ಲಿ ಉಳಿದುಕೊಂಡು ಬಂದಿದೆ. ಲಕ್ಷ್ಮಣ ಹಾಕಿದ ರೇಖೆಗೆ ಲಕ್ಷ್ಮಣ ರೇಖೆ ಎಂಬ ಹೆಸರೂ ಜನಪದರಲ್ಲಿ ಪ್ರಚಲಿತದಲ್ಲಿದೆ. ಅದರ ಪ್ರಯುಕ್ತ ಬಾಗಿಲ

ಮುಂದೆ ರಂಗೋಲಿ ಹಾಕುವುದಾಗಿ ಹೇಳುತ್ತಾರೆ.

೨. ಅರಮನೆಯಲ್ಲಿ ಮುತ್ತು ಕಟ್ಟಿದ ಬಾಗಿಲ ಬಳಿ, ರತ್ನಖಚಿತವಾದ ಹೆಬ್ಬಾಗಿಲ ಹತ್ತಿರ ಸೊಗಸಾದ ರಂಗೋಲಿ ಹಾಕಿಸಿ ಆ ರಂಗೋಲಿಯನ್ನು ಕಂಡು ಜನಕಮಹಾರಾಜನು ಸಂತೋಷಪಡುತ್ತಿದ್ದ ಇನ್ನೊಂದು ಸಂಗತಿ ರಾಮಾಯಣದಲ್ಲಿದೆ.

೩. ರಂಗೋಲಿಯ ಕುರಿತು ಕೆಲವು ಕಥೆಗಳು ಮಹಾಭಾರತದಲ್ಲಿಯೂ ಸಿಗುತ್ತವೆ. ಮದುವೆಯಾದ ಹೆಣ್ಣುಮಕ್ಕಳು ಎಲ್ಲರೂ ರಂಗವಲ್ಲಿ ಹಾಕಬೇಕು. ಹಾಕದೆ ಇದ್ದವರನ್ನು ಯಮ ಹೆಡಮುರಿಗೆ ಕಟ್ಟಿ ಎಳೆದುಕೊಂಡು ಬನ್ನಿರಿ ಎಂದು ತನ್ನ ಧೂತರಿಗೆ ಒಮ್ಮೆ ಆಜ್ಞೆ ಮಾಡಿದನಂತೆ. ಈ ವಿಷಯ ಕೃಷ್ಣನಿಗೆ ಗೊತ್ತಾಯಿತಂತೆ ಕೃಷ್ಣನ ತಂಗಿ ಮದುವೆಯಾದರೂ ರಂಗೋಲಿ ಹಾಕುತ್ತಿರಲಿಲ್ಲವಂತೆ. ಈ ವಿಷಯ ಕೃಷ್ಣನಿಗೆ ಗೊತ್ತಾಗಿತ್ತು. ಇನ್ನು ತಂಗಿಯನ್ನು ಯಮನಲ್ಲಿಗೆ ಒಯ್ಯುತ್ತಾರೆ. ಹೇಗಾದರೂ ಮಾಡಿ ಅವಳ ಸಂರಕ್ಷಣೆಯನ್ನು ಮಾಡಲೇಬೇಕೆಂದು ಯಮದೂತರು ಬರುವದಕ್ಕಿಂತ ಮೊದಲೇ ಸುಭದ್ರೆಯಿದ್ದಲ್ಲಿಗೆ ಬರುತ್ತಾನೆ. ಸುಭದ್ರೆಗೆ ರಂಗೋಲಿ ಹಾಕುವುದನ್ನು ತಿಳಿಸುತ್ತಾನೆ. ಆಗ ಸುಭದ್ರೆ ಐದು ಪ್ರಕಾರ ಮುತ್ತು, ಪವಳ, ವಜ್ರ, ವೈಢೂರ್ಯ ಹಾಕಿ ಕುಟ್ಟಿ ಬೀಸಿ, ರಂಗವಲ್ಲಿಯ ಪುಡಿ ತಯಾರಿಸಿ ಐದು ವರ್ಷದ ರಂಗವಲ್ಲಿಯನ್ನು ದಿನಾಲು ಐದರಂತೆ ಹಾಕಿ, ಐದು ದಿವಸದಲ್ಲಿ ಮುಗಿಸಿದಳಂತೆ ಮುಗಿಸುವಾಗ ದಾನ ಕೊಡಬೇಕಂತೆ. ಅದಕ್ಕಾಗಿ ಕೃಷ್ಣನು ಅಣ್ಣನಾಗಿ, ತಮ್ಮನಾಗಿ, ತಂದೆಯಾಗಿ, ಬ್ರಾಹ್ಮಣನಾಗಿ, ದೇವರಾಗಿ ಹೀಗೆ ಐದು ಜನ ತಾನೇ ಆಗಿ ಎಲ್ಲರಿಗೂ ಕೊಡುವ ಕಾಣಿಕೆಯನ್ನು ತಾನೇ ತೆಗೆದುಕೊಂಡನಂತೆ. ಯಮಧೂತರು ಬರುವುದರೊಳಗೆ ಎಲ್ಲ ಕೆಲಸವನ್ನು ಮಾಡಿಬಿಟ್ಟಿದ್ದರಿಂದ ಅವಳನ್ನು ಯಮಧೂತರು ಒಯ್ಯದೆ ಹಾಗೆ ಹೋದರಂತೆ. ಆದುದರಿಂದ ಮದುವೆಯಾದ ಬ್ರಾಹ್ಮಣ ಹೆಣ್ಣುಮಕ್ಕಳು ರಂಗೋಲಿ ಹಾಕುತ್ತಾರೆಂಬ ಈ ಕಥೆಯು ಬ್ರಾಹ್ಮಣರಲ್ಲಿ ಪ್ರಚಲಿತದಲ್ಲಿದೆ.

೪. ಇನ್ನೊಂದು ಕಥೆ ಈ ರೀತಿಯಾಗಿದೆ: ಶ್ರೀ ಕೃಷ್ಣನಿಗೆ ಅನೇಕಜನ ಹೆಂಡಂದಿರು. ಅವರಲ್ಲಿ ಕೆಲವು ಗೋಪಿಕಾಸ್ತ್ರೀಯರು ಕೃಷ್ಣನಿಗೆ ಪ್ರಿಯವಾದ ರಂಗೋಲಿಯನ್ನು ಗೌಪ್ಯವಾಗಿ ಹಾಕಿ, ಅವನನ್ನು ತಮ್ಮ ಮನೆಗೆ ಕರೆದು ಸಂತೃಪ್ತಿಗೊಳಿಸುತ್ತಿದ್ದರಂತೆ. ಇನ್ನು ಕೆಲವರು ತಮ್ಮ ವಿರಹದ ವೇಳೆಯನ್ನು ಕಳೆಯುವುದಕ್ಕಾಗಿಯೇ ರಂಗೋಲಿ ಹಾಕುತ್ತಿದ್ದರಂತೆ.

೫. ಕೃಷ್ಣ ತನ್ನ ಮನೆಗೆ ಬರುವನೆಂಬುದನ್ನು ಕೇಳಿ, ವಿದುರನು ಆನಂದಭರಿತನಾಗಿ ತನ್ನ ಮನೆ ಸುತ್ತ ಮುತ್ತಲಿರುವ ಕೆಂಪು. ಹಳದಿ ಮೊದಲಾದ ಬಣ್ಣದ ಕಲ್ಲುಗಳನ್ನು ಆರಿಸಿ ತಂದು, ಪುಡಿಮಾಡಿ, ಆ ಪುಡಿಗಳಿಂದ ಅಂಗಳದಲ್ಲಿ

ಅಂದವಾದ ನಮೂನೆಗಳನ್ನು ರಚಿಸಿ, ಆ ಜಾಗವನ್ನು ಸುಂದರಗೊಳಿಸಿ ಶ್ರೀ ಕೃಷ್ಣಪರಮಾತ್ಮನನ್ನು ಬರಮಾಡಿಕೊಳ್ಳುತ್ತಾನೆ.

೬. ದೀಪಾವಳಿ ಸಂದರ್ಬದಲ್ಲಿ ಬಲಿಚಕ್ರವರ್ತಿ ಕುರುಹಾಗಿ ರಂಗೋಲಿಯನ್ನು ಹಾಕಲಾಗುತ್ತದೆ.

ಕರ್ನಾಟಕದಲ್ಲಿ ಬಲಿಚಕ್ರವರ್ತಿಯ ಕುರುಹಾಗಿ ರಂಗೋಲಿ ಬರೆಯುವ ಕಲೆ ಪ್ರಾರಂಭವಾಗಿರುವ ಕುರಿತು ಜನಪದರಲ್ಲಿ ಕಥೆಯೊಂದು ಹೀಗಿದೆ: ಬಲಿ ಚಕ್ರವರ್ತಿ ಧರ್ಮಿಷ್ಠನಾದ, ನಿಷ್ಠಾವಂತನಾದ ರಾಜ. ಇವನ ಆಳ್ವಿಕೆಯಲ್ಲಿ ಭೂಮಿ ಎಷ್ಟು ಸಂಪದ್ಧರಿತವಾಗಿತ್ತೆಂದರೆ, ಹಾಲಿನ ಹೊಳೆ ಹರಿಯುತ್ತಿತ್ತಂತೆ; ಆದರೂ ಅವನು ರಾಕ್ಷಸ; ಸಂಹಾರವಾಗಲೇಬೇಕು. ಅದಕ್ಕಾಗಿಯೇ ಅವತರಿಸಿದ್ದಾನೆ ಮಹಾವಿಷ್ಣು ವಾಮನನ ಅವತಾರ ತಾಳಿ, ಬಲಿಚಕ್ರವರ್ತಿ ನಡೆಸುತ್ತಿದ್ದ ಯಾಗವನ್ನು ಸಮೀಪಿಸಿ ( ಆ ಕಾಲದಲ್ಲಿ ಯಜ್ಞ ಯಾಗಗಳಲ್ಲಿ ತೊಡಗಿದ್ದ ರಾಜರುಗಳು ಯಾರು ಬಂದು ಏನು ಕೇಳಿದರು ಇಲ್ಲವೆನ್ನುತ್ತಿರಲಿಲ್ಲವಂತೆ), ಮೂರಡಿ ನೆಲ ಕೇಳಿದ. ಬಲಿ ಚಕ್ರವರ್ತಿ ಕೊಡುತ್ತೇನೆ ಎಂದ. ಆಗ ಕೂಡಲೇ ವಾಮನನಾಗಿದ್ದವನು ತ್ರಿವಿಕ್ರಮನಾಗಿ ಬೆಳೆದು, ಒಂದು ಪಾದದಿಂದ ಭೂಮಿಯನ್ನು ಇನ್ನೊಂದು ಪಾದದಿಂದ ಆಕಾಶವನ್ನು ಅಳೆದು, ಮೂರನೆಯ ಪಾದವನ್ನು ಎಲ್ಲಿಡಲಿ ಎಂದ. ತನ್ನ ತಲೆಯನ್ನೇ ಒಡ್ಡಿದ ಬಲಿ ಚಕ್ರವರ್ತಿಯ ತಲೆಯ ಮೇಲೆ ಆ ಪಾದವನ್ನಿಟ್ಟು ಅವನನ್ನು ಪಾತಳಕ್ಕೆ ತುಳಿದ ತ್ರಿವಿಕ್ರಮ, ಅನಂತರ ಅವನ ಭಕ್ತಿಗೆ ಮೆಚ್ಚಿ ಅವನ ಮನೆಯ ಬಾಗಿಲು ಕಾಯುವದಾಗಿ ಹೇಳುತ್ತಾನೆ. ಈಗಲೂ ಕಾಯುತ್ತಿದ್ದಾನೆಂಬ ಭಾವನೆಯಿದೆ. ಈ ಚಕ್ರವರ್ತಿಯು ತನ್ನ ರಾಜ್ಯವನ್ನು ಪ್ರಜೆಗಳನ್ನೂ ನೋಡಲು ವರ್ಷಕ್ಕೊಮ್ಮೆ ಬಲಿ ಪಾಡ್ಯಮಿಯಂದು ಬರುತ್ತಾನೆಂಬ ನಂಬಿಕೆಯಿದೆ. ಅಂದು ಜನರು ಮನೆಯಮುಂದೆ ಸಗಣಿಯಿಂದ ಬಲಿಚಕ್ರವರ್ತಿಯನ್ನು ಬರೆದು, ಅದನ್ನು ಹಳದಿ ಹೂವಿನಿಂದ ಸಾಮಾನ್ಯವಾಗಿ ಅಲಂಕರಿಸುತ್ತಾರೆ. ಸಗಣಿಯಿಂದಲೇ ತೆರಕನನ್ನು ಮಾಡಿ, ಅದನ್ನು ಹೂವಿನಿಂದ ಅಲಂಕರಿಸಿ, ಹೊಸ್ತಿಲದ ಎಡಬಲದಲ್ಲಿ ಇಡುತ್ತಾರೆ. ಅವು ದ್ವಾರಪಾಲಕರೆಂದು ಪ್ರತೀತಿಯಿದೆ. ಸಗಣಿಯಿಂದ ಕೋಟೆಯನ್ನು ಕಟ್ಟಿ ಅದನ್ನು ಹಳದಿ ಹೂವಿನಿಂದ ಅಲಂಕರಿಸಿ ಅದರ ಸುತ್ತಲೂ ಹಾಲನ್ನು ಹರಿಸುತ್ತಾರೆ. ಈ ಕಥೆಯ ಹಿನ್ನೆಲೆಯಲ್ಲಿ ಸಮೃದ್ಧಿಯ ಸಂಕೇತವಾಗಿ ರಂಗೋಲಿ ಹಾಕಲು ಪ್ರಾರಂಭಿಸಿರುವುದು ತಿಳಿದುಬರುತ್ತದೆ. ಉತ್ತರ ಕನ್ನಡದ ಮಲೆನಾಡಿನಲ್ಲಿ ದಕ್ಷಿಣ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ. ಶಿವಮೊಗ್ಗ ಮೊದಲಾದ ಪ್ರದೇಶದಲ್ಲಿ ಬಲಿ ಚಕ್ರವರ್ತಿಯ ಆಗಮನಕ್ಕಾಗಿ ರಂಗೋಲಿಯನ್ನು ವಿಶೇಷವಾಗಿ ಹಾಕಲಾಗುತ್ತಿದೆ. ಈ ವಿವರಣೆಗಳಿಂದ ರಂಗೋಲಿ ರಾಮಾಯಣ ಮಹಾಭಾರತದಷ್ಟು ಪ್ರಾಚೀನತೆ

ಹೊಂದಿರುವುದು ಗೊತ್ತಾಗುತ್ತದೆ.

೧೯೩೩ರಿಂದಲೇ ಪ್ರಾರಂಭವಾದ ರಂಗೋಲಿಯ ಅಧ್ಯಯನವನ್ನು ಕುರಿತು ಜೆ.ಜೆಟಲೀ, ಡಿ.ವಿ.ಹಾಲಭಾವಿ, ಶಾಂತಾದೇವಿ ಮಾಳವಾಡ, ಬಿ.ಪಿ.ಬಾಯಿರಿ, ಮ. ಶ್ರೀಧರಮೂರ್ತಿ, ನಂ. ತಪಸ್ವೀಕುಮಾರ, ಎಸ್.ಕೆ. ಹೂಗಾರ, ಪುಷ್ಪಾವತಮ್ಮ, ಆನಂದ ಪಾಟೀಲ, ಸಣ್ಣಕ್ಕಿ, ರಂಗಾರೆಡ್ಡಿ ಕೋಡಿರಾಂಪುರ, ಎಸ್.ಕೆ. ರಾಮಚಂದ್ರರಾವ್, ಎಂ.ಪಿ. ಸುಶೀಲ, ಬಿ.ವ್ಹಿ.ಕೆ.ಶಾಸ್ತ್ರಿ ಪಿ.ಕೆ.ಖಂಡೋಬಾ, ಡಾ. ಎಸ್.ಸಿ.ಪಾಟೀಲ, ಸಂತೋಷಕುಮಾರ ಗುಲ್ವಾಡಿ ಮೊದಲಾದವರು ಬಿಡಿ ಬಿಡಿಯಾಗಿ ಕಾರ್ಯ ಕೈಕೊಂಡಿದ್ದಾರೆ. ಇದಲ್ಲದೆ ಸುಧಾ, ತರಂಗ, ಕರ್ಮವೀರ, ವಾರಪತ್ರಿಕೆ, ಕಸ್ತೂರಿ, ಜ್ಞಾನಗಂಗೋತ್ರಿ, ಜಾನಪದ ವಿಶ್ವಕೋಶಗಳಲ್ಲಿಯೂ ರಂಗೋಲಿಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇವೆಲ್ಲ ಲೇಖನಗಳು ಸ್ಥೂಲವಾಗಿ ರಂಗೋಲಿಯ ಪರಿಚಯ ಮಾಡಿಕೊಡುತ್ತವೆ.

**ರಂಗೋಲಿ ಚಿತ್ರಕಲೆ ಕುರಿತು ನಂಬಿಕೆಗಳು:**

ರಂಗೋಲಿಯನ್ನು ಕುರಿತು ಹಲವಾರು ನಂಬಿಕೆಗಳಿದ್ದು, ಅವುಗಳನ್ನು ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ.

೧. ತಿಥಿಯ ದಿನ ಮನೆಯಲ್ಲಿ ರಂಗೋಲಿಯನ್ನು ಬಿಡಬಾರದು.

೨. ಇದ್ದಿಲಿಯಿಂದ ರಂಗೋಲಿ ಹಾಕಬಾರದು.

೩. ಮನೆಯಲ್ಲಿ ಅಶುಭಕಾರ್ಯ ನಡೆದಾಗ ರಂಗೋಲಿ ಹಾಕಬಾರದು.

೪. ಮನೆಯಲ್ಲಿ ಪಿತೃಪಕ್ಷದ ಹಿರಿಯರ ಹಬ್ಬದ ದಿನ ರಂಗೋಲಿ ಹಾಕುವುದಿಲ್ಲ. ಅಂದು ಹಿರಿಯರನ್ನು ಆಹ್ವಾನಿಸುತ್ತಾರೆ. ರಂಗೋಲಿ ಹಾಕಿದರೆ ಹಿರಿಯರ ಆತ್ಮ ರಂಗೋಲಿ ದಾಟಿ ಬರಲಾರದು.

೫. ನೀರಿನಿಂದ ರಂಗೋಲಿ ಹಾಕಿದರೆ ಕಷ್ಟ ಬರುತ್ತದೆ.

೬. ಸುಣ್ಣದಿಂದ ರಂಗೋಲಿಹಾಕಿದರೆ ಸಾಲ ಹೆಚ್ಚಾಗುತ್ತದೆ.

೭. ಕಪ್ಪು ಮಸಿ,/ಬೂದಿಯಿಂದ ರಂಗೋಲಿ ಹಾಕಿದರೆ ದೆವ್ವ ಪ್ರೇತಗಳನ್ನು ಬರಮಾಡಿಕೊಂಡಂತೆ, ಎಂಬ ನಂಬುಗೆ ಇದೆ.

೮. ಹೊಸ್ತಿಲು ಬರೆಯುವಾಗ ಬೆಕ್ಕು ಒಳಗೆ ಮತ್ತು ಹೊರಗೆ ದಾಟಬಾರದು.

೯. ಹೊಸ್ತಿಲ ಬರೆಯುವಾಗ ಬಾಗಿಲೊಳಗೆ ನಿಂತು ಒಳಗಿನಿಂದ ಹೊರಮುಖವಾಗಿ ಎಳೆ ಎಳೆಯಬೇಕು. ಒಳಮುಖವಾಗಿ ಎಳೆದರೆ ಮಗಳು ಗಂಡನ ಮನೆಯಿಂದ ತವರಿಗೆ ಓಡಿ ಬರುತ್ತಾಳೆ.

೧೦. ಹೊಸ್ತಿಲು ತುಂಬ ರಂಗೋಲಿ ಎಳೆಯಬಾರದು, ಬರೆದರೆ ಹೆಣ್ಣು ಹುಟ್ಟುತ್ತವೆ.

೧೧. ದೆವ್ವ ಬಿಡಿಸುವಾಗ ಇದ್ದಿಲಿನಿಂದ ರಂಗೋಲಿ ಬರೆಯಬೇಕು.

೧೨. ಮುಂಜಾನೆ ಮತ್ತು ಸಾಯಂಕಾಲ ಹಾಕಿದರೆ ಅನಿಷ್ಟಗಳು ಮನೆಯಲ್ಲಿ ಬರುವುದಿಲ್ಲ.

೧೩. ಅಡಿಗೆ ಮಾಡುವುದಕ್ಕಿಂತ ಮೊದಲು ಒಲೆಯ ಮುಂದೆ ರಂಗೋಲಿ ಹಾಕಿಯೇ ಅಡಿಗೆ ಮಾಡಬೇಕು.

೧೪. ಭೂತ ಬಿಡಿಸುವಾಗ ಮಂಡಲದ ರಂಗೋಲಿ ಹಾಕಲೇಬೇಕು. ಇಲ್ಲದಿದ್ದರೆ ಭೂತ ಬಿಡಿಸುವವನನ್ನು ಭೂತಗಳು ಸಾಯಿಸುತ್ತವೆ.

೧೫. ನಾಗರಪಂಚಮಿಯಲ್ಲಿ ಮೊದಲ ದಿನ ಒಳಗೆ ಬರುವಂತೆಯೂ ಮರುದಿನ ಹೊರಗೆ ಹೋಗುವಂತೆಯೂ ನಾಗನ ಚಿತ್ರದ ರಂಗೋಲಿಯನ್ನು ಚಿತ್ರಿಸಬೇಕು.

೧೬. ರಂಗೋಲಿ ಹಾಕಿದರೆ ಮನೆಯಲ್ಲಿ ಶಾಂತಿ ಸೌಹಾರ್ದತೆಗಳು ನೆಲೆಸುತ್ತವೆ.

೧೭. ರಂಗೋಲಿ ಹಾಕಿದರೆ ಮನೆಯಲ್ಲಿದ್ದ ಲಕ್ಷ್ಮೀ ಮನೆಯಲ್ಲಿಯೇ ವಾಸಿಸುವಳು. ಇಲ್ಲದಿದ್ದರೆ ಹೊರಗೆ ಹೋಗುತ್ತಾಳೆ.

೧೮. ರಂಗೋಲಿ ಹಾಕುವುದರಿಂದ ದೇವತೆಗಳು ಸದಾ ಮನೆಯಲ್ಲಿ ವಾಸಿಸುತ್ತಾರೆ.

೧೯. ಮೋಡಿಕಾರರಿಗೆ ರಂಗೋಲಿ ಮಂಡಲ ಇಲ್ಲದಿದ್ದರೆ ಎದುರಾಳಿಯಿಂದ ರಕ್ಷಣೆ ಪಡೆಯಲು ಅಸಾಧ್ಯ.

೨೦. ಸುಣ್ಣದಿಂದ ರಂಗೋಲಿ ಇಟ್ಟಾಗ ಅದರ ಜೊತೆಗೆ ಕೆಮ್ಮಣ್ಣಿನಿಂದ ಎರಡು ಗೆರೆಯನ್ನಾದರೂ ಎಳೆಯಲೇಬೇಕು. ಯಾಕೆಂದರೆ ಸುಣ್ಣ ಮತ್ತು ಕೆಮ್ಮಣ್ಣು ಗಂಡ ಹೆಂಡತಿ.

೨೧. ಮನೆಯ ಮುಂದೆ ರಂಗೋಲಿ ಇಲ್ಲದಿದ್ದರೆ ಭಿಕ್ಷುಕರು ಆ ಮನೆಯ ಭಿಕ್ಷೆಗೆ ಬರುವುದಿಲ್ಲ. ಅಲ್ಲಿ ಅಶುಭಕಾರ್ಯ ನಡೆದಿದೆಯೆಂಬ ಸೂಚನೆ.

೨೨. ದೀಪಾವಳಿಯ ದಿನ ಮುಂಜಾನೆ ಬಲಿ ಚಕ್ರವರ್ತಿ ಬರುತ್ತಾನೆಂದು ಮನೆಯ

ಮುಂದೆ ತೊಪ್ಪೆಯ ಮೇಲೆ ಹೂವಿಟ್ಟು, ದೀಪ ಹತ್ತಿಸಿ, ರಂಗೋಲಿ ಹಾಕಿ ಅಲಂಕರಿಸುತ್ತಾರೆ.

೨೩. ಹಬ್ಬದಲ್ಲಿ ಹಾಕಿದ ರಂಗೋಲಿಯನ್ನು ಅಳಿಸಿ, ಪುನಃ ಹಾಕಬಾರದು.

**ರಂಗೋಲಿ ಕುರಿತು ಒಗಟು, ಗಾದೆ, ಒಡಪುಗಳು:**

ರಂಗೋಲಿಯ ಬಗೆಗೆ ಹುಟ್ಟಿಕೊಂಡಿರುವ ಕೆಲವು ಒಗಟು, ಗಾದೆ, ಒಡಪುಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದಾಗಿದೆ:

**ಒಗಟುಗಳು:** ೧. ಹಜಾರದ ತುಂಬ ಬಜಾರ ಪಟ್ಟಿಗೆ.

೨. ಕಲ್ಲೊಳಗೆ ಸಿಡಿದೊಡೆದು ಹಾಲೆ ಹೂವಾದರೇನೆ ನಾರಿಯರ ಕೈಯೊಳಗೆ ನಾನೀಸಿ ಹೋದೆ.

೩. ಬೆಟ್ಟದ ಮೇಲೆ ಬೆಳ್ಳಿ ಕೋಲು ಹಾಕುವವರುಂಟು ತೆಗೆಯುವವರಿಲ್ಲ.

**ಗಾದೆ:** ೧. ರಂಗೋಲಿ ಹಾಕಲಿಕ್ಕೆ ತಿಳಿಯದಿದ್ದರೂ ಹೊಂಗರಕನಕೆತ್ತ ತೆಗೆಯಲಿಕ್ಕೆ ತಿಳಿಯುವುದೇ.

೨. ಚಾಪೆ ಕೆಳಗೊಬ್ಬ ತೂರಿದರೆ, ಇನ್ನೊಬ್ಬ ರಂಗೋಲಿ ಕೆಳಗೆ ತೂರಿದನಂತೆ.

**ಒಡಪು:** ಅಂಗಳದಾಗ ರಂಗೋಲಿ ಹಳಕ

ಆಕಾಶದಾಗ ಚಂದ್ರನ ಬೆಳಕ

ನನ್ನ ಜೀವನದಾಗ........ ರ ಥಳಕ.

ರಂಗೋಲಿ ಗ್ರಾಮೀಣರ ಅತ್ಯಂತ ಜನಪ್ರಿಯ ಕಲೆ ಯಾಗಿರುವುದರಿಂದ ಅದು ನಂಬಿಕೆ, ಒಗಟು, ಗಾದೆ, ಒಡಪುಗಳಲ್ಲಿ ಕಾಣಿಸಿಕೊಂಡಿದೆ.

**ರಂಗೋಲಿಯ ಸಾಮಗ್ರಿಗಳು:**

ಕರ್ನಾಟಕದಲ್ಲಿ ರಂಗೋಲಿ ಹಾಕುವಾಗ ಅನೇಕ ಬಗೆಯ ಸಾಧನ ಮತ್ತು ಸಾಮಗ್ರಿಗಳನ್ನು ಉಪಯೋಗಿಸುತ್ತಿದ್ದರು. ರಂಗೋಲಿ ಹಾಕುವಾಗ ಬಳಸುವ ಈ ಸಾಧನ ಸಾಮಗ್ರಿಗಳು ಕೆಳಗಿನಂತಿರುತ್ತವೆ.

೧. ರಂಗೋಲಿ ಪುಡಿ (ಹಿಟ್ಟು) ೨. ಕುಂಕುಮ

೩. ಅರಷಿಣ ೪. ಸುಣ್ಣ

೫. ಜೇಡಿಮಣ್ಣು ೬. ಕ್ಯಾವಿ (ಹುರಮಂಜು)

೭. ಧಾನ್ಯಗಳು (ಕಾಳು ಮತ್ತು ಬೇಳೆಗಳು) ೮. ಹೂವುಗಳು

೯. ಪತ್ರಿಗಳು ೧೦. ತರಕಾರಿಗಳು, ಹಣ್ಣು ಹಂಪಲಗಳು

೧೧. ಇದ್ದಿಲು (ಬುಕ್ಕಿಟ್ಟು) ೧೨. ವಿವಿಧ ವರ್ಣಗಳು

೧೩. ಕುಂಚಗಳು

ರಂಗೋಲಿ ಪ್ರಸಂಗದಲ್ಲಿ ಬಳಸುತ್ತಿರುವ ವೈವಿಧ್ಯಪೂರ್ಣವಾದ ಇವುಗಳನ್ನು ಒಂದೊಂದಾಗಿ ಇಲ್ಲಿ ವಿವರಿಸಿ ಹೇಳಬಹುದಾಗಿದೆ.

**೧. ರಂಗೋಲಿ ಪುಡಿ (ಹಿಟ್ಟು) :** ರಂಗೋಲಿ ಹಿಟ್ಟನ್ನು ಪ್ರಾದೇಶಿಕವಾಗಿ ವಿವಿಧ ರೀತಿಯಲ್ಲಿ ತಯಾರಿಸುತ್ತಾರೆ. ರಂಗೋಲಿ ಹಿಟ್ಟನ್ನು ಉತ್ತರ ಕರ್ನಾಟದಲ್ಲಿ ಬೆಣಚು ಕಲ್ಲಿನಿಂದ ಕುಟ್ಟಿ ಸಿದ್ಧಪಡಿಸುತ್ತಾರೆ. ಕೆಲವು ವಿಶೇಷ ಸಂದರ್ಭದಲ್ಲಿ ರಂಗೋಲಿಗೆ ಮಾತ್ರ ಅಕ್ಕಿಯ ಹಿಟ್ಟನ್ನು ಬಳಸುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ರಂಗೋಲಿ ಕಲ್ಲು ಸಿಗುತ್ತಿದ್ದು, ಅದನ್ನು ಕುಟ್ಟಿ ರಂಗೋಲಿ ಪುಡಿ ಸಂಗ್ರಹಿಸಿಕೊಳ್ಳುತ್ತಾರೆ.

ಸಾಮಾನ್ಯವಾಗಿ ರಂಗೋಲಿ ಹಿಟ್ಟಿಗಾಗಿ ಅಕ್ಕಿ ಬೀಸುವಾಗ ಕೊನೆಯ ಪಕ್ಷ ಒಂದೊಂದು ಮುತ್ತು ಅಥವಾ ಹವಳ ಹಾಕಿ, ಸ್ವಲ್ಪ ಹಾಲು, ಸ್ವಲ್ಪ ತುಪ್ಪ ಸೇರಿಸಿ ಶುಭ್ರ ಮಾಡಿದ ಬೀಸುಕಲ್ಲಿನಲ್ಲಿ ಬೀಸುತ್ತಾರೆ. ಸುಮಾರು ೩೦-೪೦ ವರ್ಷಗಳ ಹಿಂದೆ ರಂಗೋಲಿಯನ್ನು ಬೆಣಚುಕಲ್ಲು, ಮುತ್ತು, ಹವಳಗಳನ್ನು ಸಮನಾಗಿ ಹಾಕಿ ತಯಾರಿಸುತ್ತಿದ್ದರಂತೆ, ಇಂದು ಶಾಸ್ತ್ರಕ್ಕಾಗಿ ಮಾತ್ರ ಒಂದೊಂದು ಮುತ್ತು ಹವಳವನ್ನು ಹಾಕುವುದು ಉಳಿದುಕೊಂಡುಬಂದಿವೆ. ಜೈನರು ಮತ್ತು ಬ್ರಾಹ್ಮಣರು ಅಕ್ಕಿಯನ್ನು ನೆನೆ ಹಾಕಿ ರುಬ್ಬಿ, ಅದರಿಂದ ಬಟ್ಟಿನ ಮೂಲಕ ಅದ್ದಿ, ರಂಗೋಲಿ ಇಡುವುದು ಕಂಡುಬರುತ್ತದೆ. ಮದುವೆ ಮತ್ತು ದೇವರ ಮುಂದೆ ಹೆಚ್ಚಾಗಿ ಅಕ್ಕಿ ಹಿಟ್ಟಿನ ರಂಗೋಲಿ ಹಾಕುತ್ತಾರೆ.

**೨. ಕುಂಕುಮ ೩. ಅರಿಷಿಣ:** ಹೊಸ್ತಿಲು ಹಾಗೂ ಬಾಗಿಲಿನ ಮುಂದೆ ರಂಗೋಲಿ ಹಾಕಿದ ನಂತರ ಕುಂಕುಮ ಮತ್ತು ಅರಿಷಿಣ ಇಡುವುದು ವಾಡಿಕೆ. ಕುಂಕುಮವನ್ನು ಗೌರಿಯೆಂದು ಅರಿಷಿಣ ಲಕ್ಷ್ಮೀಯೆಂದೂ ಭಾವಿಸಿ, ಹೆಣ್ಣುಮಕ್ಕಳು

ಸೌಭಾಗ್ಯ ಮತ್ತು ಸಿರಿಸಂಪತ್ತಿನ ಸಂಕೇತವಾಗಿ, ಅಮಂಗಳ ನಿವಾರಣೆಗಾಗಿ ಅವುಗಳನ್ನು ಬಳಸುತ್ತಾರೆ.

**೪. ಸುಣ್ಣ :** ಭಾರತ ಹುಣ್ಣಿವೆಯಲ್ಲಿ ಬೆಳದಿಂಗಳು ಹೊಯ್ಯುವಾಗ, ಐದು ದಿನಗಳವರೆಗೆ ಸುಣ್ಣದ ರಂಗೋಲಿ ಹಾಕುವ ಸಂಪ್ರದಾಯ ಉತ್ತರಕರ್ನಾಟಕದಲ್ಲಿದೆ. ನೀರಿನಲ್ಲಿ ಸುಣ್ಣವನ್ನು ಗಟ್ಟಿಯಾಗಿ ಕಲಸಿ, ಸುಣ್ಣ ಕುಂಚದಿಂದ ತೊಟ್ಟಿಯ ಅಂಚು, ಗೋಡೆಯ ಕೆಳಭಾಗ, ಕಂಬದ ಕೆಳಗೆ ನೆಲವನ್ನು ಬಿಟ್ಟು, ಒಂದಂಗುಲ ಎತ್ತರಕ್ಕೆ ಒಂದೆರಡು ಇಂಚು ಅಗಲದ ಪಟ್ಟಿಗಳನ್ನೆಳೆಯುವ ರೂಢಿ ಅಲ್ಲಲ್ಲಿ ಕಂಡುಬರುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ಬೆಂಗಳೂರು ಭಾಗದಲ್ಲಿ ಸುಣ್ಣದ ಸಹಾಯದಿಂದ ರಂಗೋಲಿ ಹಾಕುತ್ತಾರೆ.

**೫. ಜೇಡಿಮಣ್ಣು:** ಕರ್ನಾಟಕದುದ್ದಕ್ಕೂ ಈ ಮಣ್ಣಿನ ಬಳಕೆಯಿದೆ. ನಿಸರ್ಗದತ್ತವಾದ ಈ ಮಣ್ಣಿನ ಸಾರಣೆಯ ಮೇಲೆ ಬಿಳಿಯ ಬಣ್ಣದ ರಂಗೋಲಿ ಆಕರ್ಷಕವಾಗಿ ಕಾಣಿಸುತ್ತದೆ. ರಂಗೋಲಿ ಹಿನ್ನಲೆಯಾಗಿ ಗೋಡೆಗಳಿಗೆ ಈ ಮಣ್ಣಿನ ಸಾರಣೆ ಮಾಡುತ್ತಾರೆ. ಬೆಳದಿಂಗಳ ತೇರಿನ ಚಿತ್ರ ತೆಗೆಯುವಾಗ ಗುಡಿ ಹುಣ್ಣಿಮೆಯಲ್ಲಿ ಉತ್ತರ ಕರ್ನಾಟಕದ ಧಾರವಾಡ, ಬೆಳಗಾವಿ, ಬಳ್ಳಾರಿ ಭಾಗದಲ್ಲಿ ಇದರ ಬಳಕೆ ವಿಶೇಷವಾಗಿ ಆಗುತ್ತದೆ.

**೬. ಕ್ಯಾವಿ(ಹುರಮಂಜು):** ಕಂದು ಬಣ್ಣದ ಈ ಹುರಮಂಜು ಮನೆಯ ಅಲಂಕಾರದಲ್ಲಿ ಮಹತ್ವದ್ದಾಗಿದೆ. ಉತ್ತರ ಕರ್ನಾಟಕದ ವಿಜಾಪೂರ, ಗುಲಬರ್ಗಾ ಭಾಗಗಳಲ್ಲಿ ಹುರಮಂಜದ ಬಳಕೆ ಹೆಚ್ಚು. ಹಬ್ಬ ಹುಣ್ಣಿಮೆಗಳಲ್ಲಿ ಮನೆಯ ಸಾರಣೆಯ ನಂತರ ಸುಣ್ಣದ ಗೋಡೆಯಮೇಲೆ ಹುರಮಂಜದ ಚುಕ್ಕೆಗಳನ್ನಿಡುವ ಸಂಪ್ರದಾಯವಿದೆ. ಕಂಬ ತೊಲೆಗಳಿಗೆ ಇದನ್ನು ಹಚ್ಚಿ, ಇದರ ಮೇಲೆ ಮದುವೆ ಸಂದರ್ಭದಲ್ಲಿ ತಲೆದಿಂಬಿನ ಮೇಲೆ ಹುಡಿ ರಂಗೋಲಿಹಾಕಿ ಗೋಡೆಗೆ ಒತ್ತಿ ರಂಗೋಲಿ ಹಾಕುತ್ತಾರೆ. ಕಂದು ಬಣ್ಣದ ಮೇಲೆ ಬಿಳಿಯ ರಂಗೋಲಿ ಚೆನ್ನಾಗಿ ಕಾಣಿಸುತ್ತಲ್ಲದೆ ಹುರಮಂಜು ಬಹಳಷ್ಟು ದಿವಸ ರಂಗೋಲಿಯನ್ನು ಹಿಡಿದಿಟ್ಟುಕೊಳ್ಳುತ್ತದೆ. ಬಳ್ಳಾರಿ, ಬೀದರ, ರಾಯಚೂರ, ಧಾರವಾಡ ಭಾಗದಲ್ಲಿ ಈ ರೀತಿಯ ರಂಗೋಲಿ ಹಾಕುವಾಗ ಹುರಮಂಜು ಬಳಕೆಯಾಗುತ್ತದೆ.

**೭. ಧಾನ್ಯಗಳು:** ಹಬ್ಬ ಹುಣ್ಣಿವೆ, ಜಾತ್ರೆಯಂತಹ ಸಂದರ್ಭದಲ್ಲಿ ಸಾಮಾನ್ಯವಾಗಿ ತಾವು ಬೆಳೆಯುವ ವಿವಿಧ ಬಗೆಯ ಧಾನ್ಯಗಳನ್ನು ಬಳಸಿ, ಅಲಂಕಾರಯುಕ್ತವಾದ ರಂಗೋಲಿ ಹಾಕಿ, ತಮ್ಮ ಕಲಾಭಿವ್ಯಕ್ತಿಯನ್ನು ತೋರ್ಪಡಿಸುತ್ತಾರೆ. ಇಲ್ಲಿ ಕೆಂಪು, ಕರಿ, ಬಿಳಿ, ಹಸಿರು, ಕಂದು ಇತ್ಯಾದಿ ನಿಸರ್ಗದ

ಬಣ್ಣಗಳನ್ನು ಧಾನ್ಯಗಳ ಮೂಲಕ ರಂಗೋಲಿಯಲ್ಲಿ ಹಾಕುತ್ತಾರೆ.

**೮. ಹೂವುಗಳು:** ರಂಗೋಲಿಗಾಗಿ ಹೂವುಗಳನ್ನು ಬಳಸುವ ಕ್ರಮವನ್ನು ವಾತ್ಸಾಯನ ಉಲ್ಲೇಖಿಸುತ್ತಾನೆ. ತಂಡಲ ಬಲಿಕುಸುಮ ವಿಕಾರವು ಹೂವು ಮತ್ತು ಅಕ್ಕಿಯ ಹಿಟ್ಟಿನಿಂದ ರಚಿಸುವದನ್ನು ಇಲ್ಲಿ ಗಮನಿಸಬಹುದು. ಕರ್ನಾಟಕದಲ್ಲಿ ವಿಶೇಷ ಹಬ್ಬ, ಹರಿದಿನ, ಜಾತ್ರೆ, ಉತ್ಸವ ಸ್ಪರ್ದೆಗಳಲ್ಲಿ ಹೂವುಗಳನ್ನು ಉಪಯೋಗಿಸಿ, ವರ್ಣರಂಜಿತ ರಂಗೋಲಿ ರಚಿಸುತ್ತಾರೆ. ಆದರೆ ಇವುಗಳ ಬಳಕೆ ತೀರ ಕಡಿಮೆ.

**೯. ಪತ್ರಿಗಳು:** ಸಾಮಾನ್ಯವಾಗಿ ಮನೆಯ ಮುಂದೆ ಹಾಕುವ ರಂಗೋಲಿಗಳಿಗೆ ಅವರೆಯ ಪತ್ರಿಗಳನ್ನು, ದೇವರ ಮುಂದೆ ಹಾಕುವ ರಂಗೋಲಿಗಳಿಗೆ ಬಿಲ್ವಪತ್ರಿಕೆಗಳನ್ನು ಏರಿಸುತ್ತಾರೆ. ಬಿಲ್ವಪತ್ರಿಕೆಗಳನ್ನು ತುಳಿಯಬಾರದು ಎಂಬ ನಂಬಿಕೆಗಳಿವೆ. ಹಾಗೆಯೇ ದೇವರಿಗೆ ಮಾತ್ರ ಅವುಗಳನ್ನು ಏರಿಸುವ ಸಂಪ್ರದಾಯವಿದೆ.

**೧೦. ತರಕಾರಿ, ಹಣ್ಣು ಹಂಪಲಗಳು:** ವಿಶೇಷ ಸಂದರ್ಭದಲ್ಲಿ ರಂಗೋಲಿಯಲ್ಲಿ ಇವುಗಳನ್ನು ಉಪಯೋಗಿಸುತ್ತಾರೆ. ಜಾತ್ರೆ, ಉತ್ಸವದಂತಹ ಸಂದರ್ಭದಲ್ಲಿ ವಿವಿಧ ರೀತಿಯ ಹಣ್ಣು ತರಕಾರಿ ವಸ್ತುಗಳನ್ನು ಕಲಾತ್ಮಕವಾಗಿ ಜೋಡಿಸಿ ವೃತ್ತಾಕಾರದ, ಚೌಕಾಕಾರದ, ಭೂಮಿತಿ ಆಕೃತಿಯ ರಂಗೋಲಿ ಹಾಕುತ್ತಾರೆ.

**೧೧. ಇದ್ದಿಲು(ಬುಕ್ಕಿಟ್ಟು):** ಇದ್ದಿಲು ಪುಡಿಯಿಂದ ರಂಗೋಲಿ ಬರೆಯಬಾರದೆಂಬ ನಿಯಮವಿದೆ ಆದರೆ ಚಾಡಿಯ ಸಂದರ್ಭದಲ್ಲಿ, ಭೂತ ಬಿಡಿಸುವ ಸಮಯದಲ್ಲಿ, ಮತ್ತು ಸ್ಮಶಾನದಲ್ಲಿ ಬಾಣಂತಿಯ ಕೈತರುವ ಸಂದರ್ಭದಲ್ಲಿ, ಮೋಡಿಕಾರರು ಆಡುವ ಆಟದಲ್ಲಿ ಹೆಣ ಹೂಳುವಾಗ ಗೋರಿಯ ಮೇಲೆ (ಹೆಣವನ್ನು ಸುಡುವ ಸಮಯದಲ್ಲಿ)ಹಾಕುವ ರಂಗೋಲಿಯಲ್ಲಿ ಮಾತ್ರ ಇದ್ದಿಲು ಪುಡಿ ಬಳಕೆಯಾಗುತ್ತದೆ. ಕಪ್ಪು ಶನಿಯ ಆಹವಾನೆ ಕಷ್ಟ ದೆವ್ವ ಬರುತ್ತದೆಯೆಂಬ ನಂಬಿಕೆಗಳಿದ್ದರೂ ನೀರಿನ ಮೇಲೆ ರಂಗೋಲಿ ಹಾಕುವಾಗ ಇದ್ದಿಲು ಪುಡಿಯನ್ನು ಹಾಕಿ ಮೇಲೆ ರಂಗೋಲಿ ಹಾಕುತ್ತಾರೆ. ಹಾಗೆ ಹಾಕಬಾರದು, ಒಳ್ಳೆಯದಲ್ಲ ಎನ್ನುವವರೂ ಇದ್ದಾರೆ. ಆದರೆ ಇದ್ದಿಲು ಪುಡಿಯನ್ನು ಬೇರೆ ಬೇರೆ ವರ್ಣಗಳಲ್ಲಿ ಕೂಡಿಸಿ, ಮಿಶ್ರವರ್ಣ ಮಾಡಿ ರಂಗೋಲಿ ಹಾಕುವಾಗ ಬಳಸುತ್ತಾರೆ. ಹೀಗೆ ಇದ್ದಿಲು ಶುಭ, ಅಶುಭಗಳೆರಡೂ ಪ್ರಸಂಗದಲ್ಲಿಯೂ ಬಳಕೆಯಾಗುತ್ತದೆ.

**೧೨. ವಿವಿಧ ವರ್ಣಗಳು:** ರಂಗೋಲಿಯಲ್ಲಿ ಬಳಕೆಯಾಗುವ ಸಾಧನೆಗಳಲ್ಲಿ ವರ್ಣಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಜನಪದರು. ತಮ್ಮ ಸುತ್ತಮುತ್ತಲೂ ದೊರೆಯುವ ವಸ್ತುಗಳನ್ನೇ ಉಪಯೋಗಿಸಿ ಬಣ್ಣ ತಯಾರಿಸಿದ್ದಾರೆ. ಬಾಣನ ಕಾದಂಬರಿಯಲ್ಲಿ ಕ್ಯಾವಿ ಮುಂತಾದ ವರ್ಣಗಳಿಂದ ವಿವಿಧ ಸಸ್ಯಗಳ

ಹೂಗಳಿಂದ ವಿಶೇಷವಾಗಿ ಹತ್ತಿಯ ಹೂವಿನ ಕಣಗಳಿಂದ ಮತ್ತು ವಿವಿಧ ಹೂವಿನಿಂದ ಕೆಂಪಾದ ರಂಗೋಲಿಯನ್ನು ಹಾಕುತ್ತಿದ್ದ ವರ್ಣನೆಯಿದೆ. ವಾತ್ಸಾಯನ ಕಾಮಸೂತ್ರದಲ್ಲಿ ನೈಸರ್ಗಿಕವಾಗಿ ಹೂವಿನಿಂದ ರಂಗೋಲಿ ಹಾಕುತ್ತಿದ್ದುದನ್ನು ಹೇಳಿದ್ದಾನೆ. ಪಂಚವರ್ಣದ ರಂಗೋಲಿ ಹಾಕುತ್ತಿದ್ದ ಉಲ್ಲೇಖ ಪ್ರಾಚೀನ ಕಾವ್ಯಗಳಲ್ಲಿದೆ.

ವೀರಶೈವಾಮೃತ ಮಹಾಪುರಾಣದಲ್ಲಿ ನೆಲವನ್ನು ಸಾರಿಸಿದ ಬಳಿಕ "ಅಷ್ಟದಳ, ಶತದಳ, ಸಹಸ್ರದಳ, ಕಮಲಬಂಧದ ಪುರಾತನ ಬಹು ಪುಷ್ಪದ ಪಂಚವರ್ನದ ರಂಗವಲ್ಲಿಯಿಂದಾದ ಈ ಮುತ್ತು, ರತ್ನ ಮೊದಲಾದ ಚೂರ್ನಗಳಿಂದಾಗಿ ಬಿಳಿಯ ಹಿಟ್ಟು ಮೊದಲಾದವುಗಳಿಂದ ರಂಗವಲ್ಲಿಯನಲಂಕರಿಸಿ ಪಚ್ಚ ಕರ್ಪೂರ ಕುಂಕುಮದ್ರವ್ಯ ಕಸ್ತೂರಿಯ ಪುಡಿಗಂ ಎರಚಿ" ಎಂದು ಹೇಳಲಾಗಿದೆ. ಇಲ್ಲಿ ವಿವಿಧ ಹೂಗಳು, ಮುತ್ತು, ರತ್ನ ಕುಂಕುಮ, ಕಸ್ತೂರಿಯ ಪುಡಿಗಳಿಂದ ರಂಗೋಲಿ ಹಾಕಿದ್ದುದು ಗೊತ್ತಾಗುತ್ತದೆ. ಜೈನ ಕಾವ್ಯದಲ್ಲಿ ಪಾಯಣವರ್ಣಿ, ಸಿಂಧೂದೇವಿಯ ಭವಾವಳಿಯನ್ನು ಹೇಳುತ್ತ, ಆಕೆ ಪೂರ್ವದಲ್ಲಿ

ಹರಿತ ಪೀತಾರುಣ ಶ್ವೇತ ಕೃಷ್ಣಗಳೆಂ

ಬರುತರ ಪಂಚವರ್ಣಗಳಿಂ

ನೆರೆಜಾಣೆ ರಂಗವಲಿಯನಿಕ್ಕಿ ಚೌವ್ವೀಸ

ವರಜಿನರಡಿಗೆ ಕೈಮುಗಿದು

ಇದ್ದಳೆಂದು ವರ್ಣಿಸಿದ್ದಾನೆ. ಇಲ್ಲಿ ಹಸಿರು, ಹಳದಿ, ಕೆಂಪು, ಬಿಳಿ, ಕಪ್ಪು ಈ ಐದು ವರ್ಣಗಳಿಂದ ರಂಗೋಲಿ ಹಾಕುತ್ತಿದ್ದುದನ್ನು ಇಲ್ಲಿ ಹೇಳಲಾಗಿದೆ. ಪಂಚವರ್ಣದ ಮಹತ್ವವನ್ನು ತಿಳಿಸುವ ಶ್ಲೋಕ ಹೀಗಿದೆ.

ವರ್ಣಲೇಪಂ ತತಃಕುರ್ಯಾಚ್ಛಿಲ್ಪಿ ಶಾಸ್ತ್ರ ವಿಚಕ್ಷಣೈ:

ಶ್ವೇತಂ ಪೀತಂ ತಥಾ ರಕ್ತಂ ಹರಿತಂ ಕೃಷ್ಣಮೇವ ಚ

ಪಂಚವರ್ಣಂ ಪೃಥಿವ್ಯಾಧಿ ವರ್ಣಾನಾಮಧಿದೇವತಾಃ

ಉತ್ತಮ ಧಾತವಃ ಪ್ರೋಕ್ತಾಃ ಮಧ್ಯಮಾವೃಕ್ಷ ಸಂಭವಂ

ಇಲ್ಲಿ ೧. ಶ್ವೇತ =ಬಿಳಿ. ೨. ಪೀತ = ಹಳದಿ, ೩, ರಕ್ತ=ಕೆಂಪು

೪. ಹರಿತ= ಎಲೆಹಸಿರು, ೫. ಕೃಷ್ಣ=ಕಪ್ಪು, ಇವು ಪಂಚವರ್ಣಗಳಾಗಿರುತ್ತವೆ.

ಈ ಬಣ್ಣಗಳಿಂದ ಪೃಥ್ವಿ ವೊದಲಾದ ಪಂಚಭೂತಗಳೇ ಮೊದಲದೇವತೆಗಳು ಇವುಗಳಲ್ಲಿ ಗೈರಿಕಾದಿ ಧಾತುಗಳಿಂದ ಉತ್ಪನ್ನವಾದವು ಉತ್ತಮ ವರ್ಣಗಳು. ಸಸ್ಯವರ್ಗದಿಂದ ಸಿದ್ಧವಾದವು ಮಾಧ್ಯಮ. ಇವುಗಳ ಸಮ್ಮಿಶ್ರಣದಿಂದ ವರ್ಣಗಳು ಅಧಮ. ಹೀಗೆ ವರ್ಣಗಳಲ್ಲಿ ಮೂರು ವಿಧಗಳುಂಟು ಇಲ್ಲಿ ಪಂಚವರ್ಣಗಳೇ ಪಂಚಭೂತಗಳು. ಜನಪದರ ಈ ಮುಖ್ಯ ನಂಬಿಕೆ ಶಿಷ್ಟಕ್ಕೆ ತಿರುಗಿಕೊಂಡಂತಿದೆ.

ತೆಲುಗಿನಲ್ಲಿ ಪಂಚವೆನ್ನಲ ಮೊಗ್ಗು (ಐದು ಬಣ್ಣಗಳ ರಂಗೋಲಿ) ಹಾಕುವ ಸಂಪ್ರದಾಯವಿದೆ. ಆಷಾಢ ಶುದ್ಧ ಪೌರ್ಣಿಮೆಯಿಂದ ಕಾರ್ತಿಕ ಶುದ್ಧ (ಶುಕ್ಲ) ಪೌರ್ಣೀಮೆಯವರೆಗೆ ನಾಲ್ಕು ತಿಂಗಳು ಪ್ರತಿನಿತ್ಯವೂ ತುಳಸಿಯ ಮುಂದೆ ಈ ರಂಗೋಲಿ ಹಾಕುತ್ತಾರೆ. ಅಕ್ಕಿ ಹಿಟ್ಟು ಮುತ್ತು, ಹವಳ, ಅರಿಷಿಣ, ಕುಂಕುಮ ಇವು ಇಲ್ಲಿಯ ಐದು ಬಣ್ಣಗಳು. ಮುತ್ತು, ಹವಳದ ಬದಲು ಕೆಲವರು ಅಗೆಸೊಪ್ಪ ಒಣಗಿಸಿ ಪುಡಿ ಮಾಡಿಕೊಂಡು ನೆಲ್ಲಿಕಾಯಿ ಸುಟ್ಟು ಅದರಿಂದ ಒಂದು ಬಣ್ಣ ಮಾಡಿಕೊಳ್ಳುತ್ತಾರೆ. ಇವೆರಡು ಬಳಸುವುದು ಅತಿ ವಿರಳ. ಇದರಿಂದ ಪಾಪ ನಾಶವಾಗುತ್ತದೆ. ಮೋಕ್ಷಪದ ಸಿಗುತ್ತದೆಯೆಂಬ ಭಾವನೆಯಿದೆ.

ಕರ್ನಾಟಕದ ದಕ್ಷಿಣ ಕನ್ನಡ ಭಾಗದಲ್ಲಿ ಪ್ರಚಲಿತವಿರುವ ನಾಗಮಂಡಲದಲ್ಲಿ ನಾಗಮಂಡಲ ಸೇವೆ ಸಲ್ಲಿಸುವ ದಿನ ಸಂಜೆ, ವೈದ್ಯರೆಂಬ ವರ್ಗದವರು ನೆಲದ ಮೇಲೆ ನಾಗಪ್ಪನ ಚಿತ್ರವನ್ನು ಕೆಂಪು, ಹಳದಿ, ಬಿಳಿ, ಹಸಿರು ಮತ್ತು ಕಪ್ಪು ಈ ಪಂಚವರ್ಣಗಳಲ್ಲಿ ಬಿಡಿಸುತ್ತಾರೆ.

ಪಂಚವರ್ಣಗಳು ಶ್ರೇಷ್ಠವೆಂಬ ಭಾವನೆಯಿಂದ ಪ್ರಾಚೀನ ಕಾಲದಿಂದಲೂ ಸಂಪ್ರದಾಯನಡೆದುಕೊಂಡು ಬಂದಿದೆ. ಈಗ ಹಲವಾರು ಮಿಶ್ರವರ್ಣಗಳನ್ನೂ, ಪ್ರಖರ, ಶಾಂತವರ್ಣಗಳನ್ನೂ ಬಳಸಿ ರಂಗೋಲಿ ಹಾಕುವುದು ಸಾಮಾನ್ಯವಾಗಿದೆ. ಹಬ್ಬ, ಜಾತ್ರೆ, ಉತ್ಸವಗಳಂತಹ ವಿಶೇಷ ಸಂದರ್ಭದಲ್ಲಿ ವರ್ಣರಂಜಿತ ರಂಗೋಲಿಗಳು ಕಂಡುಬರುತ್ತವೆ. ಇದ್ದಿಲು, ನಾರುಬೇರುಗಳು, ಮರದ ತೊಗಟೆ, ಅರಷಿಣ ಬೇರು ಮೊದಲಾದವುಗಳ ಪುಡಿಗಳನ್ನು ಮಾಡಿಕೊಳ್ಳುತ್ತಾರೆ.

**೧೩. ಕುಂಚಗಳು:** ಇಲ್ಲಿ ಬಳಸುವ ಕುಂಚಗಳು ನಾರಿನಿಂದ ತಯಾರಿಸಿದವುಗಳಾಗಿರುತ್ತವೆ. ಇಣಚಿಯ ಬಾಲದ ತುಪ್ಪಳ, ಕುದುರೆಯ ಜವಿ ಮುಂತಾದ ವಸ್ತುಗಳಿಂದಲೂ ರಂಗೋಲಿಯ ಕುಂಚ ತಯಾರಿಸುತ್ತಾರೆ. ಇತ್ತೀಚೆಗೆ

ಅಂಗಡಿಯಲ್ಲಿ ದೊರೆಯುವ ಆಧುನಿಕ ರೀತಿಯ ಕುಂಚಗಳನ್ನು ಬಳಸಲಾಗುತ್ತಿದೆ.


**ರಂಗೋಲಿಹಾಕುವ ಸಮಯ:** ಪ್ರತಿದಿನ ಮುಂಜಾನೆಯಲ್ಲಿ, ಬೆಳದಿಂಗಳ ಸಮಯದಲ್ಲಿ, ಮಂತ್ರಮಾಟ ಮಾಡುವಾಗ, ದೆವ್ವ ಬಿಡಿಸುವಾಗ, ಭೂತಗಳ ವಶೀಕರಣ ಸಂದರ್ಭದಲ್ಲಿ ರಂಗೋಲಿ ಹಾಕುತ್ತಾರೆ. ಹೀಗೆ ಉತ್ತರ ಕರ್ನಾಟದಲ್ಲಿ ಪ್ರತಿದಿನ ಮುಂಜಾನೆ ಸಮಯದಲ್ಲಿಯೂ, ವಿಶೇಷ ಸಂದರ್ಭಗಳಲ್ಲಿ ರಾತ್ರಿಯಲ್ಲಿಯೂ ತಾಂತ್ರಿಕ ಆಚರಣೆಯಲ್ಲಿ ಮಧ್ಯಾಹ್ನದಲ್ಲಿಯೂ ರಂಗೋಲಿಯ ಹಾಕುವ ಪದ್ಧತಿ ರೂಢಿಯಲ್ಲಿದೆ.

**ರಂಗೋಲಿ ಹಾಕುವ ವಿಧಾನಗಳು:**

ರಂಗೋಲಿ ಹಾಕುವ ವಿಧಾನ ಎರಡು ರೀತಿಯಾಗಿವೆ: ೧. ಪ್ರಾಚೀನ ರೀತಿ ೨. ಆಧುನಿಕ ರೀತಿ. ಇವುಗಳನ್ನು ಒಂದೊಂದಾಗಿ ಇಲ್ಲಿ ವಿವೇಚಿಸಬಹುದಾಗಿದೆ.

**೧. ಪ್ರಾಚೀನ ರೀತಿ:** ಪ್ರಾಚೀನ ರೀತಿಯಲ್ಲಿ ಹಾಕುವ ರಂಗೋಲಿ ಉತ್ತರ ಕರ್ನಾಟಕದ ಪ್ರಮುಖ ಕೊಡುಗೆಯನ್ನಬಹುದು. ಇದರಲ್ಲಿ ಎರಡು ಪ್ರಕಾರಗಳಿವೆ: ಅ. ಚುಕ್ಕೆಯ ರಂಗೋಲಿ ಆ. ಚುಕ್ಕೆಯೇತರ ರಂಗೋಲಿ.


**ಅ. ಚುಕ್ಕೆಯ ರಂಗೋಲಿ:** ರಂಗೋಲಿಯ ಹಿಟ್ಟಿನಿಂದ ಚುಕ್ಕೆಯನ್ನಿಟ್ಟುಕೊಂಡು, ತಮಗೆ ಬೇಕಾದ ರೀತಿಯಲ್ಲಿ ಚುಕ್ಕೆಯಿಂದ ಚುಕ್ಕೆಗೆ ಗೆರೆಗಳನ್ನು ಕೂಡಿಸುತ್ತ, ಆಪೇಕ್ಷಿತ ಚಿತ್ರಾಕೃತಿಗಳನ್ನು ತೆಗೆಯುವ ವಿಧಾನವೇ ಚುಕ್ಕೆಯ ರಂಗೋಲಿ. ಹೀಗೆ ಚುಕ್ಕೆಗಳನ್ನು ಇಡುವುದಕ್ಕೆ ಅಕ್ಕಿ ಇಡುವುದು ಎಂದೂ ಹೇಳುತ್ತಾರೆ.



ಇದು ಚಿಕ್ಕವರಿಗೆ ರಂಗೋಲಿ ಹಾಕಲು ಮೊದಲುಕಲಿಸುವ ವಿಧಾನವಾಗಿದೆ. ಪ್ರಾರಂಭದಲ್ಲಿ ಕಲಿಯುವವರಿಗೆ ಇದು ತುಂಬ ಸರಳ ವಿಧಾನವಾಗಿದ್ದು, ಇಲ್ಲಿ ತ್ರಿಕೋನ, ಚೌಕ, ವರ್ತುಳ, ಆಯತ, ವಜ್ರಾಕೃತಿ ಇತ್ಯಾದಿ ಆಕೃತಿಗಳನ್ನು ರಚಿಸಲಾಗುತ್ತದೆ. ಅಚ್ಚುಕಟ್ಟುತನ, ಪ್ರಮಾಣಬದ್ಧತೆ ಇರುವುದರಿಂದ ರಂಗೋಲಿಯ ವಿನ್ಯಾಸಗಳು ನೋಡಲು ಸುಂದರವಾಗಿ ಕಾಣಿಸುತ್ತವೆ. ಚುಕ್ಕೆಯ ರಂಗೋಲಿಯನ್ನು ಮಕ್ಕಳು, ದೊಡ್ಡವರು ಎಲ್ಲರೂ ಹಾಕುತ್ತಾರೆ. ಸಾಮಾನ್ಯವಾಗಿ ಸ್ತ್ರೀಯರು ಹಾಕುವದೇ ಹೆಚ್ಚು.

**ಆ. ಚುಕ್ಕೆ ರಹಿತ ರಂಗೋಲಿ:** ಚುಕ್ಕೆಗಳನ್ನು ಇಡಲಾರದೆ, ನೇರವಾಗಿ

ರಂಗೋಲಿಯ ಪುಡಿಗಳಿಂದಲೇ ರಂಗೋಲಿಯನ್ನು ಹಾಕುವ ವಿಧಾನವಿದಾಗಿದೆ. ಇದನ್ನು ಸರಳಗೈ ರಂಗೋಲಿಯೆಂದು ಕರೆಯುತ್ತಾರೆ. ನೈಸರ್ಗಿಕವಾದ ವಸ್ತುಗಳ ಚಿತ್ರಣಕ್ಕಾಗಿ ಈ ರಂಗೋಲಿಯನ್ನು ಬಳಸುತ್ತಾರೆ. ಎಲೆ, ಹೂ,ಗಿಡ,ಪಕ್ಷಿ, ಪ್ರಾಣಿ ಮುಂತಾದ ಆಕೃತಿಗಳನ್ನು ಇಲ್ಲಿ ಹಾಕಲಾಗುತ್ತದೆ. ಹೀಗೆ ನೇರವಾಗಿ ಹಾಕುವ ಈ ರಂಗೋಲಿಯಲ್ಲಿ ಒಮ್ಮೆ ಹಾಕಿದ ಗೆರೆಯನ್ನು ಅಳಿಸಲು ಬರುವುದಿಲ್ಲ. ಅಳಿಸಿರಂಗೋಲಿ ಹಾಕಬಾರದೆನ್ನುವ ಭಾವನೆಯೂ ಇದೆ. ಹೀಗೆ ಸ್ವಲ್ಪ ನುರಿತ ವ್ಯಕ್ತಿಗಳು ಚುಕ್ಕೆರಹಿತ ರಂಗೋಲಿ ಹಾಕುವುದು ಕಂಡುಬರುತ್ತದೆ.




ಚುಕ್ಕೆರಹಿತ ರಂಗೋಲಿಗಳು ಹೆಚ್ಚಾಗಿ ಅಲಂಕಾರಿಕ ವಿನ್ಯಾಸದ ರಚನೆಗಳಾಗಿವೆ. ಇವು ಹೆಚ್ಚು ಸೃಜನಶೀಲತೆಯಿಂದ ಕೂಡಿದವುಗಳಾಗಿರುತ್ತವೆ. ಯಾಂತ್ರಿಕತೆಯ ವಿನ್ಯಾಸಗಳಿಗಿಂತ ತೀರ ಭಿನ್ನವಾಗಿ, ಮನಸ್ಸಿನ ಬಯಕೆಗಳನ್ನು ರಂಗೋಲಿ ರೇಖೆಯಲ್ಲಿ ಮೂಡಿಸಲು, ಈ ವಿಧಾನ ಹೆಚ್ಚು ಸಹಾಯಕಾರಿಯಾಗಿದೆ. ದೊಡ್ಡವರು ಅದರಲ್ಲೂ ಸ್ತ್ರೀ, ಪುರುಷರು ಇಂತಹ ರಂಗೋಲಿ ಹಾಕುವುದು ಕಂಡುಬರುತ್ತದೆ. ಪುರುಷರು ಕೆಲವು ನಿರ್ದಿಷ್ಟ ಹಬ್ಬ, ಮದುವೆ, ಪೂಜೆಯಂತಹ ಸಂದರ್ಭದಲ್ಲಿ ಬಿಡಿಸುವ ವಿಧಾನದಲ್ಲಿ ಅಡ್ಡ ನೇರ ಸಾಲುಗಳಿದ್ದರೆ, ಚುಕ್ಕೆ ರಹಿತ ರಂಗೋಲಿ ವಕ್ರರೀತಿಯ ಸುಳುಹುಗಳೀಂದ ಕೂಡಿದ್ದು, ಅಭಿವ್ಯಕ್ತಿಯಲ್ಲಿ ಸಾಂಕೇತಿಕತೆ, ಕ್ಲಿಷ್ಟತೆಗಳಿರುತ್ತವೆ.

**೨. ಆಧುನಿಕ ರೀತಿ :** ಈಗ ಕೆಲವರು ರಾಸಾಯನಿಕ ವರ್ಣ ಮತ್ತು ಕೃತ್ರಿಮ ಕಟ್ಟಿಗೆಯ ಕೊಳವೆಗಳಿಂದಲೂ ರಂಗೋಲಿ ಹಾಕುತ್ತಾರೆ. ಬೆರಳುಗಳಿಂದ ರಂಗೋಲಿ ಪುಡಿಯನ್ನು ಉದುರಿಸುತ್ತ ರಂಗೋಲಿ ಹಾಕಿದರೆ, ಇದು ಪ್ರಾಚೀನ ರೀತಿ, ರಂದ್ರ ದಿಂದ ಕೂಡಿದ ಕೊಳವೆಯಲ್ಲಿರಂಗೋಲಿ ತುಂಬಿ ಮನೆಯ ಮುಂದೆ ಉರುಳಿಸಿದರೆ, ಚಿತ್ರಗಳ ರಂಗೋಲಿ ಮೂಡುತ್ತದೆ. ಇದು ಆಧುನಿಕ ರೀತಿ. ಇನ್ನು ಕೆಲವು ತೈಲವರ್ಣದಿಂದ ಮನೆಯ ಮುಂದೆ ರಂಗೋಲಿಯ ಕೆಲವು ವಿನ್ಯಾಸಗಳನ್ನು ಬರೆಯಿಸುತ್ತಾರೆ. ದಿನಾಲು ಅದರ ಮೇಲೆ ನೀರು ಹಾಕಿ ತೊಳೆಯುವುದರಿಂದ ತೈಲವರ್ಣದ ರಂಗೋಲಿ ಸ್ವಚ್ಛವಾಗಿ ಸ್ಪಷ್ಟವಾಗಿ ಕಾಣಿಸುತ್ತದೆ. ಇವೆಲ್ಲ ಆಧುನಿಕ ರೀತಿಯಲ್ಲಿ ಹಾಕುವ ರಂಗೋಲಿಗಳಾಗಿವೆ. ವರ್ಣಗಾರಿಕೆ, ಹಾಕುವ ವಿಧಾನಗಳು ಪ್ರಚೀನ ರೀತಿಯ ರಂಗೋಲಿಗಳಿಗಿಂತ ಇಲ್ಲಿ ಭಿನ್ನವಾಗಿ ಕಂಡುಬರುತ್ತವೆ.

**ರಂಗೋಲಿ ಪ್ರಕಾರಗಳು:**

ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ರಂಗೋಲಿಯನ್ನು ಅಧ್ಯಯನ ದೃಷ್ಟಿಯಿಂದ ಅ. ಉತ್ಸವದ ರಂಗೋಲಿ, ಬ. ಉತ್ಸಾಹದ ರಂಗೋಲಿ, ಕ. ಸಂಕೀರ್ಣ ರಂಗೋಲಿ ಎಂದು ವಿಭಾಗಿಸಿಕೊಂಡು, ಇಲ್ಲಿ ವಿವೇಚಿಸಲಾಗಿದೆ.

**ಅ. ಉತ್ಸವದ ರಂಗೋಲಿ:** ನಿರ್ದಿಷ್ಟದಿನ, ವಾರ, ತಿಂಗಳು, ಹಬ್ಬ, ಹರಿದಿನ, ಮದುವೆ-ಮುಂಜಿವೆ, ಜಾತ್ರೆಗಳಂತಹ ಸಂದರ್ಭದಲ್ಲಿ ಹಾಕುವ ರಂಗೋಲಿಗಳನ್ನು ಉತ್ಸವದ ರಂಗೋಲಿಗಳೆಂದು ಕರೆಯಬಹುದು. ಇಲ್ಲಿ ಧಾರ್ಮಿಕತೆ ಮತ್ತು ಅಲಂಕಾರಿಕತೆಗಳೆರಡೂ ಇರುತ್ತವೆ. ಆದರೆ ಇಲ್ಲಿ ಉತ್ಸಾಹ ಪ್ರಧಾನವಾದುದಾಗಿರುತ್ತದೆ. ಈ ರಂಗೋಲಿಯ ವಿವಿಧ ಪ್ರಕಾರಗಳು ಹೀಗಿರುತ್ತವೆ.




೧. ನಿತ್ಯದ ರಂಗೋಲಿ, ೨. ನಿರ್ದಿಷ್ಟವಾರದ ರಂಗೋಲಿ, ೩. ತಿಂಗಳ ರಂಗೋಲಿ, ೪. ಚಾತುರ್ಮಾಸದ ರಂಗೋಲಿ, ೫. ದೀಕ್ಷಾಸಂದರ್ಭದ ರಂಗೋಲಿ, ೬. ದೇವರ ಮುಂದೆ ಹಾಕುವ ರಂಗೋಲಿ, ೭. ಹಬ್ಬದ ರಂಗೋಲಿ, ೮. ಮದುವೆಯ ರಂಗೋಲಿ, ಇವುಗಳನ್ನು ಒಂದೊಂದಾಗಿ ವಿವರಿಸಿ ಹೇಳಬಹುದಾಗಿದೆ.

**೧.ನಿತ್ಯದ ರಂಗೋಲಿ:** ಪ್ರತಿದಿನ ರಂಗೋಲಿ ಹಾಕುವುದು, ಒಂದು ಸಹಜಕ್ರಿಯೆಯಾಗಿದೆ. ಇಲ್ಲಿ ಮುಂಜಾನೆ ಮತ್ತು ಸಾಯಂಕಾಲ ರಂಗೋಲಿ ಹಾಕುತ್ತಾರೆ. ದಿನಂಪ್ರತಿ ಹಾಕುವ ರಂಗೋಲಿಗಳಲ್ಲಿ ಹೆಚ್ಚು ಸಮಯ ಸಿಕ್ಕರೆ, ಕಲಾತ್ಮಕವಾದ ವಿನ್ಯಾಸಗಳನ್ನು ಹಾಕುತ್ತಾರೆ. ಕಡಿಮೆ ವೇಳೆಯಿದ್ದರೆ, ಶಾಸ್ತ್ರಕ್ಕಾಗಿ ಯಾದರೂ ಕೆಲವೊಂದು ಸುಳುವುಗಳನ್ನು, ಸಣ್ಣ ಚಿತ್ತಾರಗಳನ್ನು ಚಿತ್ರಿಸುತ್ತಾರೆ. ಹೆಚ್ಚಾಗಿ ಒಲೆ ಹಾಗೂ ಹೊಸ್ತಿಲಿಗೆ ಹಾಗೂ ಮನೆಯ ಮುಂದೆ ದಿನಾಲು ತಪ್ಪದೇ ರಂಗೋಲಿ ಹಾಕುತ್ತಾರೆ.

**೨. ನಿರ್ದಿಷ್ಟವಾರದ ರಂಗೋಲಿ:** ವಾರದ ಏಳು ದಿನಗಳಲ್ಲಿ ದಿನಕ್ಕೆ ಒಂದೊಂದು ರೀತಿಯಲ್ಲಿ ರಂಗೋಲಿ ಹಾಕುವ ಸಂಪ್ರದಾಯವಿದೆ. ಇಲ್ಲಿ ವಾರದ ಏಳು ದಿನಗಳು, ಏಳು ಗ್ರಹಗಳಿಗೆ ಸೇರಿದ ದಿನಗಳಾಗಿವೆ. ಕರ್ನಾಟಕದುದ್ದಕ್ಕೂ ಜನಪದರಲ್ಲಿ ಗ್ರಹಗಳ ಶಾಂತಿಗಾಗಿ ರಂಗೋಲಿ ಹಾಕಿದರೆ ಒಳ್ಳೆಯದಾಗುತ್ತದೆಯೆಂಬ ನಂಬಿಕೆಗಳಿವೆ. ತಮಿಳರಲ್ಲಿ ವಾರದ ಎಳುದಿನಗಳಲ್ಲಿಯೂ ಇಂತಹ ದಿನಕ್ಕೆ ಇಂತಹ ರಂಗೋಲಿ ಹಾಕಬೇಕೆಂಬ ಕಟ್ಟಳೆಗಳಿರುತ್ತವೆ. ಅಂತಹ ರಂಗೋಲಿಗಳಲ್ಲಿ ಬೀಜಾಕ್ಷರಗಳ್ನು ಬರೆಯುತ್ತಾರೆ. ಅವುಗಳಿಗೆ ನವಗ್ರಹಕೋಲಮ್‌ಗಳೆನ್ನುತ್ತಾರೆ. ತತ್ಸಂಬಂಧ ಧ್ಯಾನ ಶ್ಲೋಕಗಳಿವೆ. ಅಂತಹ ಆಚರಣೆಯಿಂದ ಆ ದಿನದ ಆದಿದೇವತೆಗೆ ಸಂತೋಷವಾಗುತ್ತದೆ. ತಮಗೆ ಶುಭವಾಗುತ್ತದೆ, ಎಂದು ಅವರು ನಂಬುತ್ತಾರೆ.

ಆದರೆ ಉತ್ತರ ಕರ್ನಾಟಕದ ಕಾರವಾರಭಾಗದಲ್ಲಿ ಸ್ವಲ್ಪ ಮಟ್ಟಿಗೆ ಈ ರೀತಿಯ ರಂಗೋಲಿ ಹಾಕುತ್ತಾರೆ. ಇಲ್ಲಿ ಮಂತ್ರ, ಮತ್ತು ಹಾಡು ಹೇಳುವುದಿಲ್ಲ. ಸೋಮವಾರ ದಿವಸ ಚಂದ್ರನ ರಂಗೋಲಿ, ಶಿವಪೀಠದ ರಂಗೋಲಿ, ಮಂಗಳವಾರ ಕಾಶಿಪೀಠ, ಬುಧವಾರ ಸ್ವಸ್ತಿಕದ ರಂಗೋಲಿ, ಗುರುವಾರ ವೃಂದಾವನದ ರಂಗೋಲಿ, ಶುಕ್ರವಾರ ಕಮಲದ ರಂಗೋಲಿ, ರವಿವಾರ ಸೂರ್ಯನ ರಂಗೋಲಿ ಹಾಕುತ್ತಾರೆ. ಉತ್ತರ ಕರ್ನಾಟದಲ್ಲಿ ಕೆಲವು ಮೇಲು ವರ್ಗದ ಜನರಲ್ಲಿ ಇಂತಹ ರಂಗೋಲಿ ಇಡುವ ಸಂಪ್ರದಾಯವಿದೆ. ಕರ್ನಾಟಕದಲ್ಲಿ ವಾಸಿಸುವ ಕೆಲವು ಅಯ್ಯಂಗಾರ, ಅಯ್ಯರ್, ಮುದಲಿಯಾರ ಮನೆತನಗಳಲ್ಲಿ ವಾರದ ರಂಗೋಲಿ




ಹಾಕುವುದು ಕಂಡುಬರುತ್ತದೆ. ಮದುವೆಯಾಗದ ಹೆಣ್ಣು ಮಕ್ಕಳು (ಅವರ ಜಾತಕದಲ್ಲಿ ಕುಜ ದೋಷವಿದ್ದರೆ) ಕುಜನು ಮದುವೆಗೆ ಅಡ್ಡಿ ಮಾಡುತ್ತಿದ್ದಾನೆಂದು ಭಾವಿಸಿ, ಮಂಗಳವಾರದ ರಂಗೋಲಿ ಇಟ್ಟು ಪೂಜೆ ಮಾಡುತ್ತಾರೆ. ಕಷ್ಟಗಳು ಹೆಚ್ಚಾಗಿ ಕಂಡುಬಂದಲ್ಲಿ, ತಮ್ಮ ಕುಂಡಲದಲ್ಲಿ ಶನಿಗ್ರಹವು ಕ್ರೂರವಾಗಿದೆ ಎಂತಲೂ ಪಂಚಮಶನಿ ತಮ್ಮ ರಾಶಿಗೆ ಇದೆಯೆಂದು ತಿಳಿದವರು ನಲವತ್ತು ವಾರ ಸಾಮಾನ್ಯವಾಗಿ ಈ ರಂಗೋಲಿ ಇಟ್ಟು ಅದರ ಮೇಲೆ ದೀಪ ಇಟ್ಟು, ಪೂಜೆ ಮಾಡುತ್ತಾರೆ. ಇದು ಗ್ರಹ ಶಾಂತಿಗಾಗಿ ಮಾಡುವ ಪೂಜೆಯಾಗಿದೆ. ವಾರದ ನಿರ್ದಿಷ್ಟ ರಂಗೋಲಿಗಳನ್ನು ಹಾಕುವುದು ಕಂಡುಬಂದಿಲ್ಲ. ಪ್ರಾದೇಶಿಕವಾಗಿ ಬಹುಪಾಲು ಜನರು ತಮಿಳು ಜನರಲ್ಲಿರುವಂತಹ ನಿರ್ದಿಷ್ಟ ವಾರದ ರಂಗೋಲಿಗಳು ಕರ್ನಾಟಕದಲ್ಲಿ ಅಷ್ಟಾಗಿ ಇಲ್ಲವೆಂದೇ ಹೇಳಬೇಕಾಗುತ್ತದೆ. ಅಲ್ಲಿಯಜನ ಇಲ್ಲಿಯೂ ವಾಸವಾಡಿ ಕೊಂಡಿರುವುದರಿಂದ ಒಬ್ಬರಿಂದೊಬ್ಬರಿಗೆ ವಾರದ ರಂಗೋಲಿಯ ಆಚರಣೆ ಪ್ರಸಾರವಾಗಿರುವ ಸಾಧ್ಯತೆಗಳು ಹೆಚ್ಚಾಗಿವೆ. ತಮಿಳು ಜನರು ವಾಸವಾಗಿರುವ ಮನೆಯ ಸುತ್ತಮುತ್ತಲಿನ ಜನರು ಅವರಂತೆ ವಾರದ ರಂಗೋಲಿ ಹಾಕುವುದು

ಸಾಮಾನ್ಯವಾಗಿ ಕಂಡುಬರುತ್ತದೆ.

೩. ತಿಂಗಳ ರಂಗೋಲಿ: ಚೈತ್ರಾಂಗಣ ರಂಗೋಲಿ, ಚೈತ್ರಮಾಸದ ರಂಗೋಲಿ, ಚೈತ್ರ ಮಾಸದಲ್ಲಿ ಒಂದು ತಿಂಗಳು ಪ್ರತಿ ದಿವಸ ಈ ರಂಗೋಲಿಯನ್ನು ಹಾಕುತ್ತಾರೆ. ಸ್ತ್ರೀಯರಿಗೆ ಮೀಸಲಾದ ವ್ರತವಿದಾಗಿದೆ. ಸೌಭಾಗ್ಯದ ರಕ್ಷಣೆ, ಪುತ್ರಸಂತಾನದ ಆಶಯ ಈ ವೃತದಲ್ಲಿವೆ. ಜನಪದರಿಗೆ ಒಳ್ಳೆಯದು, ಕೆಟ್ಟದುದರ ಬಗೆಗೆ ನಂಬಿಕೆಗಳಿವೆ. ಯಾವುದೇ ಕೆಲಸ ಮಾಡಿದರೂ ಒಳ್ಳೆಯ ವಾರ, ತಿಥಿ ನೋಡಿಯೇ ಕಾರ್ಯ ಪ್ರಾರಂಭಿಸಿವುದು ಒಂದು ಸಂಪ್ರದಾಯವಾಗಿದೆ. ಚೈತ್ರಾಂಗಣ ವೃತದ ರಂಗೋಲಿ ಚೈತ್ರದಲ್ಲಿಯೇ ಮಾಡಬೇಕೆಂಬ ನಿಯಮವಿದೆ. ಆದ್ದರಿಂದಲೇ ಇದಕ್ಕೆ ಚೈತ್ರಾಂಗಣ ರಂಗೋಲಿ ಎಂದು ಹೆಸರು.

ಈ ರಂಗೋಲಿಯನ್ನು ಮನೆಯ ಬಾಗಿಲ ಮುಂದೆ ಇಲ್ಲವೆ ತುಳಸಿಯ ಕಟ್ಟೆಯ ಹತ್ತಿರ ಜಗಲಿಯಲ್ಲಿ, ಮನೆಯ ಪಡಸಾಲೆಯ ಒಂದು ಮೂಲೆಯಲ್ಲಿ ಹಾಕುತ್ತಾರೆ. ವಯಸ್ಸಿನ ಭೇದವಿಲ್ಲದೆ ಮುತ್ತೈದೆಯರು ಈ ವೃತವನ್ನು ಆಚರಿಸುತ್ತಾರೆ. ರಂಗೋಲಿ ಹಾಕುವ ಸ್ಥಳವನ್ನು ಮಡಿಯಿಂದ ಸಾರಿಸಿ, ಅದರ ಮೇಲೆ ಅಕ್ಕಿಯ ಹಿಟ್ಟಿನ ರಂಗೋಲಿಯ ವಿವಿಧ ಚಿತ್ರಗಳನ್ನು ರಚಿಸುತ್ತಾರೆ. ಗೋಪದ್ಮ, ಸ್ವಸ್ತಿಕ, ಮೀನು, ತೊಟ್ಟಿಲು, ಶಂಖ, ಚಕ್ರ, ಆನೆ, ರಥ ಮೊದಲಾದ ಚಿತ್ರಗಳನ್ನು ಹಾಕುತ್ತಾರೆ. ಕೆಲವರು



ಬಿಳಿಯ ಅಕ್ಕಿಯ ಹಿಟ್ಟಿನ ರಂಗೋಲಿಯನ್ನು ಹಾಕಿದರೆ, ಇನ್ನು ಕೆಲವರು ಬೇರೆ ಬಣ್ಣದ ವಿನ್ಯಾಸವನ್ನು ಚೆಂದವಾಗಿ ಕಾಣಲು ಹಾಕುತ್ತಾರೆ. ನಡುವೆ ಶಿವ, ಪಾರ್ವತಿ, ಗೌರಿ, ರಾಧಾ ಕೃಷ್ಣರ ಚಿತ್ರ ಚಿತ್ರಿಸಿ, ಅದರ ಮುಂದೆ ಹೂಗಳನ್ನು ಹಾಕಿ ಪೂಜಿಸುತ್ತಾರೆ. ಊದಿನಕಡ್ಡಿ ಬೆಳಗಿ, ನೈವೇದ್ಯ ಹಿಡಿಯುತ್ತಾರೆ. ನಂತರ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಬೇಡಿಕೊಳ್ಳುತ್ತಾರೆ ವಿಧವೆಯವರು, ಚಿಕ್ಕಮಕ್ಕಳು ಮತ್ತು ಮುಟ್ಟಾದವರು ಈ ರಂಗೋಲಿ ಹಾಕಬಾರದೆಂಬ ನಿಯಮವಿದೆ. ಮದುವೆಯಾದ ಹೆಣ್ಣಮಕ್ಕಳು ವೃತ ಮಾಡುವಾಗ ಋತುಮತಿಯಾದರೆ, ಬೇರೆಯವರ ಕಡೆಯಿಂದ ರಂಗೋಲಿಯನ್ನು ಹಾಕಿಸುತ್ತಾರೆ. ಇನ್ನು ಕೆಲವರು ಸ್ನಾನ ಮಾಡಿ ವೃತ ಮಾಡುವದೂ ಉಂಟು. ಇಲ್ಲಿ ಸಂದರ್ಭಕ್ಕೆ ತಕ್ಕಂತೆ ನಿಯಮಗಳು ಸರಳಗೊಂಡಿವೆ. ಈ ವೃತದ ರಂಗೋಲಿಯನ್ನು ಬ್ರಾಹ್ಮಣ ಮತ್ತು ಮರಾಠಿಗರಲ್ಲಿ ಹೆಚ್ಚಾಗಿ ಕಾಣುತ್ತೇವೆ. ಮಹಾರಾಷ್ಟ್ರದಲ್ಲಿಹಾಕುವ ರಂಗೋಲಿಗಳಿಗೂ ಇಲ್ಲಿ ಹಾಕುವ

ರಂಗೋಲಿ ಚಿತ್ರಗಳಿಗೂ ಸಾದೃಶ್ಯವಿರುತ್ತದೆ. ಮಹಾರಾಷ್ಟ್ರದಲ್ಲಿ ಚೈತ್ರಾಂಗಣ ರಂಗೋಲಿ ಹಾಕುವುದು ಒಂದು ಲೌಕಿಕವೃತವಾಗಿ ಪರಿಣಮಿಸಿದೆ. ಚೈತ್ರ ಶುದ್ಧ ತೃತಿಯಾದಿಂದ ವೈಶಾಖ ಶುದ್ಧ ತೃತಿಯಾ (ಅಕ್ಷಯ ತೃತೀಯಾ)ದವರೆಗೆ ಒಂದು ತಿಂಗಳು ಪ್ರತಿ ದಿವಸ, ಈ ರಂಗೋಲಿಯನ್ನು ಹಾಕುತ್ತಾರೆ. ಬೆಳಿಗ್ಗೆ ಮನೆಯ ಅಂಗಳದಲ್ಲಿ ನೀರಿನ ಥಳಿ ಹಾಕಿ, ಒಂದು ಚೌಕೋನ ಸ್ಥಳವನ್ನು ಗೋಮಯದಿಂದ ಸಾರಿಸಿ, ರಂಗೋಲಿ (ಬೆಣಚಿನ ಕಲ್ಲಿನ ಪುಡಿ) ಹಿಟ್ಟಿನಿಂದ ಚೈತ್ರಾಂಗಣರಂಗೋಲಿ ಹಾಕುತ್ತಾರೆ. ಈ ರಂಗೋಲಿಯಲ್ಲಿ ಸೂರ್ಯ, ಚಂದ್ರ, ಶಂಖ, ಚಕ್ರ, ಗೋಪದ್ಮ, ಬೀಸಣಿಕೆ, ಮೀನ, ತುಳಸಿಯ ವೃಂದಾವನ, ಉದಕ ಕಂಬ, ದವನ, ಕೂರ್ಮ, ಐದು ಗೊಂಬೆ, ರಥ ತೊಟ್ಟಿಲು, ಶಿವಪಾರ್ವತಿ(ಗೌರಿ), ಸ್ವಸ್ತಿಕ ಚಿಹ್ನೆ, ತ್ರಿಪುರ, ಆನೆ ಮೊದಲಾದ ಚಿತ್ರಗಳಿರುತ್ತವೆ. ಈ ರಂಗೋಲಿಯಲ್ಲಿ ಬರುವ ಸ್ವಸ್ತಿಕ ಚಿಹ್ನೆ ಮಾಂಗ್ಯಲ್ಯ ಸೂಚಕ. ಇದು ಸೂರ್ಯನ ಆಸನ ಎಂದು ತಿಳಿದು ಪೂಜಿಸಲಾಗುತ್ತದೆ. ಮತ್ಸ್ಯಾವತಾರದ ನೆನಪಿಗಾಗಿ ಮೀನ ಮತ್ತು ಚೈತ್ರದ ಉರಿಬಿಸಿಲನ್ನು ಲಕ್ಷಿಸಿ ಉದಕ ಕಂಬವೆಂಬ ಚಿತ್ರಗಳ ಯೋಜನೆ ಮಾಡಲಾಗಿದೆ. ಈ ರಂಗೋಲಿಯಲ್ಲಿಯ ಗೊಂಬೆಗಳೆಂದರೆ ಚೈತ್ರದ ಗೌರಿ. ತುಳಸಿಗೆ ತಂಪು ಉಂಟುಮಾಡುವ ದೃಷ್ಟಿಯಿಂದ ವೃಂದಾವನದ ಚಿತ್ರ ಈ ರಂಗೋಲಯಲ್ಲಿದೆ. ದವನವು ಶಿವನ ಪ್ರೀತಿಯ ವಸ್ತು. ಆದುದರಿಂದ ಶಿವಪೂಜೆಗಾಗಿ ಈ ವನಸ್ಪತಿಯ ಚಿತ್ರವು ರಂಗೋಲಿಯಲ್ಲಿರುತ್ತದೆ. ಚಿತ್ರಕಲೆಯ ರಕ್ಷಣೆ, ಸೌಂದರ್ಯದೃಷ್ಟಿಯ ವಿಕಾಸವಾಗಿ ಮನಸ್ಸಿನಲ್ಲಿ ಮಂಗಲಕರ ವಿಚಾರಗಳಿರಲಿಯೆಂಬ ಉದ್ದೇಶ ಈ ರಂಗೋಲಿಯದು. ಆದುದರಿಂದ ವ್ರತಾಚರಣೆಯೆಂಬ ದೃಷ್ಟಿಯಿಂದ ಈ ರಂಗೋಲಿ ರೂಢಿಗೆ ಬಂದಿದೆ. ಕರ್ನಾಟಕದಲ್ಲಿ ಬೆಳಗಾವಿ, ಧಾರವಾಡ, ವಿಜಾಪೂರ ಗಡಿ ಪ್ರದೇಶಗಳಲ್ಲಿ ಬ್ರಾಹ್ಮಣ ಹೆಣ್ಣುಮಕ್ಕಳು ಹೆಚ್ಚಾಗಿ ಈ ವೃತವನ್ನು ಆಚರಿಸುತ್ತಾರೆ. ಇನ್ನುಳಿದ ಕಡೆ ಈ ಆಚರಣೆ ಕಂಡುಬರುದಿಲ್ಲ.

೪. **ಚಾತುರ್ಮಾಸದ ರಂಗೋಲಿ:** ಚಾತುರ್ಮಾಸದ ರಂಗೋಲಿ, ಮದುವೆಯಾದ ಹೆಣ್ಣಮಕ್ಕಳು ಮಾತ್ರ ಹಾಕುವ ರಂಗೋಲಿಯಾಗಿದೆ. ಈ ವೃತದ ರಂಗೋಲಿಯನ್ನು ಆಷಾಢಮಾಸದ ದಶಮಿಯ ಶುಭದಿನದಂದು ಪ್ರಾರಂಭ ಮಾಡಿ, ಕಾರ್ತಿಕ ಮಾಸದ ಮೋಹಿನಿ ದ್ವಾದಶಿ ದಿನದವರೆಗೆ ಹಾಕುತ್ತಾರೆ. ಪ್ರಾರಂಭ ಮಾಡಿದ ವರ್ಷದಿಂದ ಐದು ವರ್ಷಗಳವೆರೆಗೆ ತಪ್ಪದೇ ಈ ವೃತವನ್ನು ಆಚರಿಸಬೇಕೆಂಬ ನಿಯಮವಿದೆ. ನಡುವೆ ಬಿಟ್ಟರ ವಿಘ್ನಗಳು ಬರುತ್ತವೆ. ಅಪಶಕುನ ಕಂಡುಬಂದು ಕೇಡಾಗುತ್ತದೆಯೆಂಬ ಭಯವೂ ಇದೆ. ಚಾತುರ್ಮಾಸದ ರಂಗೋಲಿ ಹಾಕುವ ಸಂಪ್ರದಾಯ ಕರ್ನಾಟಕದುದ್ದಕ್ಕೂ ಪ್ರಚಲಿತದಲ್ಲಿದೆ.


ಜನಪದರಲ್ಲಿ ಯಾವುದೇ ಆಚರಣೆಗೆ ಒಂದು ಹಿನ್ನಲೆ ಇದ್ದೇ ಇರುತ್ತದೆ.


































ರಂಗೋಲಿ ಫೋಟೋಗಳು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಕೊಡುಗೆ
(ಕಲಾ ಪ್ರತಿಭೋತ್ಸವದಲ್ಲಿ ಭಾಗವಹಿಸಿದ ರಂಗೋಲಿ ಕಲಾವಿದರು ರಚಿಸಿದ ರಂಗೋಲಿ ಚಿತ್ರಗಳು)

ಈ ಚಾತುರ್ಮಾಸದ ವ್ರತ ಇದಕ್ಕೆ ಹೊರತಾಗಿಲ್ಲ. ಈ ವ್ರತವನ್ನು ಕುರಿತು ಪ್ರಚಲಿತದಲ್ಲಿರುವ ಕಥೆಯೊಂದು ಹೀಗಿದೆ. ಒಂದುದಿನ ದೇವಲೋಕದಲ್ಲಿ ದೇವರ ಸಭೆ ಸೇರಿ ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರಂತೆ ಆಗ ಇಂದ್ರ ಚಂದ್ರ ಏಕಾದಶಿಯ ಏಕಪಾಲಕರೂ ದ್ವಾದಶಿಯ ದ್ವಾರಪಾಲರೂ ಚಾತುರ್ಮಾಸದ ರಂಗೋಲಿಯಾರು ಹಾಕಿಲ್ಲ ಎಂದು ಆಕ್ಷೇಪಿಸಿದಂತೆ, ಇಂದ್ರಾದೇವಿ ಹಾಕಿದ್ದಾಳೆ, ಚಂದ್ರಾದೇವಿ ಹಾಕಿದ್ದಾಳೆ, ಸಾವಿತ್ರಿದೇವಿ ಹಾಕಿದ್ದಾಳೆ, ಆದರೆ ಶ್ರೀ ಕೃಷ್ಣನ ತಂಗಿ ಸುಭದ್ರೆ ಮಾತ್ರ ಹಾಕಿಲ್ಲವೆಂದು ಆರೋಪಿಸುತ್ತಾರೆ. ಆಗ ಯಮ ದೇವ ಯಾರೇ ಆಗಿರಲಿ ಅವರನ್ನು ಹೆಡಮುರಿಗೆ ಕಟ್ಟಿ ಎಳೆದುಕೊಂಡು ಬನ್ನಿರಿ ಎಂದು ತನ್ನ ದೂತರಿಗೆ ಆಜ್ಞೆ ಮಾಡುತ್ತಾನೆ. ಈ ವಿಷಯ ಕೃಷ್ಣನಿಗೆ ಗೊತ್ತಾಗುತ್ತದೆ. ಯಮದೂತರು ಬರುವುದಕ್ಕಿಂದ ಮೊದಲೇ ತಾನು ಹೋಗಿ ತಂಗಿಯನ್ನು ಕಾಪಾಡಬೇಕೆಂದು ಕೃಷ್ಣನು ಗರುಡನ ಮೇಲೆ ಕುಳಿತು ಸುಭದ್ರೆಯ ಮನೆಗೆ ಬರುತ್ತಾನೆ ಎಂದೂ ಇಲ್ಲದ ಅಣ್ಣ ಇಂದೇಕೆ ಬಂದನೆಂದು ಮುತ್ತಿನ ಗದ್ದಿಗೆಯನ್ನು ಹಾಸಿ, ಮುತ್ತಿನ ಗಿಂಡಿಯಲ್ಲಿ ನೀರು ತಂದು ಪಾದತೊಳೆಯುತ್ತಾಳೆ. ಕೃಷ್ಣನು ತಂಗಿಗೆ ನೀನು ಯಮನ ಪ್ರೀತಿಯ ವ್ರತವಾದ ರಂಗೋಲಿಯ



ವ್ರತವನು ಮಾಡುವುದು ಮರೆತಿರುವೆಯಲ್ಲ ಎಂದು ನೆನಪಿಸುತ್ತಾನೆ. ಶ್ರೀಕೃಷ್ಣನಂಥ ಅಣ್ಣ, ಅರ್ಜುನನಂಥ ಗಂಡರಿರಲು ನನಗೆ ವ್ರತದ ಅವಶ್ಯಕತೆಯಿಲ್ಲವೆಂದು ಸುಭದ್ರೆಯ ನುಡಿಯುತ್ತಾಳೆ. ಕೃಷ್ಣ ರಂಗೋಲಿ ವ್ರತದ ಮಹಿಮೆಯನ್ನು ಹೇಳಿ. ರಂಗೋಲಿ ವ್ರತದಿಂದ ನಿನ್ನ ಕುತ್ತ ಪರಿಹಾರವಾಗಿ, ಒಳ್ಳೆಯದಾಗುವುದು; ನೀನು ಈಗಿನಿಂದಲೇ ಬೆಟ್ಟ ಗುಡ್ಡಗಳಿಗೆ ಹೋಗಿ ಹಿಟ್ಟಗಲ್ಲು ತಂದು, ಹವಳ, ಮುತ್ತು, ವಜ್ರ, ವೈಢೂರ್ಯ

ಹಾಕಿ, ಐದು ಪ್ರಕಾರ ರಂಗೋಲಿ ಮಾಡಿ, ಐದು ವರ್ಷ ಹಾಕುವ ವ್ರತವನ್ನು ದಿನಾಲು ಐದರಂತೆ ಒಂದೇ ವರ್ಷದಲ್ಲಿ ಹಾಕಿ ಮುಗಿಸಲು ಹೇಳುತ್ತಾನೆ. ಸುಭದ್ರೆ ಒಂದೇ ವರ್ಷದಲ್ಲಿ ಹಾಕಿ ಮುಗಿಸದಳಂತೆ. ಕೃಷ್ಣನೇ ಅಣ್ಣನಾಗಿ, ತಮ್ಮನಾಗಿ, ತಂದೆಯಾಗಿ, ದೇವರಾಗಿ, ಬ್ರಾಹ್ಮಣನಾಗಿ ಐದು ಜನ ತಾನೇ ಆಗಿ ತಂಗಿಯಿಂದ ದಾನವನ್ನು ಪಡಯುತ್ತಾನೆ. ಯಮದೂತರು ಬರುವದರೊಳಗೆ ಸುಭದ್ರೆಯೂ ಈ ವ್ರತವನ್ನು ಮುಗಿಸುತ್ತಾಳೆ ಇದರಿಂದ ಆಕೆಗೆ ಸದ್ಗತಿಯಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಈ ಕಥೆ ದಕ್ಷಿಣ ಕರ್ನಾಟಕದಲ್ಲಿಯೂ ಇದ್ದು ಚಾತುರ್ಮಾಸದ ರಂಗೋಲಿಯನ್ನು ಅಲ್ಲಿ ಗೋಪದ್ಮವ್ರತವೆಂದು ಕರೆಯುತ್ತಾರೆ.

**ಈ ವ್ರತದ ವಿಧಿ ವಿಧಾನಗಳು:** ಇದು ಮದುವೆಯಾದ ಹೆಣ್ಣುಮಕ್ಕಳು ಮಾಡುವ ವ್ರತ. ಆದರೆ ಮಕ್ಕಳಾದವರೂ ಮಕ್ಕಳಾಗದವರೂ ಈ ವ್ರತ ಆಚರಿಸುತ್ತಾರೆ. ವಿಧವೆಯರು ಮಾತ್ರ ಈ ವ್ರತ ಕೈಕೊಳ್ಳುವುದಿಲ್ಲ. ಗೊಲ್ಲ, ಸಿಂಪಿ, ಅಕ್ಕಸಾಲಿಗ, ಕ್ಷತ್ರಿಯ, ಬ್ರಾಹ್ಮಣ, ಕಮ್ಮಾರ ಹೀಗೆ ಜನಿವಾರ ಅಥವಾ ಯಜ್ಞೋಪವೀತ ಧರಿಸುವವರೆಲ್ಲರೂ ಹೆಚ್ಚಾಗಿ ಚಾತುರ್ಮಾಸದ ಈ ರಂಗೋಲಿ ವ್ರತ ಮಾಡುತ್ತಾರೆ.

**ವ್ರತದ ಸಿದ್ಧತೆ:** ಚಾತುರ್ಮಾಸ ಸಮೀಪಿಸುತ್ತಿದ್ದಂತೆ, ಸಾಮಾನ್ಯವಾಗಿ ಈ ವ್ರತಕ್ಕೆ ಬೇಕಾಗುವ ರಂಗೋಲಿಯ ಪುಡಿಯನ್ನು ತಯಾರಿಸಿಕೊಳ್ಳುತ್ತಾರೆ. ಕೆಲವರು ಅಕ್ಕಿಯ ಹಿಟ್ಟಿನಿಂದ ರಂಗೋಲಿ ಹಿಟ್ಟನ್ನು ತಯಾರಿಸುವರು. ಅಕ್ಕಿಯಲ್ಲಿ ಮುತ್ತು ಅಥವಾ ಹವಳವನ್ನು ಸಾಂಪ್ರದಾಯಿಕವಾಗಿ ಹಾಕಲೇಬೇಕೆಂದು ಹಾಕಿ, ಬೀಸಿ ಸಿದ್ಧಪಡಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ ಕಲ್ಲು ಸಿಗುವ ಕಡೆ ರಂಗೋಲಿ ಕಲ್ಲನ್ನೇ ಕುಟ್ಟಿ ಹಿಟ್ಟುಮಾಡುತ್ತಾರೆ. ಈ ಹಿಂದೆ ಕೊಟ್ಟಿಗೆಯಲ್ಲಿ ಸಾರಣೆ ಮಡಿ ರಂಗೋಲಿ ಹಾಕುತ್ತಿದ್ದರಂತೆ ಈಗ ಅದಕ್ಕೆ ಬದಲಾಗಿ ತುಳಸಿಕಟ್ಟೆಯ ಹತ್ತಿರ ಚಾತುರ್ಮಾಸದ ರಂಗೋಲಿ ಹಾಕುತ್ತಾರೆ. ತುಳಸಿಕಟ್ಟೆಯನ್ನು ಸುಣ್ಣ ಬಣ್ಣಗಳಿಂದ ಅಲಂಕರಿಸುತ್ತಾರೆ. ಪ್ರತಿದಿನವೂ ಆ ಸ್ಥಳವನ್ನು ಸಾರಿಸಿ. ಶುಭ್ರಗೊಳಿಸಿ, ಸ್ನಾನ ಮಾಡಿ ಅರಿಷಿಣ, ಕುಂಕುಮ, ಮುಖಕ್ಕೆ ಹಚ್ಚಿಕೊಂಡು ಮಡಿಯಿಂದ ತುಳಸಿಯನ್ನು ಪೂಜೆ ಮಾಡಿ, ನಂತರ ರಂಗೋಲಿ ಹಾಕುವ ಸ್ಥಳದಲ್ಲಿ ಕೃಷ್ಣ, ವಿಷ್ಣು ಗಣಪತಿಯ ಫೋಟೋ ಇಟ್ಟಿರುತ್ತಾರೆ. ಮೊದಲು ಗಣಪತಿಯನ್ನು ಪ್ರಾರ್ಥಿಸಿ ಈ ವ್ರತ ನಿರ್ವಿಘ್ನವಾಗಿ ಸಾಗುವಂತೆ ಬೇಡಿಕೊಳ್ಳುತ್ತಾರೆ. ನಂತರ ತಮ್ಮ ಮನೆಯ ದೇವರನ್ನು ಪ್ರಾರ್ಥಿಸಿ. ಎಲ್ಲ ದೇವರನ್ನು ಸ್ಮರಿಸುತ್ತಾ ಕೆಲವು ಸಲ ದೇವರ ಹಾಡುಗಳನ್ನು ಹಾಡುತ್ತಾ ರಂಗೋಲಿಯ ಚಿತ್ರಗಳನ್ನು ಬಿಡಿಸುತ್ತಾರೆ.

**ರಂಗೋಲಿ ಹಾಕುವ ಚಿತ್ರಗಳು:** ಪ್ರತಿನಿತ್ಯವೂ ವ್ರತವನ್ನು ಮಾಡುವವರು.

ಈ ಕೆಳಗಿನ ಚಿತ್ರಗಳನ್ನು ರಂಗೋಲಿಯಲ್ಲಿ ಹಾಕಲೇಬೇಕೆಂಬ ನಿಯಮಗಳಿವೆ.

೧. ಆಕಳು ಮತ್ತು ಕರು ೨. ಭೇರಿ ೩. ತೊಟ್ಟಿಲು ೪. ತಂತಿಬೇಲಿ ೫. ಕೊಳಲುಬಾಯಿ ೬. ಚಂದ್ರ ೭. ತುಳಸಿ ಬೃಂದಾವನ ೮. ಚಕ್ರ, ೯. ಶಂಖ ೧೦. ಸೂರ್ಯ ೧೧. ಸೌಭಾಗ್ಯ ಚಕ್ರ ೧೨. ಜ್ಞಾನಕಮಲ ೧೩. ಚಕ್ರಮಂಡಲ ೧೪. ಆಕಳ ಪಾದ ೧೫. ಗೌರಿಪಾದ ೧೬. ಪದ್ಮಮೂವತ್ತಮೂರು ೧೭. ಹನ್ನೆರಡು ಚಕ್ರಗಳು ೧೮. ಹನ್ನೆರಡು ಶಂಕಗಳು ಮತ್ತು ಬಾಗಿಲಲ್ಲಿ ಆನೆಯ ಚಿತ್ರಗಳಿರುತ್ತವೆ.

ದಕ್ಷಿಣ ಕರ್ನಾಟಕದ ಕಡೆಗೂ ಶ್ರೀ ಕೃಷ್ಣನೇ ತನ್ನ ತಂಗಿಯ ಕೈಯಿಂದ ಈ ವೃತವನ್ನು ಮಾಡಿಸಿದನೆಂಬ ಪೌರಾಣಿಕ ನಂಬಿಕೆಯಿದೆ. ಅಲ್ಲಿ ಬ್ರಾಹ್ಮಣರು, ವೈಶ್ಯರು ಮಾತ್ರ ಈ ವೃತ ಮಾಡುತ್ತಾರೆ. ಸ್ವರ್ಗದ ಕಲ್ಪನೆ, ಬಾಗಿಲು ಮೆಟ್ಟಿಲು, ದೇವರು, ದೇವರ ಚಿಹ್ನೆ ಇವೆಲ್ಲವನ್ನು ರಂಗೋಲಿಯಲ್ಲಿಯೇ ಬರೆದು ಪೂಜೆಮಾಡಿದ ನಂತರ, ಅವರ ಆತ್ಮ ಸ್ವರ್ಗಕ್ಕೆ ಸೇರುವ ಅರ್ಹತೆಯನ್ನು ಪಡೆದಂತೆ, ದೇವರ ಬಲಭಾಗದಲ್ಲಿ ಕೈಬೆರಳಿನಿಂದ ಸ್ವರ್ಗದ ಕಲ್ಪನೆಯ ಬಾಗಲಿಗೆ ಬಳಿ ಹೊರಗಿನಿಂದ ಒಳಕ್ಕೆ ಹೋದಂತೆ ಮಾಡುತ್ತಾರೆ. ದಕ್ಷಿಣ ಕನ್ನಡ ಭಾಗದಲ್ಲಿ ಗೋವಿನ ಚಿತ್ರ ಮಾಡಿ ಅದರ ಕಣ್ಣುಗಳ ಸ್ಥಾನದಲ್ಲಿ ಸೂರ್ಯ ಚಂದ್ರರನ್ನು ಹಣೆಯಲ್ಲಿ ಶ್ರೀ ಎಂಬ ಅಕ್ಷರವನ್ನು ಕುತ್ತಿಗೆ ಹಾಗೂ ಬೆನ್ನ ಮೇಲೆ ಶಂಖ, ಚಕ್ರ ಚಿತ್ರಗಳನ್ನು ಬರೆಯುತ್ತಾರೆ. ಮೈತುಂಬಾ ಒಂದಕ್ಕೊಂದು ಸಾಲುಸಾಲಾಗಿ ಮೂವತ್ಮೂರು ಪದ್ಮಗಳನ್ನು, ಬೆನ್ನ ಬಳಿ ಉದ್ದಕ್ಕೂ ಶ್ರೀರಾಮ ಜಯರಾಮ ಜಯ ಜಯರಾಮ ಎಂಬುದಾಗಿಯೂ ಬರೆಯುತ್ತಾರೆ. ಅದೇ ಚಾತುರ್ಮಾಸದ ವೇಳೆ ನಾಲ್ಕು ತಿಂಗಳ ಕಾಲ ದೇವರ ಮುಂದೆ ಸರ್ವತೋಮುಖಭದ್ರ ರಂಗೋಲಿಯನ್ನು ಬರೆಯುವ ರೂಢಿಯಿದೆ. ಉತ್ತರ ಕರ್ನಾಟಕದ ಕಡೆಗೆ ಮೇಲೆ ತಿಳಿಸಿದ ರೀತಿಯಲ್ಲಿ ಮಾತ್ರ ರಂಗೋಲಿ ಹಾಕುತ್ತಾರೆ.

ಚಾತುರ್ಮಾಸದ ರಂಗೋಲಿಯನ್ನು ಗೋಪದ್ಮ ಎಂದೂ ಕರೆಯುತ್ತಾರೆ. ತೆಲಗಿನಲ್ಲಿ ಗೋವು ಮುಗ್ಗು ಎಂದೂ ಕರೆಯುತ್ತಾರೆ. ಈ ರಂಗೋಲಿಯಲ್ಲಿ ಹಸು, ಕೃಷ್ಣ, ಸುಭದ್ರೆ ಸ್ವರ್ಗಕಲ್ಪನೆಯ ಚಿತ್ರವೆಲ್ಲವೂ ಇದ್ದು ಹಾಡಿನಲ್ಲಿ ಅನೇಕ ವಿವರಗಳು ದೊರೆಯುತ್ತವೆ. ಕನ್ನಡದಲ್ಲಿ ಗಿಣಿಪದ್ಮವೆಂದು ಕರೆಯುವ ರಂಗೋಲಿಯನ್ನು ತೆಲುಗಿನಲ್ಲಿ ಚಿಕ್ಕಮುಗ್ಗು ಎಂದು ಕರೆಯುತ್ತಾರೆ. ಇದು ಬ್ರಾಹ್ಮಣ ಹಾಗೂ ವೈಶ್ಯರಲ್ಲಿ ಇಂದಿಗೂ ಬಳಕೆಯಲ್ಲಿದೆ. ಹಸು ಬದಲು ಇಲ್ಲಿ ಗಿಣಿ ಇರುತ್ತದೆ. ಇಲ್ಲಿ ಗಿಣಿ ಆತ್ಮವೆನ್ನುವ ಕಲ್ಪನೆಯಿದೆ. ಇಂದಿಗೂ ಆಷಾಢ ಶುದ್ಧ ಪೌರ್ಣಿಮೆಯಿಂದ ಕಾರ್ತಿಕ ಶುದ್ಧ ಪೌರ್ಣಿಮೆಯವರೆಗೆ ನಾಲ್ಕು ತಿಂಗಳು ಪ್ರತಿನಿತ್ಯವೂ ತುಳಸಿಯ ಮುಂದೆ ಈ ರಂಗೋಲಿಯನ್ನು ಇಡುತ್ತಾರೆ. ತೆಲುಗಿನಲ್ಲಿ ಕೆಲವು ಪಂಚವೆನ್ನಲು ಮುಗ್ಗು ಎಂದು


ಇದನ್ನು ಕರೆಯುತ್ತಾರೆ. ಇದಕ್ಕಾಗಿ ಅಕ್ಕಿಯ ಹಿಟ್ಟು, ಮತ್ತು ಹವಳ ಅರಿಷಿಣ ಕಂಕುಮಗಳನ್ನು ಬಳಸಲಾಗುತ್ತದೆ. ಮುತ್ತು ಹವಳದ ಬದಲು ಕೆಲವು ಅಗಸೆಸೊಪ್ಪು ಒಣಗಿಸಿ ಪುಡಿ ಮಾಡಿಕೊಂಡು ಮತ್ತು ನೆಲ್ಲಿಕಾಯಿ ಸುಟ್ಟು ಅದರಿಂದಲೂ ಪುಡಿ ಮಾಡಿಕೊಳ್ಳುತ್ತಾರೆ. ಇವೆರಡನ್ನು ಬಳಸುವುದು ಅತಿ ವಿರಳ. ಇದರ ಫಲದಿಂದ ಪಾಪ ನಾಶ ಮತ್ತು ವೈಕುಂಠ ಪದವಿ ದೊರೆಯುವುದೆಂದು ಹೇಳುವ ಹಾಡೊಂದಿದ್ದು ಒಂದು ಜನ್ಮಾಂತರದ ಕಥೆಯನ್ನೊಳಗೊಂಡಿದೆ. ಮಧ್ಯ ಮಧ್ಯ ಕೃಷ್ಣನ ಬಗೆಗೆ ಅನೇಕ ವಿವರ ಹೇಳುತ್ತದೆ. ಈ ರಂಗೋಲಿಯನ್ನು ತುಳಸಿಯ ಮುಂದೆಯೇ ಇಡುವಂತೆ ಹಾಡಿನಲ್ಲಿ ಬರುತ್ತದೆ. ಅರ್ಜುನನ ಹೆಂಡತಿ ಸುಭದ್ರೆಗೆ ಕೃಷ್ಣನು ತಿಳಿಸಿದ ಈ ವೃತವನ್ನು ಆಕೆ ಐದು ವರ್ಷ ಆಚರಿಸಿ, ಕೃಷ್ಣನಿಗೆ ಬಾಗಿನ ಕೊಡುತ್ತಾಳೆ ಇಂಥ ಪೌರಾಣಿಕತೆಯೇ ಈರಂಗೋಲಿಯ ಸೃಷ್ಟಿಗೆ ಹಿನ್ನಲೆಯಾಗಿದೆ.

ಪ್ರತಿ ಚಾತುರ್ಮಾಸ, ಈ ವೃತದಲ್ಲಿ ರಂಗೋಲಿ ಚಿತ್ರ ರಚಿಸುವುದು ಮುಗಿದ ನಂತರ ಪೂಜೆ ಮಾಡಿ ನೈವೇದ್ಯ ಅರ್ಪಿಸುತ್ತಾರೆ. ಹೀಗೆ ಸಾಯಂಕಾಲ ದೀಪ ಹಚ್ಚಿ ಭಕ್ತಿಯಿಂದ ನಮಸ್ಕರಿಸುತ್ತಾರೆ. ನಾಲ್ಕು ತಿಂಗಳುಗಳ ಕಾಲವೂ ಮೊದಲ ದಿನದಂತೆ ಎಲ್ಲ ವಿಧಿವಿಧಾನಗಳನ್ನು ಮಾಡುತ್ತಾರೆ. ಮೊದಲದಿನ ತಲೆಯ ಮೇಲೆ ನೀರು ಹಾಕಿಕೊಂಡು ರಂಗೋಲಿ ಪೂಜೆ ಮಾಡಬೇಕು. ನಂತರದ ದಿನಗಳಲ್ಲಿ ಕೇವಲ ಸ್ನಾನ ಮಾಡಿದರೆ ಸಾಕು. ರಂಗೋಲಿಯನ್ನು ಸೋಮವಾರ ಅಮವಾಸ್ಯೆ, ದ್ವಾದಶಿ ದಿನಗಳಂದು ಹಾಕಬಾರದೆಂಬ ನಿಯಮವಿದೆ.

**ದಾನಕೊಡುವುದು:** ಈ ರಂಗೋಲಿ ವೃತದ ಸಂದರ್ಭದಲ್ಲಿ ದಾನ ಕೊಡುವುದರಿಂದ ಹೆಚ್ಚು ಫಲಸಿದ್ದಿಯೆಂಬ ಭಾವನೆಯಿದೆ. ಮೊದಲು ವರ್ಷ ವೃತ ಮುಗಿದ ದಿನ ಶಾವಗಿ ಪಾಯಸ ಮತ್ತು ಚಿಕ್ಕ ಪಾತ್ರೆಯನ್ನೂ, ಎರಡನೆಯ ವರ್ಷ ಪುಠಾಣಿ ಮತ್ತು ಶೇಂಗಾ ಉಂಡಿಗಳನ್ನು, ಮೂರನೆಯ ವರ್ಷ ಹನ್ನೆರಡು ಕರ್ಚಿಕಾಯಿಗಳನ್ನು ನಾಲ್ಕನೆಯ ವರ್ಷ ಹನ್ನೆರಡು ಚಕ್ಕಲಿಗಳನ್ನು, ಐದನೇ ವರ್ಷ ಹಣ್ಣುಗಳನ್ನು ದಾನವಾಗಿ ಕೊಡುತ್ತಾರೆ. ಅಧಿಕ ಮಾಸದಲ್ಲಿ ಒಂದು ತಿಂಗಳು ರಂಗೋಲಿ ವೃತವನ್ನು ಮಾಡಿದರೂ ನಾಲ್ಕು ತಿಂಗಳು ಮಾಡಿದಷ್ಟೇ ಪ್ರಾಪ್ತಿಯಾಗುತ್ತದೆಂಬ ನಂಬಿಕೆಯಿದೆ. ಈ ರಂಗೋಲಿಯ ಮೂಲ ಆಶಯ ಸಂತಾನೋತ್ಪತ್ತಿ ಹಾಗೂ ಸೌಭಾಗ್ಯದ ರಕ್ಷಣೆ ಆಗಿದೆ.

**೫. ದೀಕ್ಷಾ ಸಂದರ್ಭದ ರಂಗೋಲಿ:** ದೀಕ್ಷೆ ಆಯಾ ಧರ್ಮದವರ ಧಾರ್ಮಿಕ ಆಚರಣೆಯಾಗಿರುತ್ತದೆ. ವೀರಶೈವ ಧೀಕ್ಷಾ ಸಂದರ್ಭದಲ್ಲಿ ಹಾಕುವ ರಂಗೋಲಿಯ ಬಗೆಗೆ ವೀರಶೈವಾಮೃತಮಹಾಪುರಾಣ ನೀಡುವ ವಿವರಣೆ ಹೀಗಿದೆ.

ಸಾರಣೆಯಂ ಮಾಡುವಲ್ಲಿ ಪ್ರಾಣಿಮಾತ್ರವು ನೋಯದಂತೆ ತ್ರೈಲೋಕ್ಯಮಖಿಲಂ ಎಂಬಂತೆ ಸಾರಿಸಿ ಬಳಿಕ ಅಷ್ಟದಳ, ಶತದಳ, ಸಹಸ್ರದಳ ಕಮಲ ಬಂದದ ಪುರಾತನ ಕಥಾಪ್ರೀತಕ ಬಹುಪುಷ್ಪಾದಿ ಪಂಚವರ್ಣದ ರಂಗವಲ್ಲಿಯಿಂದಾದರೂ ಮುತ್ತು ಹವಳ ರತ್ನ ಮೊದಲಾದ ಚೂರ್ಣಗಳಿಂದಾದರೂ ಬಿಳಿಯ ಹಿಟ್ಟು ಮೊದಲಾದವುಗಳಿಂದ ರಂಗವನಲಂಕರಿಸಿ, ಪಚ್ಚ ಕರ್ಪೂರ ಕುಂಕುಮವನ್ನು ಕಸ್ತೂರಿಯ ಪುಡಿಗಳಂ ಎರಚಿ ಯಾವಂತಃ ಪತಿತಾ ಭೂವತಾ ಎಂಬರ್ಥದಿಂ ಕಲಶವಂ ರಚಿಸುವುದು. ಸಮ್ಮಾರ್ಜನೆ ಶತಾಧಿಕಾ ಪುಣ್ಯವು ಸಾರನೆಯು, ಸಾರಣೆಗೆ ಶತಗುಣ ಫಲವು. ಬಂಧವನಿಟ್ಟರೆ ಭವಹರವು. ಸ್ವಸ್ತಿಕವು ಶತೃನಾಶವಂಗ್ಯೆಯುವುದು; ಮುದ್ರರಂಗವಲ್ಲಿಯೂ ಮೋಕ್ಷಪ್ರದವು ಕಳಶಾಶ್ರಯದ ಚೌಕವೇ ಮಹತ್ವವುಳ್ಳದ್ದು. ಆ ಚೌಕಮಧ್ಯದಲ್ಲಿ ಅಂಗುಲ ಪ್ರಮಾಣದಿಂ ತಂಡುಲಂಗಳನಲಂಕರಿಸಿ ಆಚಾರ್ಯನು ಸ್ವರ್ಣರಂಜಿತ ತಾಮ್ರ ಮೃಣ್ಮಯಾದಿ ಕಲಶಗಳನ್ನು ಚತುರ್ದಿಕ್ಕುಗಳಲ್ಲಿ ನಾಲ್ಕು ಮಧ್ಯದಲ್ಲಿ ಒಂದನ್ನು ತೀರ್ಥಜಲದಿಂ ತುಂಬಿ ಪ್ರತಿಷ್ಠಿಸುವುದು ಎಂಬ ವಿವರಣೆಯನ್ನು ನೀಡುತ್ತದೆ. (ನೋಡಿ: ಡಾ. ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ ಪುಟ-೮೫) ಇದರಂತೆ ಬ್ರಾಹ್ಮಣ, ಅಕ್ಕಸಾಲಿ, ಬಡಿಗ ಮುಂತಾದ ಜನಾಂಗಗಳಲ್ಲಿಯೂ ದೀಕ್ಷಾಸಂದರ್ಭದಲ್ಲಿ ಸುಳುವು, ಭೂಮಿತಿ, ಆಕೃತಿಯಂತಹ ವಿನ್ಯಾಸ ರಂಗೋಲಿ ಹಾಕಲಾಗುತ್ತದೆ.



**೬. ದೇವರ ಮುಂದೆ ಹಾಕುವ ರಂಗೋಲಿ:** ದೇವರ ಮುಂದೆ ಹಾಕುವ ರಂಗೋಲಿಯಲ್ಲಿ ಎರಡು ವಿಧಗಳಿವೆ. ಒಂದು; ಮನೆಯಲ್ಲಿಯ ದೇವರ ಮುಂದೆ ಹಾಕುವ ರಂಗೋಲಿ. ಇನ್ನೊಂದು ದೇವಸ್ಥಾನದಲ್ಲಿಯ ದೇವರ ಮುಂದೆ ಹಾಕುವ ರಂಗೋಲಿ. ಇವೆರಡೂಕಡೆಗಳಲ್ಲಿ ಹಾಕುವ ರಂಗೋಲಿಯ ಮೂಲ ಉದ್ದೇಶ ಒಂದೇ ಆಗಿದೆ. ರಂಗೋಲಿಯ ಚಿತ್ರವಿನ್ಯಾಸಗಳೂ ಸಾಮಾನ್ಯವಾಗಿ ಧಾರ್ಮಿಕ ಹಿನ್ನೆಲೆಯವುಗಳಾಗಿವೆ. ಮಾದರಿಗಾಗಿ ಕೆಲವು ಚಿತ್ರಗಳನ್ನು ಇಲ್ಲಿ ಹೆಸರಿಸಬಹುದು; ಸ್ವಸ್ತಿಕ, (ಗಂಡು ಹೆಣ್ಣು), ಅಧಿಕ, ತುಳಸಿ, ಪಾದಗಳು, ಸೂರ್ಯ, ಚಂದ್ರ, ನಾಗಪ್ಪ, ಶಂಖ,ಚಕ್ರ, ಪದ್ಮ, ದಂಡ, ಕಮಲ, ಕಲಶ, ನವಿಲು, ಗೋಪಾಳ, ಆನೆ, ಕೂರ್ಮ, ನಕ್ಷತ್ರ, ದ್ವಾರಪಾಲಕ, ಬಿಲ್ವಪತ್ರೆ, ತ್ರಿಶೂಲ ರಂಗೋಲಿಯ ಈ ಚಿತ್ರಗಳನ್ನು ದೇವರ ಮುಂದೆ ಅತ್ಯಂತ ಭಕ್ತಿ ಭಾವದಿಂದ ಹಾಕುತ್ತಾರೆ.

**೭. ಹಬ್ಬದ ರಂಗೋಲಿ:** ಆಯಾ ಹಬ್ಬಗಳಲ್ಲಿ ಅವುಗಳ ಪೌರಾಣಿಕ

ಕಥೆಯಲ್ಲಿಯೇ ರಂಗೋಲಿ ಚಿತ್ರ ಬಿಡಿಸುತ್ತಾರೆ. ಜೇಷ್ಠ ಬಹುಳ ಅಮಾವಾಸ್ಯೆಯ ದಿನ ಬಸವನ ಪೂಜೆ ನಡೆಯುತ್ತಿದ್ದು, ಅಂದು ಜೋಡಿ ಎತ್ತುಗಳ ಬಸವನ ಚಿತ್ರದ ರಂಗೋಲಿ ಹಾಕುತ್ತಾರೆ. ಆಷಾಢ ಬಹುಳ ಅಮವಾಸ್ಯೆಯ ದಿನ, ಭೀಮನ ಪೂಜೆ ಮಾಡುವ ಸಂಪ್ರದಾಯವಿದ್ದು, ಅಂದು ರುದ್ರನ ಜಡೆಯ ರಂಗೋಲಿ ಹಾಕುತ್ತಾರೆ.

ಕಾರ್ತಿಕ ಶುದ್ಧ ಪಾಡ್ಯದ ದಿನ ಬಲಿ ಚಕ್ರವರ್ತಿಯ ಸ್ಮರಣೆಗಾಗಿ ಬಲಿಪಾಡ್ಯದ ದಿನ ಬಲೀಂದ್ರನ ಕೋಟೆಯ ಹೆಸರಿನ ರಂಗೋಲಿ ಹಾಕುತ್ತಾರೆ. ಇದರ ಮೇಲೆ ಹೊಸ ದವಸಧಾನ್ಯಗಳನ್ನಿಟ್ಟು ಪೂಜೆ ಸಲ್ಲಿಸುವರು. ಮಾಘಶುದ್ಧ ರಥಸಪ್ತಮಿಯಂದು ತುಳಸಿ ವೃಂದಾವನದ ಮುಂದ ರಥದ ರಂಗೋಲಿ ಬಿಡಿಸುವುದುಂಟು. ಮಗ್ಗಲು ಅಂಗಡಿ ಚಿತ್ರಗಳನ್ನು ಬಿಡಿಸಿ, ಅಲ್ಲಿ ಅರಿಷಿಣ, ಕುಂಕುಮ, ಜೀರಿಗೆ, ಸಾಸಿವೆ ಮುಂತಾದ ವಸ್ತುಗಳನ್ನಿರಿಸಿ ಪೂಜೆ ಸಲ್ಲಿಸುತ್ತಾರೆ.


ಕಾರ್ತಿಕ ಶುದ್ಧ ದ್ವಾದಶಿಯ ದಿನ ತುಳಸಿಯ ಮಂಟಪದ ರಂಗೋಲಿ ಚಿತ್ರ ಬಿಡಿಸುವುದುಂಟು ಅಲ್ಲಿ ರಂಗೋಲಿಯ ಮೇಲೆ ದೀಪವಿಟ್ಟು ಪೂಜಿಸುತ್ತಾರೆ. ನಾಗರಪಂಚಮಿಯ ಹಬ್ಬದ ಮೊದಲ ದಿನ ನಾಗಪ್ಪ ಮನೆಯಲ್ಲಿ ಬರುವಂತೆ ರಂಗೋಲಿ ಹಾಕಿದರೆ, ಮತ್ತೊಂದು ದಿನ ಹೊರಗೆ ಹೋಗುವಂತೆ ರಂಗೋಲಿ ಹಾಕುತ್ತಾರೆ. ಕೃಷ್ಣಾಷ್ಟಮಿ ದಿನ ತೊಟ್ಟಿಲ ರಂಗೋಲಿ ಹಾಕುತ್ತಾರೆ. ಶ್ರಾವಣ ಮಾಸದ ವರಮಹಾಲಕ್ಷ್ಮೀ ವ್ರತದಂದು ಪದ್ಮಗಳಿಂದಲೇ ಲಕ್ಷ್ಮೀಯ ಮಂಟಪದ ರಂಗೋಲಿ ಹಾಕುತ್ತಾರೆ. ಭಾದ್ರಪದ ಶುದ್ಧ ಚತುರ್ದಶಿಯಂದು ಅನಂತಪದ್ಮನಾಭನ ವ್ರತ ಆ ದಿನ ಅನಂತನ ಗದ್ದುಗೆಯ ರಂಗೋಲಿ ಬಿಡಿಸುತ್ತಾರೆ. ಹೀಗೆ ಹಬ್ಬಗಳಲ್ಲಿ ವೈವಿಧ್ಯಮಯ ರಂಗೋಲಿ ಹಾಕುವುದು ಕಂಡುಬರುತ್ತದೆ.

ಲಂಬಾಣಿಯ ಜನರು ದೇವತಾ ಕಾರ್ಯಗಳಲ್ಲಿ ಆಯಾ ದೇವತೆಗಳಿಗೆ ಅನುಗುಣವಾಗಿ ಅವರ ಹೆಸರಿನಿಂದ ರಂಗೋಲಿ ಹಾಕುತ್ತಾರೆ. ಪೂರ್ವ ಪಶ್ಚಿಮವಾಗಿ ಕುಳಿತುಕೊಂಡು ರಂಗೋಲಿ ಹಾಕಬೇಕೆಂಬ ನಿಯಮಗಳಿವೆ. ಲಂಬಾಣಿ ಜನರು ಪೂಜಾ ಸ್ಥಾನದಲ್ಲಿ ಮಾತ್ರ ರಂಗೋಲಿ ಹಾಕುತ್ತಾರೆ.

ತುಳಜಾಭವಾನಿ, ದುರ್ಗಾಮಾತೆ ಹಾಗೂ ಸತೀಸತ್ತಾ ದೇವತೆಗಳಿಗೆ ವಿಶಿಷ್ಟ ರಂಗೋಲಿಗಳಿವೆ. ದುರ್ಗಾಮಾತೆಯ ಮುಂದೆ ವರ್ತುಲಾಕಾರವಾಗಿಯೂ ಭವಾನಿಯ ಮುಂದೆ ಚೌಕಾಕಾರವಾಗಿಯೂ ಸತ್ತಿಯ ಮುಂದೆ ತ್ರಿಕೋನಾಕಾರವಾಗಿಯೂ ರಂಗೋಲಿ ಹಾಕುತ್ತಾರೆ. ಹೀಗೆ ರಂಗೋಲಿಯ ಹೊಯ್ಯುವಾಗ ರೇಖೆಗಳು ಸಮ ಪ್ರಮಾಣದಲ್ಲಿ ಬರಲು ಅಳತೆಗೋಲು

ಹಿಡಿಯುತ್ತಾರೆ. ಪ್ರತಿ ಎರಡು ರೇಖೆಗಳು ಪರಸ್ಪರ ಸಂಧಿಸುವಲ್ಲಿ ಒಂದೊಂದು ಲಿಂಬೆಯ ಹಣ್ಣು, ಉತ್ತತ್ತಿ, ಅಡಿಕೆ, ಹೂ, ಕಾಯಿಗಳನ್ನಿಟ್ಟು ಪೂಜೆ ಸಲ್ಲಿಸುತ್ತಾರೆ. ಲಂಬಾಣಿ ಜನರಲ್ಲಿ ಪುರುಷರೇ ರಂಗೋಲಿ ಬರೆಯುತ್ತಾರೆ. ಇವರ ರಂಗೋಲಿ ಹೆಚ್ಚಾಗಿ ದೇವರ ಸನ್ನಿಧಿಯಲ್ಲಿಯೇ ಇರುತ್ತವೆ.

೮. **ಮದುವೆಯ ರಂಗೋಲಿ:** ಮದುವೆಯ ಪ್ರಸಂಗದಲ್ಲಿ ವಿಶೇಷವಾಗಿ ಹಾಸಕ್ಕಿ ರಂಗೋಲಿ ಹಾಕುವ ಸಂಪ್ರದಾಯವಿದೆ. ಮದುಮಕ್ಕಳು ಕುಳಿತುಕೊಳ್ಳುವ ಸ್ಥಳದಲ್ಲಿ ಕಂಬಳಿಯ ಮೇಲೆ ಅಕ್ಕಿಯಿಂದ ಚೌಕ ಮತ್ತು ಕತ್ತರಿ ಚಿಹ್ನೆಯ ಆಕಾರದಲ್ಲಿ ಹಸೆಯ ಚಿತ್ರ ಬರೆಯುತ್ತಾರೆ. ಮದುವೆಯ ಶಾಸ್ತ್ರ ನಿರ್ವಹಿಸುವ ಪುರೋಹಿತರು ಈ ರಂಗೋಲಿ ಹಾಕುತ್ತಾರೆ. ಈ ಮದುವೆಯ ರಂಗೋಲಿಯಲ್ಲಿ ಪ್ರಾದೇಶಿಕ ಹಾಗೂ ಜನಾಂಗಿಕ ವೈವಿಧ್ಯ, ವಿಶೇಷತೆಗಳು ಕಂಡುಬರುತ್ತವೆ. ಒರಳುಕಲ್ಲು



ಪೂಜೆಯಂದು ಒರಳು, ಒನಕೆ ಹಾಗೂ ಬೀಸುಕಲ್ಲುಗಳ ಮೇಲೆ ರಂಗೋಲಿ ಬರೆಯುತ್ತಾರೆ. ಅಯ್ಯರ್ ಜನಾಂಗದವರು ಸೋಬಾನ ಕಾರ್ಯದಂದು ರಂಗೋಲಿ ಹಾಕುತ್ತಾರೆ. ಮದುವೆಯ ರಂಗೋಲಿ ಶುಭದ ಪ್ರತೀಕವಾಗಿದೆ.

ಬ) **ಉತ್ಸಾಹದ ರಂಗೋಲಿ:** ಉತ್ಸವದ ರಂಗೋಲಿಗಳದು ಒಂದು ರೀತಿಯ ಅಭಿವ್ಯಕ್ತಿಯಾದರೆ, ಉತ್ಸಾಹದ ರಂಗೋಲಿ ವಿನ್ಯಾಸಗಳದು ಇನ್ನೊಂದು ರೀತಿಯ ಅಭಿವ್ಯಕ್ತಿಯಾಗಿದೆ. ಸೌಂದರ್ಯದ ಸೃಷ್ಟಿಕ್ರಿಯೆ ಉತ್ಸಾಹದ ರಂಗೋಲಿಯಲ್ಲಿ ಹೆಚ್ಚಿಗಿರುತ್ತದೆ. ತಮ್ಮ ಸುತ್ತಮುತ್ತಲೂ ಸಿಗುವ ದವಸ ಧಾನ್ಯ, ಹೂಬಳ್ಳಿ, ಎಲೆ, ಹಣ್ಣುಕಾಯಿ ಮೊದಲಾದ ವಸ್ತುಗಳನ್ನು ರಂಗೋಲಿಯಲ್ಲಿ ಬಳಸಿಕೊಂಡು ಕಲಾತ್ಮಕವಾದ ರಂಗೋಲಿಯ ಹೊಸರೂಪ ಕೊಡುವಲ್ಲಿ ಜನಪದರ ಕಲ್ಪನಾಪ್ರಿಯತೆ ಸ್ರಜನಶೀಲ ಧೋರಣೆಗಳನ್ನು ಕಂಡುಕೊಳ್ಳಬಹುದಾಗಿದೆ. ಈ ಉತ್ಸಾಹದ ರಂಗೋಲಿಗಳನ್ನು ೧. ಹೂವಿನ ರಂಗೋಲಿ. ೨. ಧಾನ್ಯಗಳ ರಂಗೋಲಿ, ೩. ಆರತಿ ತಟ್ಟೆಯ ರಂಗೋಲಿ, ೪. ಊಟದ ತಟ್ಟೆಯ ರಂಗೋಲಿ. ೫. ಸುಗ್ಗಿಯ ರಂಗೋಲಿ ೬. ನೀರಿನ ರಂಗೋಲಿ ೭. ಶೇಡಿಯ ರಂಗೋಲಿ ೮. ಜಾತ್ರೆಯ ರಂಗೋಲಿ ಎಂದು ವಿಂಗಡಿಸಿ ಸ್ಥೂಲವಾಗಿ ವಿವೇಚಿಸಬಹುದಾಗಿದೆ.

೧. **ಹೂವಿನ ರಂಗೋಲಿ:** ಅಕ್ಕಿಯಿಂದ ಬರೆಯುವ ಹಾಗೂ ಹೂವಿನಿಂದ ಹಾಕುವ ರಂಗೋಲಿಯ ಸಂಪ್ರದಾಯ ಪ್ರಾಚೀನ ಕಾಲದಿಂದಲೇ ಬಂದಂತಿದೆ. ವಿಶೇಷ ದಿನಗಳಲ್ಲಿ ಶ್ರಾವಣ ಮಾಸದ ಸಂದರ್ಭದಲ್ಲಿ. ವಸಂತಕಾಲದಲ್ಲಿ ಹೂವುಗಳು ಅರಳಿ ನಿಂತಿರುವ ಸಮಯದಲ್ಲಿ ಬಣ್ಣ ಬಣ್ಣದ ಹೂವುಗಳನ್ನು

ಚಿತ್ರಗಳ ರೂಪದಲ್ಲಿ ಅಲಂಕರಿಸಿ. ತಮಗೆ ಬೇಕಾದ ರೀತಿಯ ರಂಗೋಲಿಯ ವಿನ್ಯಾಸಗಳನ್ನು, ಹಾಕಿ ಜನರು ಸಂತೋಷಪಡುತ್ತಾರೆ. ಮೊದಲು ರಂಗೋಲಿಯ ರೇಖೆಗಳನ್ನು ಬರೆದು, ಅದರ ಒಳಗಡೆ ರಂಗೋಲಿಯ ಗೆರೆಯ ಗುಂಟ ಒಳಗಡೆ ಇಲ್ಲವೆ ಹೊರಗೆ ಬಣ್ಣ ತುಂಬವ ಬದಲು. ಇಲ್ಲಿ ಬಣ್ಣ ಬಣ್ಣದ ಹೂವುಗಳನ್ನೇ ಒಂದಕ್ಕೊಂದು ಹೊಂದಿಸಿ, ಅಲಂಕರಣೆ ಮಾಡುತ್ತಾರೆ. ಸ್ವಲ್ಪ ದೂರದಿಂದ ನೋಡಿದರೆ. ಇದು ಬಣ್ಣದ ರಂಗೋಲಿಯಂತೆಯೇ ಕಾಣುತ್ತದೆ. ಕೇರಳದ ಓಣಂ ಹಬ್ಬದ ಸಂದರ್ಭದಲ್ಲಿ ಭೂಮಿತಿ ಆಕೃತಿಯ ಹೂವಿನ ವರ್ಣರಂಜಿತ ರಂಗೋಲಿ ಹಾಕುತ್ತಾರೆ. ಆಂಧ್ರದಲ್ಲಿ ಯುಗಾದಿಯ ದಿವಸ, ಕರ್ನಾಟಕದಲ್ಲಿ ನವರಾತ್ರಿಯ ದಿವಸ ಹಾಗೂ ಸ್ವಾತಂತ್ರ್ಯೋತ್ಸವ ದಿನ ಮೊದಲಾದ ಹಬ್ಬಗಳಲ್ಲಿ ಹೂವಿನ ರಂಗೋಲಿ ಹಾಕುತ್ತಾರೆ. ಹೂವುಗಳು ದೇವರ ಪ್ರೀತಿಯ ವಸ್ತುಗಳಾಗಿರುವುದರಿಂದ, ಹೂವಿನಿಂದಲೇ ರಂಗೋಲಿ ಹಾಕಿದರೆ ದೇವರು ಸಂತೋಷ ಪಡುತ್ತಾನೆಂಬ ನಂಬಿಕೆ ಇದೆ.

**೨. ಧಾನ್ಯಗಳ ರಂಗೋಲಿ:** ಇದು ಬಿಡುವಿನ ವೇಳೆಯಲ್ಲಿ ಮನರಂಜನೆಗಾಗಿ ಹಾಕುವ ರಂಗೋಲಿ, ವಿವಿಧ ಬಣ್ಣದ ಕಾಳುಗಳನ್ನು ಸಮನಾಗಿ ಹೊಂದಿಸಿ, ರಂಗೋಲಿಯ ವಿನ್ಯಾಸ ರೂಪಿಸುತ್ತಾರೆ. ದೂರದಿಂದ ನೋಡಿದರೆ ಈ ರಂಗೋಲಿಯೂ ವರ್ಣರಂಜಿತವಾಗಿ ಕಂಗೊಳಿಸುತ್ತದೆ. ತಮಗೆ ಬೇಕಾದ ವಿನ್ಯಾಸಗಳನ್ನು ಮೊದಲು ಮಾಡಿಕೊಂಡು, ಆ ವಿನ್ಯಾಸದಲ್ಲಿಯೇ ವಿವಿಧ ಕಾಳುಗಳನ್ನು ಹೊಂದಿಸಿ ಅಲಂಕರಿಸುತ್ತಾರೆ. ಈ ರಂಗೋಲಿಯಲ್ಲಿ ಹೆಚ್ಚಾಗಿ ಭೂಮಿತಿ ಆಕೃತಿ, ಎಲೆ, ಹೂ-ಬಳ್ಳಿ ಮುಂತಾದ ವಿನ್ಯಾಸಗಳನ್ನು ಮಾಡುತ್ತಾರೆ. ಈ ರೀತಿ ರಂಗೋಲಿ ಹಾಕುವುದು ತೀರ ಅಪರೂಪ, ವೈವಿಧ್ಯಮಯವಾದ ಚಿತ್ರಗಳನ್ನು ಚಿತ್ರಿಸಲು ಇಲ್ಲಿ ಸಾಧ್ಯವಾಗುವುದಿಲ್ಲ.

**೩. ಆರತಿ ತಟ್ಟೆಯ ರಂಗೋಲಿ:** ಆರತಿ ಮಾಡುವ ತಟ್ಟೆಯು ಸೌಂದರ್ಯಮಯವಾಗಿ ಕಾಣಬೇಕೆಂಬ ಅಭಿಲಾಷೆಯಿಂದ ಹೆಣ್ಣುಮಕ್ಕಳು ಈ ರಂಗೋಲಿ ರಚಿಸುತ್ತಾರೆ. ವಿರಾಮದ ವೇಳೆಯಲ್ಲಿ ಸ್ವಚ್ಛಗೊಳಿಸಿದ ತಾಟಿನ ಮೇಲೆ ಅಂಟಿನಿಂದ ರಂಗೋಲಿಯ ಆಕೃತಿಗಳನ್ನು ಬಿಡಿಸುತ್ತಾರೆ. ನಂತರ ಅದರ ಮೇಲೆ ಕುಂಕುಮ ಹಾಕಿ, ಅದನ್ನು ಕೆಳಗಡೆ ಹರವಿದಾಗ, ಅಂಟು ಹತ್ತಿದ ರಂಗೋಲಿಯ ವಿನ್ಯಾಸ ಕೆಂಪಾದ ಕುಂಕುಮದ ವರ್ಣಗಳಿಂದ ಸುಂದರವಾಗಿ ಕಾಣಿಸುತ್ತದೆ. ಇಲ್ಲಿ ಮೂರು ನಮೂನೆಯ ಬಣ್ಣಗಳಿಂದ ರಂಗೋಲಿ ಹಾಕುತ್ತಾರೆ. ಇದು ಎರಡು ಮೂರು ದಿನಗಳವರೆಗೂ ಇರುತ್ತದೆ. ಗೌರಿ, ಶೀಗಿ ಹುಣ್ಣಿಮೆಯ ಸಂದರ್ಭದಲ್ಲಿ ದಿನಾಲು ಆರತಿ ಬೆಳಗುತ್ತಾರೆ. ಆಗ ಈ ರೀತಿಯ ರಂಗೋಲಿಯನ್ನು ಹೆಣ್ಣುಮಕ್ಕಳು

ರಚಿಸುತ್ತಾರೆ. ವಿಜಾಪೂರ, ಬೆಳಗಾವಿ ಧಾರವಾಡ ಮೊದಲಾದ ಭಾಗದಲ್ಲಿಯೂ ಈ ರಂಗೋಲಿ ಪ್ರಚಲಿತದಲ್ಲಿದೆ. ಗುಲ್ಬರ್ಗಾ ಭಾಗದಲ್ಲಿ ಮಾತ್ರ ಕಸಕಸಿಯಿಂದ ರಂಗೋಲಿ ಹಾಕುತ್ತಾರೆ. ಇದನ್ನು ಕಸಕಸಿ ರಂಗೋಲಿ ಎಂದು ಕರೆಯುತ್ತಾರೆ. ಹೀಗೆ ಕುಂಕುಮ, ಅರಷಿಣ, ರಂಗೋಲಿ ಪುಡಿ ಹಾಗೂ ಬೇರೆ ಬಣ್ಣಗಳನ್ನು ಹಾಕಿರಂಗೋಲಿ ಹಾಕುವದರಿಂದ ಅದರ ಅಂದ ಹೆಚ್ಚಿಸುತ್ತದೆ. ಇದಲ್ಲದೆ ರಂಗೋಲಿಯುಳ್ಳ ಆರತಿತಟ್ಟೆಯಿಂದ ದೇವರಿಗೆ ಬೆಳಗಿದರೆ ದೇವರು ಸಂತೋಷಗೊಳ್ಳುವನೆಂಬ ನಂಬಿಕೆಯೂ ಜನರಲ್ಲಿದೆ.

**೪. ಊಟದ ತಟ್ಟೆಯ ರಂಗೋಲಿ:** ಊಟದ ತಟ್ಟೆಯ ಸುತ್ತ ಎಲೆಯ ಸುತ್ತ ರಂಗೋಲಿ ಹಾಕುವ ಸಂಪ್ರದಾಯ ಉತ್ತರ ಕರ್ನಾಟಕದ ಅನೇಕ ಜನಾಂಗದಲ್ಲಿ ವಿಶೇಷವಾಗಿ ಬ್ರಾಹ್ಮಣರು ಹಾಗೂ ಅಕ್ಕಸಾಲಿಗರಲ್ಲಿದೆ. ಇದರಿಂದ ಊಟ ಮಾಡುವವರ ಮನಸ್ಸು ಸಂತೋಷಗೊಳ್ಳುತ್ತದೆ. ನೆಲಶುದ್ಧವಾಗುತ್ತದೆ. ಅನಿಷ್ಟ ಉಂಟಾಗುವುದಿಲ್ಲ. ಊಟ ಜೀರ್ಣವಾಗುತ್ತದೆಯೆಂಬ ನಂಬಿಕೆಗಳಿವೆ. ನೆಂಟರು ಬಂದಾಗ ಈ ರಂಗೋಲಿ ಹಾಕುವುದು ತೀರ ಸಾಮಾನ್ಯ ಆದರೆ ಕೆಲವು ಜನ ಪ್ರತಿ ದಿನ ಊಟ ಮಾಡುವ ಸಂದರ್ಭದಲ್ಲಿ ತಟ್ಟೆಯ ಸುತ್ತಲೂ ವಿವಿಧ ರೀತಿಯ ಎಲೆ-ಬಳ್ಳಿಗಳ ಸುಳಿವು ಚಿತ್ರದ ರಂಗೋಲಿ ಚಿತ್ರಿಸುತ್ತಾರೆ. ಇಲ್ಲಿ ನಿರ್ದಿಷ್ಟವಾಗಿ ಇಂಥವೇ ರಂಗೋಲಿ ಹಾಕಬೇಕೆಂಬ ಕಟ್ಟಳೆಯಿಲ್ಲ. ತಮಗೆ ಪ್ರೀಯವೆನಿಸಿದ ಸುಂದರವಾದ ರೇಖಾಚಿತ್ರ, ವರ್ಣರಂಜಿತ ರಂಗೋಲಿಯ ವಿನ್ಯಾಸಗಳನ್ನು ಹಾಕುತ್ತಾರೆ.


**೫. ಸುಗ್ಗಿಯ ರಂಗೋಲಿ:** ಉತ್ತರ ಕರ್ನಾಟಕದ ಬಯಲುಸೀಮೆಯ ಸುಗ್ಗಿಯ ಸಂದರ್ಭದಲ್ಲಿ ಹಂತಿ ಮುಗಿದ ಮೇಲೆ, ತೂರಿದ ರಾಶಿಯ ಕಾಳಿನ ಮೇಲೆ, ಬೂದಿಯಿಂದ ಮೇಟಿಯ ಸುತ್ತಲೂ ಸೂರ್ಯ, ಚಂದ್ರ, ನಕ್ಷತ್ರದ ಚಿತ್ರ, ಅಧಿಕ, ಸ್ವಸ್ತಿಕ, ಶ್ರೀ ಓಂನಂತಹ ಶುಭ ಚಿಹ್ನೆಗಳನ್ನು ಚಿತ್ರಿಸುತ್ತಾರೆ. ಶುಭ್ರವಾಗಿ ಕಾಣುವ ಬಿಳಿಯ ಜೋಳದ ರಾಶಿಗೆ ದೃಷ್ಟಿ ತಾಗದಿರಲೆಂದು ಈ ರಂಗೋಲಿ ಹಾಕುತ್ತಾರೆ. ಜೊತೆಗೆ ಇದರಿಂದ ರಾಶಿ ಬೇರೆಯವರ ಪಾಲು ಆಗುವುದಿಲ್ಲವೆಂಬ ನಂಬಿಕೆಯೂ ಇದೆ. ರಾಶಿ ಹುಲುಸಾಗಲಿಯೆಂಬ ಆಶಯದ ಹಿನ್ನಲೆಯಲ್ಲಿಯೂ ಅಲಂಕಾರಿಕವಾದ ಈ ರಂಗೋಲಿ ವಿನ್ಯಾಸಗಳನ್ನು ಬಿಡಿಸುತ್ತಾರೆ. ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲಿಯೂ ದೊಡ್ಡ ರಾಶಿ ನಡೆಯುವ ಸಂದರ್ಭದಲ್ಲಿ ಪುರುಷರು ಇಂಥ ಕಲಾತ್ಮಕ ರಂಗೋಲಿಹಾಕುತ್ತಾರೆ.

**೬. ನೀರಿನ ರಂಗೋಲಿ:** ಹಬ್ಬ- ಹುಣ್ಣಿಮೆ, ಮದುವೆ ಜಾತ್ರೆಯಂತಹ ಸಂದರ್ಭಗಳಲ್ಲಿ ರಂಗೋಲಿ ಹಾಕುವ ಸ್ಪರ್ಧೆಯೇ ನಡೆಯುತ್ತದೆ. ಹೆಣ್ಣುಮಕ್ಕಳು

ವಿವಿಧ ಮಾಧ್ಯಮಗಳನ್ನು ಬಳಸಿಕೊಂಡು ವರ್ಣರಂಜಿತ ರಂಗೋಲಿ ಹಾಕಿ, ಜನರನ್ನು ಆಕರ್ಷಿಸುತ್ತಾರೆ. ನೀರಿನ ಮೇಲೆ ಹಾಕುವ ರಂಗೋಲಿ ಅವರ ಸೃಜನಶೀಲತೆಯ ಪ್ರತೀಕವೆಂದೇ ಹೇಳಬೇಕಾಗುತ್ತದೆ.

ನೀರಿನ ಮೇಲೆ ಹಾಕುವ ರಂಗೋಲಿ ಅಂಥ ಕಠಿಣವಾದುದೇನೂ ಅಲ್ಲ ಇದಕ್ಕೆ ರೂಢಿ ಅಭ್ಯಾಸಬಲವಿದ್ದರೆ ಸಾಕೆನಿಸುತ್ತದೆ. ಅಗಲವಾದ ಪಾತ್ರೆಯಲ್ಲಿಯ ನೀರಿನ ಮೇಲೆ ಇದ್ದಿಲ ಪುಡಿ ಹಾಕುತ್ತಾರೆ.. ಆಗ ನೀರು ಕಪ್ಪಾಗುತ್ತದೆ. ನೀರು ಕಾಣಿಸದಷ್ಟು ದಪ್ಪವಾಗಿ ಇದ್ದಿಲು ಪುಡಿ ಹಾಕುತ್ತಾರೆ. ನಂತರ ವಿವಿಧ ಬಣ್ಣಗಳ ಮಿಶ್ರಣದಿಂದ ಬೇಕಾದ ಆಕೃತಿಯ ರಂಗೋಲಿ ಬಿಡಿಸುತ್ತಾರೆ. ಕರಿಯ ಪುಡಿಯ ಮೇಲೆ ಬಿಳಿಯ ಬಣ್ಣದ ರಂಗೋಲಿ ತುಂಬ ಸೊಗಸಾಗಿ ಕಾಣಿಸುತ್ತದೆ. ಸುಳಿವು, ಭೂಮಿತಿಯ ಆಕೃತಿಗಳನ್ನೂ ಇದರ ಮೇಲೆ ಬಣ್ಣಗಳಿಂದ ಚಿತ್ರಿಸುತ್ತಾರೆ. ಒಮ್ಮೆ ಹಾಕಿದ ರಂಗೋಲಿಯನ್ನು ಮತ್ತೆ ಬದಲಿಸಲು ಬರುವುದಿಲ್ಲ. ಈ ರಂಗೋಲಿ ಹಾಕುವವರಿಗೆ ಕೈಯಲ್ಲಿ ಸಾಕಷ್ಟು ಹಿಡಿತ ಸಂಯಮ ಇರಬೇಕಾಗುತ್ತದೆ.


**೭. ಶೇಡಿಯ ರಂಗೋಲಿ:** ಉತ್ತರ ಕನ್ನಡ ಜಿಲ್ಲೆಯಲ್ಲಿ ರಂಗೋಲಿಯನ್ನು ಶೇಡಿ ಬರೆಯುವದೆಂದು ಕರೆಯುತ್ತಾರೆ. ನೆಲಗೋಡೆಯ ಮೇಲೆಲ್ಲ ಈ ವಿನ್ಯಾಸಗಳು ಕಂಡುಬರುತ್ತದೆ. ಗೋಡೆಯ ಮೇಲೆ ರಂಗೋಲಿ ವಿನ್ಯಾಸ ಮೂಡುವುದಕ್ಕಿಂತ ಮುಂಚೆ ಭಿತ್ತಿ ತಾಯಾರಿಕೆಯನ್ನು ಮಾಡಿಕೊಳ್ಳುತ್ತಾರೆ. ಕೆಮ್ಮಣ್ಣನ್ನು ಗೋಡೆಗೆ ಮೆತ್ತಿ ನುಣುಪು ಮಾಡಿ, ಅದರ ಮೇಲೆ ಜೇಡಿಮಣ್ಣಿನಿಂದ ಚಿತ್ರ ಬಿಡಿಸುತ್ತಾರೆ. ಮಲೆನಾಡಿಲ್ಲಿ ಸಾಮಾನ್ಯವಾಗಿ ಸಿಗುವ ಗುರಿಗೆಯ ಮರದ ಕಾಯಿಯನ್ನು ಕುಟ್ಟಿ, ನೀರಿನಲ್ಲಿ ಮಿಶ್ರಣ ಮಾಡಿದಾಗ, ಹಳದಿ ವರ್ಣ ತಯಾರಾಗುತ್ತದೆ. ಈ ಬಣ್ಣದಿಂದ ಚಿತ್ರ ತೆಗೆದರೆ, ಬಣ್ಣಗಳು ತೈಲಚಿತ್ರದಂತೆ ಹೊಳಪುಳ್ಳವುಗಳಾಗಿ ಕಂಗೊಳಿಸುತ್ತದೆ.



ಉತ್ತರ ಕನ್ನಡದ ಈ ಶೇಡಿ ರಂಗೋಲಿಯಲ್ಲಿ ಅಕ್ಕಿ ಹಿಟ್ಟಿಗೆ ಬದಲಾಗಿ, ಬಳಪದ ಕಲ್ಲನ್ನು ಹಾಲಿನಲ್ಲಿ ತೆಯ್ದು, ಗಂಧ ತಯಾರಿಸಲಾಗುತ್ತದೆ. ಜಾಲಿಸಿಪ್ಪೆಯ ಕುಂಚದಿಂದ ಈ ಬಿಳಿಬಣ್ಣವನ್ನು ಉಪಯೋಗಿಸಿ ಮನೆಯ ಬಾಗಿಲು, ತುಳಸಿಯ ಕಟ್ಟೆ, ಮುಂತಾದ ಕಡೆಗೆ ಬರೆಯುವ ರೇಖಾಚಿತ್ರಕ್ಕೆ ಶೇಡಿ ಬರೆಯುವುದು ಎನ್ನುತ್ತಾರೆ. ಕೆಲವುಸಲ ಬಿಳಿ

ಬಣ್ಣದ ಜೊತೆಗೆ ಇತರ ವರ್ಣಗಳನ್ನು ಇತ್ತೀಚೆಗೆ ಬಳಸುತ್ತಿದ್ದಾರೆ. ಈ ಬಣ್ಣ ಕೈಗೆ ಹತ್ತುವುದಿಲ್ಲ. ಇಲ್ಲಿ ಮುಖ್ಯವಾಗಿ ನೈಸರ್ಗಿಕ ವಸ್ತುಗಳು ಮತ್ತು ಮಾನವಾಕೃತಿಯಂತಹ ಚಿತ್ರವಿನ್ಯಾಸಗಳಿರುತ್ತವೆ.

**೮. ಜಾತ್ರೆಯ ರಂಗೋಲಿ:** ಜಾತ್ರೆಯ ಸಂದರ್ಭದಲ್ಲಿ ಹಾಕುವ ವಿವಿಧ ರೀತಿಯ ರಂಗೋಲಿಗಳು, ಭಕ್ತಿಯ ಹಿನ್ನಲೆಯಲ್ಲಿದ್ದರೂ ಸೌಂದರ್ಯಾಭಿ ವ್ಯಕ್ತಿಗಳುಳ್ಳವುಗಳಾಗಿರುತ್ತವೆ. ವರ್ಣರಂಜಿತ ರಂಗೋಲಿಗಳು, ಚುಕ್ಕೆ ಮತ್ತು ಚುಕ್ಕೇತರ ಸರಳಗ್ಯೆ ರೇಖಾವರ್ಣಚಿತ್ರಗಳಲ್ಲಿ ಮೂಡಿ ಬರುತ್ತವೆ. ದೇವರ ಉತ್ಸವದ ಚಿತ್ರ, ತೇರು, ಗಿಳಿ, ಹಾವು, ಸೂರ್ಯ, ನಕ್ಷತ್ರ, ಉತ್ಸವದ ವಾಲಗದವರು ಆಯಾ ದೇವರ ಚಿತ್ರಗಳನ್ನು ರಂಗೋಲಿಯಲ್ಲಿ ಹಾಕಿ, ಜನರು ಸಂತೋಷಪಡುತ್ತಾರೆ. ಇವುಗಳಲ್ಲಿ ಪ್ರಾದೇಶಿಕ ವೈವಿಧ್ಯತೆ ಕಂಡಬರುತ್ತದೆ. ಜಾತ್ರೆಗಳಿಗೆ ಹೋಗಲಾರದವರು ಜಾತ್ರೆಯ ದೇವರು ಹೆಸರಿನಿಂದ ಮನೆಯಲ್ಲಿಯೇ ರಂಗೋಲಿ ಹಾಕಿ ಪೂಜಿಸಿದರೆ, ಜಾತ್ರೆಗೆ ಹೋಗಿ ಬಂದಷ್ಟೇ ಪುಣ್ಯ ಬರುತ್ತದೆಯೆಂಬ ಭಾವನೆಯೂ ಜನರಲ್ಲಿದೆ.



**೯. ಸಂಕೀರ್ಣ ರಂಗೋಲಿ:** ತಾಂತ್ರಿಕ ಹಿನ್ನೆಲೆಯ ಈ ರೀತಿಯ ರಂಗೋಲಿಯನ್ನು ಉತ್ಸವ ಹಾಗೂ ಉತ್ಸಾಹದ ಪ್ರಸಂಗದ ರಂಗೋಲಿಯಲ್ಲಿಯೂ ಕಾಣುತ್ತೇವೆ. ತಾಂತ್ರಿಕ ಹಿನ್ನೆಲೆಯ ಭಯ ಹಾಗೂ ಭಯರಹಿತ ಕ್ರಿಯೆಯ ರಂಗೋಲಿಯನ್ನು ಇಲ್ಲಿ ಸಂಕೀರ್ಣ ರಂಗೋಲಿಯೆಂದು ಕರೆಯಲಾಗಿದೆ. ಇದರಲ್ಲಿ ಕಂಡು ಬರುವ ಪ್ರಕಾರಗಳು ಹೀಗಿರುತ್ತವೆ. ೧. ಪಂಚವರ್ಣದ ರಂಗೋಲಿ, ೨. ಯಜ್ಞದ ರಂಗೋಲಿ ೩. ನವಗ್ರಹ ಶಾಂತಿಯ ರಂಗೋಲಿ, ೪. ವ್ಯಾಧಿ ನಿವಾರಣೆಯ ರಂಗೋಲಿ, ೫. ಗೃಹ ಶಾಂತಿಯ ರಂಗೋಲಿ, ೬. ಭೂತ ಬಿಡಿಸುವ ರಂಗೋಲಿ, ೭. ಚಾಡಿಯ ರಂಗೋಲಿ ೮. ಮೋಡಿಯ ರಂಗೋಲಿ ೯. ಸ್ಮಶಾನದ ರಂಗೋಲಿ ಈ ರಂಗೋಲಿಗಳನ್ನು ಇಲ್ಲಿ ವಿವರವಾಗಿ ಹೀಗೆ ಚರ್ಚಿಸಬಹುದಾಗಿದೆ.

**೧. ಪಂಚವರ್ಣ ರಂಗೋಲಿ:** ಹಸಿರು, ಹಳದಿ, ಕೆಂಪು,ಬಿಳಿ, ಕಪ್ಪು- ಹೀಗೆ ಐದು ವರ್ಣಗಳಿಂದ ಹಾಕುವ ರಂಗೋಲಿ, ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿದ್ದುದು ಗೊತ್ತಾಗುತ್ತದೆ.

**೨. ಯಜ್ಞದ ರಂಗೋಲಿ:** ಪ್ರಾಚೀನ ಕಾಲದಲ್ಲಿ ಯಜ್ಞ, ಯಾಗದಲ್ಲಿಯೂ

ರಂಗೋಲಿ ಬಳಕೆಯಾಗುತ್ತಿದ್ದಿತು. ವೇದಕಾಲದಲ್ಲಿ ಯಜ್ಞೋಪಕರಣಗಳಾದ ಕುಂಭ, ಯೂಪ, ವೇದಿಗಳನ್ನು ಲೇಪಗಳಿಂದ ಅಲಂಕರಿಸುತ್ತಿದ್ದ ರೀತಿಯಿಂದಲೂ, ತಾಂತ್ರಿಕ ಶ್ರೀ ವಿದ್ಯೋಪಾಸನೆಗಾಗಿ ರಚಿಸುತ್ತಿದ್ದ ಯಂತ್ರ–ಮಂಡಲಗಳಿಂದ ವರ್ಣಮಯವಾಗಿ ಈ ಚಿತ್ರಕಲೆ ಬೆಳೆಯಿತು. ಯಜ್ಞ ಪ್ರಸಂಗದಲ್ಲಿ ಸಾಮಾನ್ಯವಾಗಿ ಈಗಲೂ ರಂಗೋಲಿ ಬರೆಯುತ್ತಾರೆ. ಈ ಯಜ್ಞಕುಂಡದ ಸುತ್ತಲೂ ರಂಗೋಲಿಯ ಸಪ್ತಪದಿ ಇರುತ್ತದೆ. ಮದುವೆಯಲ್ಲಿ ಈ ಸಪ್ತಪದಿ ತುಳಿಯುತ್ತಾರೆ. ಪುರುಷರು, ಸುಳುಹು, ಚುಕ್ಕೆಯ ರಂಗೋಲಿಯನ್ನು, ಭೂಮಿತಿ ಆಕೃತಿಯ ರಂಗೋಲಿಗಳನ್ನು ಇಲ್ಲಿ ಹಾಕುತ್ತಾರೆ.

೩. **ನವಗ್ರಹಶಾಂತಿಯ ರಂಗೋಲಿ:** ಪವಿತ್ರ ಸ್ಥಳದಲ್ಲಿ ಪೂರ್ವ–ಪಶ್ಚಿಮ ಮುಖವಾಗಿ ನಾಲ್ಕು ರೇಖೆಗಳನ್ನೂ ಉತ್ತರ ದಕ್ಷಿಣ ಮುಖವಾಗಿ ನಾಲ್ಕು ರೇಖೆಗಳನ್ನು ರಂಗೋಲಿಯ ಹಿಟ್ಟಿನಿಂದ ಹಾಕಿ, ಒಂಬತ್ತು ಕೋಣೆಗಳನ್ನು ಮಾಡಬೇಕು. ಆ ಬಳಿಕ ಪ್ರತಿಯೊಂದು ಕೋಣೆಯಲ್ಲಿ ಅಕ್ಕಿಯನ್ನು ಹರಡಿ, ಅದರಲ್ಲಿ ರವಿಗೆ ಮಧ್ಯಕೋಣೆಯಲ್ಲಿ ವರ್ತುಲಾಕಾರವಾದ ಮಂಡಲವನ್ನೂ ಚಂದ್ರನಿಗೆ ಆಗ್ನೇಯ ದಿಕ್ಕಿನಲ್ಲಿ ಚತಷ್ಕೋಣಾಕಾರವಾದ ಮಂಡಲವನ್ನೂ ಮಂಗಳನಿಗೆ ದಕ್ಷಿಣದಲ್ಲಿ ತ್ರಿಕೋಣಾಕಾರವಾದ ಮಂಡಲವನ್ನೂ ಬುಧನಿಗೆ ಈಶಾನ್ಯ ದಿಕ್ಕಿನಲ್ಲಿ ಭಾಣಾಕಾರ ಮಂಡಲವನ್ನೂ ಶುಕ್ರನಿಗೆ ಪೂರ್ವದಲ್ಲಿ ಪಂಚಕೋಣಾಕಾರ



ಮಂಡಲವನ್ನೂ ಶನಿಗೆ ಪಶ್ಚಿಮದಲ್ಲಿ ಧನುರಾಕಾರ, ವಾಯುವ್ಯ ದಿಕ್ಕಿನಲ್ಲಿ ಧ್ವಜಾಕಾರ ಮಂಡಲವನ್ನೂ ಬರೆದು, ಆಯಾಯ ಮಂಡಲದಲ್ಲಿ ಆಯಾಯ ಗ್ರಹಗಳನ್ನು ಸ್ಥಾಪಿಸಬೇಕು. ಅದರ ಕ್ರಮ ಹೀಗಿದೆ. ಸೂರ್ಯನಿಗೆ ಗೋದಿಯನ್ನು ಒಂದು ಕೆಂಪು ವಸ್ತ್ರದಲ್ಲಿ. ಚಂದ್ರನಿಗೆ ಅಕ್ಕಿಯನ್ನು ಬಿಳಿ ವಸ್ತ್ರದಲ್ಲಿ ಮಂಗಳನಿಗೆ ತೊಗರೆಯನ್ನು ಕೆಂಪು ವಸ್ತ್ರದಲ್ಲಿ ಬುಧನಿಗೆ, ಹೆಸರನ್ನು ಹಸಿರು ವಸ್ತ್ರದಲ್ಲಿ ಗುರುವಿಗೆ ಕಡಲೆಯನ್ನು ಹಳದಿ ವಸ್ತ್ರದಲ್ಲಿ, ಶುಕ್ರನಿಗೆ ಅವರೆಯನ್ನು ಬಿಳಿಯ ವಸ್ತ್ರದಲ್ಲಿ ಶನಿಗೆ ಎಳ್ಳನ್ನು ಕಪ್ಪುವಸ್ತ್ರದಲ್ಲಿ, ರಾಹುವಿಗೆ ಉದ್ದನ್ನು ಚಿತ್ರವರ್ಣದ ವಸ್ತ್ರದಲ್ಲಿ, ಕೇತುವಿಗೆ ಹುರುಳಿಯನ್ನು ಧೂಮ್ರವರ್ಣದ ವಸ್ತ್ರದಲ್ಲಿ ಕಟ್ಟಿ ಫಲಪೂಜೆಯನ್ನು ಪ್ರತ್ಯೇಕವಾಗಿ ಮಾಡಿಮುಗಿಸಬೇಕು. ಪೂಜೆ ಮುಗಿದ ಮೇಲೆ, ಈ ಎಲ್ಲ ಕಾಳು ಕಡಿಗಳ ಗಂಟುಗಳನ್ನು ಅರ್ಚಕನಿಗೆ ಕೊಡಬೇಕು.

೪. ವ್ಯಾಧಿ ನಿವಾರಣೆಯ ರಂಗೋಲಿ: ರಂಗೋಲಿಯ ಚಿತ್ರ ಬರೆಯಿಸುವುದರಿಂದ ವ್ಯಾಧಿ ನಿವಾರಣೆಯಾಗುವುದೆಂಬ ನಂಬಿಕೆಯಿದೆ. ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ, ಮಾಣಶಿವಣಗಿ ಗ್ರಾಮದಲ್ಲಿ ಮುಸ್ಲೀಂ ಜನಾಂಗದ ಬಾವಾಗಳು ಹಾವು ಕಡಿದರೆ, ಹಾವಿನ ರಂಗೋಲಿ ಹಾಕಿ, ಆ ರಂಗೋಲಿಯನ್ನು ಹಾವು ಕಡಿದವನ ಮೇಲೆ ಮಂತ್ರಿಸುತ್ತ ಮೂರು ಸಾರಿ ಐದು ಸಾರಿ ಇಳುಹಿ ಎಡಗೈಯಿಂದ ಹಾವು ಕಡಿದ ಅಥವಾ ಹಾವು ಹೋದ ದಿಕ್ಕಿಗೆ ಒಗೆಯುತ್ತಾರೆ. ಇದರಿಂದ ಹಾವಿನ ವಿಷ ಇಳಿಯುತ್ತದೆ ಎಂಬ ಭಾವನೆ ಇದೆ. ಮನೆಯಲ್ಲಿ ಹಾವು ಬಂದು ಹೋದರೆ, ಅರಿಷಣ ಕುಂಕುಮ ಹಚ್ಚಿದ ಅಕ್ಕಿಕಾಳನ್ನು ಮನೆಯ ಎಲ್ಲ ದಿಕ್ಕುಗಳಿಗೂ ಹಾಕುತ್ತಾರೆ. ಇನ್ನು ಕೆಲವರು ಮನೆಯ ಜಗಲಿಯ ಮೇಲೆ ಆಸ್ತಿಕಾಸ್ತಿ ಕಾಳಭೈರವ ಎಂದು ರಂಗೋಲಿಯ ಹಿಟ್ಟಿನಿಂದ ಬರೆಯುವುದೂ ಉಂಟು. ಇದು ಹಾವಿಗೆ ದಿಗ್ಬಂಧನ ಹಾಕಿದಂತೆ, ರಂಗೋಲಿಯ ಹಿಟ್ಟಿನಿಂದ ಬರೆದ ಮಂತ್ರ ಇರುವವರೆಗೆ ಆ ಮನೆಯೊಳಗೆ ಹಾವುಗಳ ಬರುವುದಿಲ್ಲವೆಂಬ ಭಾವನೆ ಜನರಲ್ಲಿದೆ.

ವ್ಯಾಧಿ ನಿವಾರಣೆಗಾಗಿ ಆಂಧ್ರದಲ್ಲಿ ಸಿಂಹದ ಚಿತ್ರಬರೆಯಿಸುತ್ತಾರೆ. ಕಜ್ಜಿಗಳಲ್ಲಿ ಹಲವು ವಿಧಗಳಿವೆ. ಅವುಗಳಲ್ಲಿ ಊರಿಕಜ್ಜಿಯೂ ಒಂದು. ಇದಕ್ಕೆ ತೆಲುಗಿನಲ್ಲಿ ಉರಿಗೆಜ್ಜೆ, ತಮಿಳಿನಲ್ಲಿ ಅಕ್ಕಿ ಎನ್ನುತ್ತಾರೆ. ಹೆಚ್ಚು ಕೀವಿನಿಂದಲೂ ಉರಿಯಿಂದಲೂ ಕೂಡಿದ ಕಜ್ಜಿಯ ರೋಗಿಗಳಿಗೆ ಕೆಮ್ಮಣ್ಣಿನಿಂದ, ಅಂಚಿಕಡ್ಡಿಯಿಂದ ಸಿಂಹದ ಚಿತ್ರ ಬರೆದು ಅದರ ಮೇಲೆ ಕುಲುಮೆಯ ಬೂದಿಯನ್ನು ಹಾಕುತ್ತಾರೆ. ಇದನ್ನು ತಲುಗಿನಲ್ಲಿ ಮುಗ್ಗುರಾಪಿಂಚೇದಿ ಸಿಂಹ ಬರೆಯಿಸುವುದು ಎಂದು ಕರೆಯುತ್ತಾರೆ. ಹೀಗೆ ಬರೆಯಿಸುವುದರಿಂದ ಕಾಯಿಲೆ ವಾಸಿಯಾಗುತ್ತದೆಂಬ ನಂಬಿಕೆ ಜನರಲ್ಲಿದೆ. ಕಣ್‌ಚುಟ್ಲೆಯಾದಾಗ ಹಳೆಯ ಗೋಡೆಯಲ್ಲಿಯ ಬೋಕಿಯನ್ನು ತಂದು, ನೀರು ಹಾಕಿ ತಿಕ್ಕಿ ಅದರ ದ್ರವವನ್ನು ಕಣ್ಣಿನ ಮೇಲೆ ಹಚ್ಚಿಕೊಳ್ಳುವುದು ಸರ್ವಸಾಮಾನ್ಯ, ಇದರ ಜೊತೆಗೆ ರಂಗೋಲಿ ಪುಡಿಯಿಂದ ಮಂತ್ರಿಸುವದೂ ಕಣ್ಣಿನ ಮೇಲ್ಭಾಗದಲ್ಲಿ ಸ್ವಲ್ಪ ರಂಗೋಲಿಯ ಪುಡಿಯನ್ನು ಮುಟ್ಟಿಸುವುದೂ ಗುಲಬರ್ಗಾ ಬೀದರ ಕಡೆಗೆ ಕಂಡುಬರುತ್ತದೆ. ಇನ್ನುಳಿದ ಕಡೆಗೆ ಬೂದಿ ಮಂತ್ರಿಸಿ ಕಾಯಿಲೆಯಾದ ವ್ಯಕ್ತಿಗೆ ಹಚ್ಚುತ್ತಾರೆ.

೫. ಗೃಹಶಾಂತಿಯ ರಂಗೋಲಿ: ಹೊಸಮನೆಯ ಪ್ರವೇಶ ಮಾಡುವ ಸಂದರ್ಭದಲ್ಲಿ ಮಾಡುವ ಶಾಂತಿಯ ತಾಂತ್ರಿಕಾಚರಣೆಯೇ ಗೃಹಶಾಂತಿ, ಅನಿಷ್ಟಕಾರಕ ಶಕ್ತಿಗಳು ಅಲ್ಲಿದ್ದರೆ, ಈ ಗೃಹಶಾಂತಿಯಿಂದ ಅವುಗಳಿಗೆ ದಿಗ್ಬಂದನ ಹಾಕಲಾಗುತ್ತದೆ. ಅವು ಮತ್ತೆ ಅಲ್ಲಿ ಪ್ರವೇಶ ಮಾಡಲಾರವೆಂಬ ಭಾವನೆಯಿಂದ ಗೃಹಶಾಂತಿಯಲ್ಲಿ ರಂಗೋಲಿಯ ಮಂಡಲವನ್ನು ಹಾಕಿಸಿ, ಪೂಜೆ ಸಲ್ಲಿಸುತ್ತಾರೆ. ವಿಧಿವತ್ತಾದ ಪೂಜೆ,

ಅನ್ನ ಸಂತರ್ಪಣೆ ನಡೆಯುತ್ತದೆ.

ಇಲ್ಲಿ ಚೌಕ, ವರ್ತುಳ, ಆಯತದಂತಹ ಭೂಮಿತಿ ಆಕೃತಿಯ ವಿನ್ಯಾಸಗಳನ್ನೂ ಶಂಖ, ಚಕ್ರ, ಗದೆ, ಸ್ವಸ್ತಿಕ, ಓಂ, ಶ್ರೀ ಮುಂತಾದ ಚಿಹ್ನೆಗಳನ್ನೂ ಅಲಂಕಾರಕ್ಕೆ ಸುಳುವು, ಹೂ ಎಲೆ, ಬಳ್ಳಿಗಳನ್ನೂ ರಂಗೋಲಿಯಲ್ಲಿ ಬಿಡಿಸುತ್ತಾರೆ.

**೬. ಭೂತ ಬಿಡಿಸುವ ರಂಗೋಲಿ:** ಭೂತ ಬಡಿದ ವ್ಯಕ್ತಿಯ ಭೂತವನ್ನು ಬಿಡಿಸುವ ಸಂದರ್ಭದಲ್ಲಿ ಹಾಕುವ ರಂಗೋಲಿ ಆಗಿದೆ. ವಿಜಾಪೂರ ಜಿಲ್ಲೆಯ ಬಾದಾಮಿ ತಾಲೂಕಿನ ಅಚನೂರ ಗುಡ್ಡದ ಮೇಲಿರುವ ಹನುಮಂತದೇವರ ಗುಡಿಯ ಮುಂದೆ ಭೂತದ ರಂಗೋಲಿಯ ಚಿತ್ರ ಬರೆಯುತ್ತಾರೆ. ಭೂತ ಬಡಿದವರನ್ನು ಈ ರಂಗೋಲಿಯ ಮೇಲೆ ತಂದು ಕೂಡಿಸುತ್ತಾರೆ. ನಂತರ ಭೂತ ಬಿಡಿಸುವವ ಮಂತ್ರ ಪಠಣ ಮಾಡಿದಾಗ, ಭೂತ ಆ ವ್ಯಕ್ತಿಯ ಮೈಯಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ರಂಗೋಲಿಯ ಮಂಡಲ ಬಿಟ್ಟು ಅದು ಬೇರೆ ಕಡೆ ಹೋಗುವುದಿಲ್ಲವಂತೆ. ಆ ಭೂತ ಆ ವ್ಯಕ್ತಿಯನ್ನು ತಾನು ಬಿಟ್ಟು ಹೋಗುತ್ತೇನೆ ಎಂದು ಹೇಳಿ ಹೊರಟು ಹೋದ ಮೇಲೆಯೇ ಆ ವ್ಯಕ್ತಿಯನ್ನು ರಂಗೋಲಿಯ ಮಂಡಲದಿಂದ ಹೊರಗೆ ಕರೆದು ತರುತ್ತಾರೆ.

ಇಲ್ಲಿ ಹಾಕುವ ರಂಗೋಲಿ ಆಯತಾಕಾರದಲ್ಲಿದ್ದು, ಚಕಾರ ಮನೆಯಂತೆ ಕತ್ತರಿಯ ಕಟ್ಟೆಗಳಿರುತ್ತವೆ. ಮಧ್ಯದಲ್ಲಿ ವರ್ತುಳ ಇರುವುದು. ಇಲ್ಲಿ ಅಲಂಕಾರ ವಿಶೇಷತೆ ಕಾಣಿಸುವುದಿಲ್ಲ. ಇನ್ನು ಕೆಲವು ಪ್ರದೇಶಗಳಲ್ಲಿ ಅರಷಿಣ, ಕುಂಕುಮ, ಪುಡಿ, ಬಿಳಿಯ ರಂಗೋಲಿ. ಇದ್ದಿಲು ಪುಡಿಗಳನ್ನು ಬಳಸಿಯೂ ವರ್ತುಳ ರಚಿಸಿತ್ತಾರೆ ಭೂತ ಬಿಡಿಸುವ ರಂಗೋಲಿಯಲ್ಲಿ ಇಂತಹ ಪ್ರಾದೇಶಿಕ ವ್ಯತ್ಯಾಸ ಕಾಣಿಸಿಕೊಂಡಿರುತ್ತವೆ.

**೭. ಚಾಡಿಯ ರಂಗೋಲಿ:** ಇದನ್ನು ಮಂತ್ರ–ಮಾಟದ ರಂಗೋಲಿಯೆಂದೂ ಭಾನಾಮತಿಯ ರಂಗೋಲಿಯಿಂದೂ ಕರೆಯಲಾಗುತ್ತದೆ. ವಿಜಾಪೂರ, ಗುಲಬರ್ಗಾ,ಬೀದರ ರಾಯಚೂರ, ಬಳ್ಳಾರಿ ವಿಭಾಗದಲ್ಲಿ ಭಾನಾಮತಿ ಹೆಚ್ಚಿನ ಪ್ರಮಾಣದಲ್ಲಿದೆ. ಅದರಲ್ಲಿಯೂ ಬೀದರ, ಔರಾದ, ಹುಮನಾಬಾದ ಮತ್ತು ಗಲಬರ್ಗಾದ ಚಿಂಚೋಳಿ ಭಾಗದಲ್ಲಿ ಭಾನಾಮತಿ ಮಾಡುವವರು, ಅದನ್ನು ತೆಗೆಯುವವರು ಹೆಚ್ಚಾಗಿ ಕಂಡುಬರುತ್ತಾರೆ. ಬೇರೆಯವರಿಗೆ ಕೇಡುಂಟುಮಡಲು ಬಳಸುವ ಒಂದು ತಾಂತ್ರಿಕಾಚರಣೆ ಚಾಡಿ (ಭಾನಾಮತಿ). ಯಾರಿಗೆ ಭಾನಾಮತಿ ಮಾಡಬೇಕೋ ಆ ವ್ಯಕ್ತಿಯ ಬಟ್ಟೆಯ ಚೂರು, ಕೂದಲು, ವೀರ್ಯ, ಋತುಸ್ರಾವವಿರುವ ಬಟ್ಟೆ ಭಾಗ ಮೂತ್ರ ಅಂಟಿದ ಮಣ್ಣು ಇತ್ಯಾದಿ ವಸ್ತುಗಳನ್ನು ಬಸರಿಗಿಡದಿಂದ

ಮಾಡಿದ ಗೊಂಬೆಯೊಂದಕ್ಕೆ ಕಟ್ಟಲಾಗುತ್ತದೆ. ಅಮವಾಸ್ಯೆ ಹುಣ್ಣಿಮೆರಾತ್ರಿ ಈ ಬೊಂಬೆಯನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ಮೊದಲು ನೆಲದ ಮೇಲೆ ಅರಿಷಿಣ ಕುಂಕುಮದಿಂದ ಮಂಡಲಬರೆಯುತ್ತಾರೆ. ಚತುಸ್ಕೋನದ ಈ ಮಂಡಲದಲ್ಲಿ ಎಂಟು ವೃತ್ತಗಳಿರುತ್ತವೆ. ಈ ಮಂಡಲದ ಮದ್ಯ ಗೊಂಬೆಯನ್ನಿಟ್ಟು, ವಿಧಿವತ್ತಾಗಿ ಪೂಜೆ ಮಾಡಿ, ಭಾನಾಮತಿ ಶಕ್ತಿಯನ್ನು ಆಹ್ವಾನಿಸಲಾಗುತ್ತದೆ. ಕೇರು ಬೀಜಕ್ಕೆ ಚುಚ್ಚಿದ ಉದ್ದನೆಯ ಸೂಜಿ ಡಬ್ಬಣದಿಂದ ವ್ಯಕ್ತಿಯ ಯಾವ ಭಾಗಕ್ಕೆ ಊನ ಮಾಡಬೇಕೆಂದು ಉದ್ದೇಶಿಸಿರುವಿರೋ ಬೊಂಬೆಯ ಆಭಾಗಕ್ಕೆ ಚುಚ್ಚಲಾಗುತ್ತದೆ ನಂತರ ಬೊಂಬೆಯನ್ನು ಒಂದು ಕಡೆಗೆ ಹೂಳುವರು. ಸ್ವಲ್ಪ ಸಮಯದಲ್ಲಿಯೇ ಆ ವ್ಯಕ್ತಿಗೆ ಭಾನಾಮತಿ ಕಾಡಲಾರಂಭಿಸುತ್ತದೆಯಂತೆ. ಇಲ್ಲಿ ಒಂದೊಂದು ಬಗೆಯ ಕೇಡನ್ನು ಮಾಡಲು ಒಂಧೊಂದು ರೀತಿಯ ಗೊಂಬೆಗಳಿದ್ದು, ಇವುಗಳಲ್ಲಿ ಪ್ರಮುಖವಾಗಿ ೬೪ ಬಗೆಯ ಗೊಂಬೆಗಳಿರುವುದು ಗೊತ್ತಾಗುತ್ತದೆ.

ಮುಂದೆ ಪ್ರತಿಯಾಗಿ ಭಾನಾಮತಿ ಮಾಡಿದಾಗ ಭಾನಾಮತಿಯಿಂದ ಈ ವಕ್ತಿಗೆ ಆರಾಮವಾಗುತ್ತದೆಯಂತೆ. ಇಲ್ಲದಿದ್ದರೆ ತೊಂದರೆಯಿಂದಲೇ ಆ ವ್ಯಕ್ತಿ ಸಾಯುವುದಾಗಿ ಹೇಳಲಾಗುತ್ತಿದೆ. ಭಾನಾಮತಿ ಮಾಡಿದ ಆ ಗೊಂಬೆಯನ್ನು ಹುಡುಕಿ ಹೊರತೆಗೆದು ಸುಟ್ಟರೆ ಮಾತ್ರ ಈತ ಬದುಕುತ್ತಾನೆ ಎಂಬ ನಂಬಿಕೆಯೂ ಇದೆ.

**೮. ಮೋಡಿಯಾಟದ ರಂಗೋಲಿ:** ಕರ್ನಾಟಕದುದ್ದಕ್ಕೂ ಪ್ರಚಲಿತದಲ್ಲಿರುವ ಈ ಮೋಡಿಯಾಟದಲ್ಲಿ ಎರಡು ವಿಧಗಳಿವೆ. ಒಂದು ರಣಮೋಡಿ, ಇನ್ನೊಂದು: ರಾಜಮೋಡಿ ಬೇರೆಯವರೊಂದಿಗೆ ಸ್ಪರ್ದೆಗೆ ನಿಂತು ಆಡುವ ಭಯಂಕರ ಆಟವೇ ರಣಮೋಡಿ, ಸಂತೆ, ಜಾತ್ರೆಗಳಲ್ಲಿ ಪ್ರದರ್ಶನದ ಜೊತೆಗೆ ಮನರಂಜನೆ ನೀಡುವುದೇ ರಾಜಮೋಡಿ.

ಇಲ್ಲಿ ಎದುರುಬದುರಾಗಿ ಆಟ ನಡೆಯುತ್ತದೆ. ಈ ಆಟದ ಸಂದರ್ಭದಲ್ಲಿ ಕುಂಕುಮ, ಅರಿಷಿಣ, ಸುಣ್ಣದಿಂದ ಮಂಡಲ ಬರೆಯುತ್ತಾರೆ. ಇದಕ್ಕೆ ರಂಗಮಂಡಲವೆಂದು ಹೆಸರು. ಆಟ ಪ್ರಾರಂಭವಾಗುವ ಒಂದರೆಡು ತಾಸು ಮೊದಲು ಈ ರಂಗ ಹೊಯ್ಯುತ್ತಾರೆ. ಇದನ್ನು ಹೊಯ್ಯುವವರು ಗಂಡಸರು. ಮಂಡಲ ಬರೆದವರದು ಒಂದು ಗುಂಪು. ಈ ಮಂಡಲವನ್ನು ಪ್ರವೇಶಿಸಿ ಅದರಲ್ಲಿರುವ ವಸ್ತುಗಳನ್ನು ತೆಗೆದುಕೊಂಡು ಹೋಗುವ ಎದುರಾಳಿಗಳದು ಇನ್ನೊಂದು ಗುಂಪು, ಮಂಡಲದಲ್ಲಿ ವಸ್ತುಗಳನ್ನು ಎದುರಾಳಿ ಬಾಯಿಂದ ಒಯ್ಯುತ್ತಾನೆ. ಆಗ ಮಂಡಲದವರು ಮಂತ್ರ ಹಾಕಿ ಅವರನ್ನು ಹಿಮ್ಮೆಟ್ಟಿಸುತ್ತಾರೆ. ಹೀಗೆ ಆಟ ಮುಂದುವರಿಯುತ್ತದೆ.

ಇಲ್ಲಿಯ ಮಂಡಲ ಆಯತಾಕಾರದಲ್ಲಿದ್ದು, ಐದು ಮತ್ತು ಏಳು ಚೌಕಗಳು ಎರಡು ಬದಿಯಲ್ಲಿರುತ್ತವೆ. ನಡುವೆ ಈ ಚೌಕಗಳಲ್ಲಿ ವಿವಿಧ ರೀತಿಯ ವಸ್ತುಗಳನ್ನಿಟ್ಟಿರುತ್ತಾರೆ. ಶ್ರೀ ಓಂ. ಕತ್ತರಿ ಚಿಹ್ನೆಯಂತಹ ವಿನ್ಯಾಸಗಳನ್ನು ಬರೆದಿರುತ್ತಾರೆ. ತಲೆಯ ಭಾಗದಲ್ಲಿ ಮಣ್ಣಿನ ಗೊಂಬೆ, ಬಾಣಂತಿಯ ಕೈ ಇತ್ಯಾದಿ ಇರುತ್ತವೆ. ಅದರ ಎದುರು ಭಾಗದಿಂದಲೇ ಎದುರಾಳಿ ಪ್ರವೇಶ ಮಾಡಬೇಕು. ಆಟ ನಡೆದಷ್ಟು ದಿವಸ ಪ್ರತಿ ದಿವಸ ಮಂಡಲವನ್ನು ಹೊಸದಾಗಿ ಬರೆಯಬೇಕೆಂದು ಹೇಳುತ್ತಾರೆ.

**೯. ಸ್ಮಶಾನದ ರಂಗೋಲಿ:** ಇದರಲ್ಲಿ ಎರಡು ವಿಧಗಳಿವೆ. ೧. ಸಮಾಧಿ ರಂಗೋಲಿ. ೨. ಬಾಣಂತಿಯ ಕೈ ತರುವಾಗಿನ ರಂಗೋಲಿ, ಇವುಗಳನ್ನು ಇಲ್ಲಿ ನೋಡಬಹುದು.

**೧. ಸಮಾಧಿ ರಂಗೋಲಿ:** ಅಶುಭ ಸೂಚಕವೆಂದು ಭಾವಿಸಿ ಸತ್ತವರ ಮನೆಯಲ್ಲಿ ಅಂದು ರಂಗೋಲಿ ಹಾಕುವುದಿಲ್ಲ. ಆದರೆ ಸ್ಮಶಾನದಲ್ಲಿ ಹೂಳುವ ಗೋರಿಯ ಒಳಗೆ ಹಾಗೂ ಹೊರಗಿನ ಬದಿಯಲ್ಲಿ ರಂಗೋಲಿ ಹಾಕುತ್ತಾರೆ. ಇದನ್ನು ಹಾಕುವವರು ಪುರುಷರು. ಬಣ್ಣ ಬಣ್ಣದ ರಂಗೋಲಿಯನ್ನು ಕೆಲವರು ಹಾಕುತ್ತಾರೆ. ಅಲ್ಲಿಯ ರಂಗೋಲಿಯಲ್ಲಿ ಈಶ್ವರ, ಸ್ವಸ್ತಿಕ, ಸೂರ್ಯ, ಚಂದ್ರ ಇತ್ಯಾದಿ ಚಿತ್ರಗಳಿರುತ್ತವೆ. ಈ ರಂಗೋಲಿಯ ನಡುವೆ ಹೆಣವನ್ನಿಟ್ಟು ಹೂಳುತ್ತಾರೆ. ಇಲ್ಲವೆ ಸುಡುತ್ತಾರೆ. ಸತ್ತವರು ದೆವ್ವವಾಗಿ ಕಾಡಬಾರದು, ಅವರ ಆತ್ಮಕ್ಕೆ ಸದ್ಗತಿ ದೊರೆಯಲೆಂಬ ಭಾವನೆಯಿಂದ ರಂಗೋಲಿ ಹಾಕುತ್ತಾರೆ. ಮುಸ್ಲಿಂರು ಮತ್ತು ಕ್ರೈಸ್ತರನು ಬಿಟ್ಟರೆ ಉಳಿದೆಲ್ಲ ಜನಾಂಗದವರು ಈ ಸಂದರ್ಭದಲ್ಲಿ ನೇಮಕ್ಕಾದರೂ ರಂಗೋ. ಲಿ ಹಾಕುತ್ತಾರೆ. ವೀರಶೈವರಲ್ಲಿ ಚೌಕೋನ, ಸೂರ್ಯ, ಚಂದ್ರ, ಶುಭ-ಲಾಭ, ಈಶ್ವರನ ಚಿತ್ರಗಳನ್ನು ಜೈನರು ಸ್ವಸ್ತಿಕ, ಕಳಸದ ರಂಗೋಲಿಯನ್ನೂ, ಬ್ರಾಹ್ಮಣರು ಮಂಡಲದ ರಂಗೋಲಿಯನ್ನೂ ಈ ಸಂದರ್ಭದಲ್ಲಿ ಹಾಕುವುದು ಕಂಡುಬರುತ್ತದೆ.

**೨. ಬಾಣಂತಿಯ ಕೈ ತರುವಾಗಿನ ರಂಗೋಲಿ:** ಗೋಂದಲಿಗ ಜನಾಂಗಕ್ಕೆ ಸೇರಿದ ಬುಡಬಡಿಕೆಯವರಲ್ಲಿ ಬಾಣಂತಿ ಕೈತರುವ ಸಂಪ್ರದಾಯವಿದೆ. ಆ ಸಂದರ್ಭದಲ್ಲಿ ಸ್ಮಶಾನದಲ್ಲಿ ಹಾಕುವ ರಂಗೋಲಿಯ ಮಂಡಲ ವಿಶಿಷ್ಟವಾದುದಾಗಿದೆ. ಹೆಣ ಹೂಳಿದ ಮೂರು ದಿವಸದೊಳಗಾಗಿ ಈ ಬಾಣಂತಿಯ ಕೈ ತರಬೇಕಾಗುತ್ತದೆ. ಮಧ್ಯರಾತ್ರಿಯಲ್ಲಿ ಸ್ಮಶನಕ್ಕೆ ಹೋಗಿ, ಅಲ್ಲಿ ಪೂರ್ಣ ನಗ್ನವಾಗಬೇಕು. ಬಾಣಂತಿಯ ಕೈ ಒಯ್ಯಲು ಬಂದ ಬುಡಬುಡಕಿಯವನು ಗೋರಿಯ ಸುತ್ತಮುತ್ತಲೂ ರಂಗೋಲಿಯ ಮಂಡಲ ಬರೆಯುತ್ತಾನೆ.

ಕುಂಕುಮ, ಗುಲಾಲ, ಅರಿಷಿಣ ಪುಡಿ, ಹಸಿರು ಬಣ್ಣ, ಹಳದಿ ಬಣ್ಣ ಮತ್ತು ಕರಿಯ ಅರಿವೆ, ಹಸಿರು ಅರಿವೆಗಳನ್ನಿಟ್ಟು ಮಂಡಲ ತುಂಬಿ ಗೋದಿಯ ಕಣದಿಂದ ಮಾಡಿದ ನೈವೇದ್ಯ ತೋರಿಸಿ, ದೀಪ ಹಚ್ಚಿ ಆರಿಸುವುದು. ಕೊನೆಗೆ ನಾಲ್ಕು ಬಾಳೆಯ ಹಣ್ಣು, ನಾಲ್ಕು ಲಿಂಬೆಯ ಹಣ್ಣು, ನಾಲ್ಕು ಸೂಜಿ, ನಾಲ್ಕು ಮೊಳೆ, ನಾಲ್ಕು ಬೆತ್ತದ ಕಟ್ಟಿಗೆ ನೂರಾ ಒಂದು ಹಸಿರು ಬಳೆ, ಮಂಗಳಸೂತ್ರ ಕುಂಕುಮ, ಅಡಿಕೆ ಕಂಕಣ, ಬಾಸಿಂಗಗಳನ್ನು ಮಂಡಲದಲ್ಲಿ (ರಂಗೋಲಿ ಹಾಕಿದ ಸ್ಥಳದಲ್ಲಿ) ಇಡುತ್ತಾರೆ.

ಭೂತ, ಪಿಶಾಚಿ ಮೊದಲಾದ ದುಷ್ಟ ಶಕ್ತಿಗಳು ಮಂಡಲ ದಾಟುವದಿಲ್ಲವೆಂಬ ಉದ್ದೇಶದಿಂದಲೇ ಹೆಣದ ಸುತ್ತಲೂ ರಂಗೋಲಿ ಹಾಕಿರುತ್ತಾರೆ. ಅದರಂತೆ ಬಾಣಂತಿ ಕೈ ವಶಪಡಿಸಿಕೊಳ್ಳುವ ವ್ಯಕ್ತಿ ತನ್ನ ಸುತ್ತಲೂ ಗೋರಿಯ ಒಳಗೂ ರಂಗೋಲಿಯ ಮಂಡಲ ಹಾಕಿಕೊಂಡಿರುತ್ತಾನೆ. ಹೀಗೆ ದೈವೀ ಶಕ್ತಿಯ ವಶೀಕರಣ ಹಾಗೂ ರಕ್ಷಣೆಯ ಹಿನ್ನೆಲೆಯಲ್ಲಿ ರಂಗೋಲಿಯನ್ನು ಹಾಕಲಾಗುತ್ತದೆ.

ಒಟ್ಟಾರೆ ಭಾರತೀಯ ರಂಗೋಲಿಚಿತ್ರಕಲೆಯು ಮೂರು ರೀತಿಯಲ್ಲಿ ಕಂಡುಬರುತ್ತಿದ್ದು ಅವುಗಳನ್ನು ಇಲ್ಲಿ ನೋಡಬಹುದು.

೧. ಆಕೃತಿ ಪ್ರಧಾನ ರಂಗೋಲಿ ಚಿತ್ರಕಲೆ (ಚುಕ್ಕೆ ರಂಗೋಲಿ ಚಿತ್ರಕಲೆ)

೨. ವಲ್ಲರಿ ಪ್ರಧಾನ ರಂಗೋಲಿ ಚಿತ್ರಕಲೆ (ಎಳೆ ರಂಗೋಲಿ ಚಿತ್ರಕಲೆ)

೩. ಆಕೃತಿ–ವಲ್ಲರಿ ಪ್ರಧಾನ ರಂಗೋಲಿ ಚಿತ್ರಕಲೆ (ಚುಕ್ಕೆ ಮತ್ತು ಎಳೆ ರಂಗೋಲಿ ಚಿತ್ರಕಲೆ


**೧. ಆಕೃತಿ ಪ್ರಧಾನ ರಂಗೋಲಿ ಚಿತ್ರಕಲೆ:** ಭಾರತದ ಪ್ರಮುಖ ರಾಜ್ಯಗಳಾದ ಉತ್ತರ ಪ್ರದೇಶ ಮಹಾರಾಷ್ಟ್ರ ಆಂಧ್ರಪ್ರದೇಶ, ರಾಜಸ್ಥಾನ ಮತ್ತು ಮಧ್ಯ ಪ್ರದೇಶಗಳಲ್ಲಿ ಭೂಮಿತಿ ಆಕೃತಿಯ ರಂಗೋಲಿ ಚಿತ್ರಗಳು ವಿಶೇಷವಾಗಿ ಕಂಡುಬರುತ್ತವೆ. ಇಲ್ಲಿ ವೃತ್ತ ಚೌಕ, ಅರ್ಧವರ್ತುಳ, ಆಯತ, ಚೌಕ ಮುಂತಾದ ಆಕೃತಿಗಳು ಪ್ರಧಾನವಾಗಿರುತ್ತವೆ.

**೨. ವಲ್ಲರಿ ಪ್ರಧಾನ ರಂಗೋಲಿ ಚಿತ್ರಕಲೆ :** ಚುಕ್ಕೆ ರಂಗೋಲಿಗಿಂತ ಭಿನ್ನವಾಗಿ ನೇರವಾಗಿ ರಂಗೋಲಿಯನ್ನು ಎಳೆದು ಚಿತ್ರಿಸುವ ವಿಧಾನ ಇಲ್ಲಿ ಇದ್ದು ಹೂಬಳ್ಳಿ ಪಶುಪಕ್ಷಿ, ಎಲೆ, ಹಣ್ಣುಹಂಪಲ, ನೈಸರ್ಗಿಕ ವಿವರಗಳು ಜಲಚರಪ್ರಾಣಿಗಳು ಹೀಗೆ ಹತ್ತುಹಲವಾರು ವಿಷಯದ ವಿವರಗಳು ಇಲ್ಲಿ

ರಂಗೋಲಿಕಲೆಗೆ ವಸ್ತುವಾಗಿವೆ. ಬಂಗಾಲಿ, ಬಿಹಾರ ಓರಿಸ್ಸಾ ರಾಜ್ಯಗಳಲ್ಲಿ ವಲ್ಲರಿ ಪ್ರಧಾನದ ಎಳೆರಂಗೋಲಿ ಹೆಚ್ಚಾಗಿ ಕಂಡುಬರುತ್ತದೆ.

**೩. ಆಕೃತಿ ವಲ್ಲರಿ ಪ್ರಧಾನ ರಂಗೋಲಿ ಚಿತ್ರಕಲೆ:** ಆಕೃತಿ ಮತ್ತು ವಲ್ಲರಿ ಎರಡು ರೀತಿಯಲ್ಲಿ ವಿಶೇಷವಾಗಿ ರಂಗೋಲಿಯ ರಚನೆಗಳು ಆಂಧ್ರ ಪ್ರದೇಶ, ಕೇರಳ, ತಮಿಳುನಾಡು ಕರ್ನಾಟಕ ದಕ್ಷಿಣಭಾರತದ ರಾಜ್ಯಗಳಲ್ಲಿ ಕಂಡು ಬರುತ್ತದೆ.

ಕನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಭೂಮಿತಿ ರಂಗೋಲಿ ಪ್ರಧಾನವಾಗಿ ವಲ್ಲರಿ ರಂಗೋಲಿ ನಂತರದಲ್ಲಿ ಕಂಡುಬಂದರೆ ದಕ್ಷಿಣ ಕರ್ನಾಟಕದಲ್ಲಿ ವಲ್ಲರಿ ಪ್ರಧಾನ ರಂಗೋಲಿ ಚಿತ್ರಕಲೆ ಪ್ರಮುಖವಾಗಿ, ನಂತರದಲ್ಲಿ ಭೂಮಿತಿ ಅಥವಾ ಆಕೃತಿ ಪ್ರಧಾನ ರಂಗೋಲಿ ವಿನ್ಯಾಸ ಕಂಡು ಬರುತ್ತದೆ.



ಕರಾವಳಿ ಕರ್ನಾಟಕದಲ್ಲಿ ಆಕೃತಿ ಪ್ರಧಾನ ಮತ್ತು ವಲ್ಲರಿ ಪ್ರಧಾನ ಎರಡೂ ರೀತಿಯ ರಂಗೋಲಿಗಳು ಸಮಪ್ರಮಾಣದಲ್ಲಿ ಹಾಕುವುದನ್ನು ಕಾಣುತ್ತೇವೆ. ಭೂಮಿತಿ ಅಥವಾ ಆಕೃತಿ ಪ್ರಧಾನ ರಂಗೋಲಿಯೂ ಚುಕ್ಕಿಗಳನ್ನು ಇಟ್ಟು ರಂಗೋಲಿ ಹಾಕುವದರಿಂದ ಸುಲಭವಾಗಿ ಕಲಿಯಲು ಸಾಧ್ಯ. ವಲ್ಲರಿ ಅಥವಾ ಎಳೆರಂಗೋಲಿಗೆ ಸ್ವಲ್ಪ ಪರಿಶ್ರಮ ಮತ್ತು ಸೃಜನಶೀಲತೆ ಬೇಕಾಗುತ್ತದೆ. ವೇದಕಾಲಿನ ರಂಗೋಲಿಗಳದೇ ಒಂದು ಪ್ರತ್ಯೇಕ ಬಗೆ ಇಲ್ಲಿ ಕಲ್ಪನೆಗಿಂತ ರೀತಿ ನೀತಿಗಳ ಕಟ್ಟಪಾಡಿನಲ್ಲಿ ಹಲವು ವಿನ್ಯಾಸಗಳು ರೂಪು ತಳೆದಿವೆ. ವೈದಿಕ ಪರಂಪರೆಯಲ್ಲಿ ರೂಢಿಯಲ್ಲಿರುವ ಹಲವು ಬಗೆಯ ಪೂಜೆಗಳಿಗೆ ನಿರ್ದಿಷ್ಟವಿನ್ಯಾಸದ ರಂಗೋಲಿಗಳು ಅಗತ್ಯ. ಇವುಗಳ ಉದ್ದೇಶ ಬೇರೆ ರಂಗೋಲಿಗಳಿಗಿಂತ ತೀರ ಭಿನ್ನ ಪೂಜೆ ವ್ರತ, ಯಜ್ಞಯಾಗಗಳ ಅಲಂಕಾರಿಕ ಅಗತ್ಯಗಳನ್ನು ಸಹ ಇವು ಪೂರೈಸಿದರೂ ಅದೇ ಅಂತಿಮ ಗುರಿಯಲ್ಲ. ಧಾರ್ಮಿಕ ಆಚರಣೆಗಳ ಅಂತಿಮ ಗುರಿಯಾದ ದೇವತಾಸಾಕ್ಷಾತ್ಕಾರಕ್ಕೆ ಪೂರಕ. ಪ್ರೇರಕ ಈ ಸಾಂಕೇತಿಕ ರಂಗೋಲಿಗಳು ಗುರುಮಂಡಲ, ಗಣಪತಿಮಂಡಲ, ಋಗ್ವೇದ ಪುಣ್ಯಾಹಮಂಡಲ, ಯಜರ್ವೇದ ಪುಣ್ಯಾಮಂಡಲ, ನವಗ್ರಹಮಂಡಲ, ಸರ್ಪಮಂಡಲ ವಾಸ್ತುಮಂಡಲ, ಹೋಮಕುಂಡ ರಂಗೋಲಿ ಏಕಲಿಂಗ ತೋಭದ್ರ, ಚಾತುರ್ಲಿಂಗ ತೋಭದ್ರ, ಅಷ್ಟಲಿಂಗತೋಭದ್ರ ಶ್ರೀ ದುರ್ಗಾತಂತ್ರ ಸರ್ವೋಭದ್ರಮಂಡಲ, ಸುದರ್ಶನ ಚಕ್ರ ಆಶ್ಲೇಷಬಲ ಮುಂತಾದವುಗಳೆಲ್ಲ ಖಚಿತ

ರೇಖಾ ವಿನ್ಯಾಸಗಳನ್ನು ಹೊಂದಿದೆ. ನಿರ್ದಿಷ್ಟ ಧಾರ್ಮಿಕ ಕಾರ್ಯಗಳಲ್ಲಿ ಕರಾರುವಕ್ಕಾಗಿ ಬಳಕೆಯಾಗುವ ರಂಗೋಲಿಗಳು, ಆಕರ್ಷಕ ಬಣ್ಣಗಳನ್ನು ತುಂಬುವದರಿಂದ ಅಲಂಕಾರಿಕ ಉದ್ದೇಶಗಳು ಈಡೇರುತ್ತವೆ ಎನ್ನುವ ಎಂ.ಪಿ.ಸುಸೀಲಾ ಅವರ ಮಾತುಗಳು ಅರ್ಥಪೂರ್ಣವಾದವುಗಳಾಗಿವೆ.

ಒಟ್ಟಾರೆ ರಂಗೋಲಿ ಚಿತ್ರಕಲೆ ಯಾವುದೇ ರಾಜ್ಯ ಪ್ರಾಂತದಲ್ಲಿಯದಾಗಿದ್ದರೂ ಅಲ್ಲಿರುವ ಮೂಲ ಆಶಯ ಒಂದೇ ಆಗಿದೆ. ಅದು ಶುಭದ ಸಂಕೇತ ಮತ್ತು ತಮ್ಮ ಮನೆಯ ಹಾಗೂ ಹೊಸ್ತಿಲಲ್ಲಿ ರಂಗೋಲಿ ಹಾಕುವುದು ಒಳ್ಳೆಯದು ಅದು ಮನೆಯ ಸೌಭಾಗ್ಯ ಸಂಪತ್ತನ್ನು ವೃದ್ಧಿಸುತ್ತದೆ. ಎಂಬ ನಂಬಿಕೆ ಎಲ್ಲ ಕಡೆಯೂ, ಸಹಜವಾಗಿ ಒಂದೇ ಆಗಿದೆ. ಕೆಲವು ಪ್ರದೇಶಗಳಾದ ಸಿಂಧಿ, ಪಂಜಾಬಿ ಪಂಗಡಗಳಲ್ಲಿ ರಂಗೋಲಿ ಇಡುವ ಸಂಪ್ರದಾಯವಿಲ್ಲದೆ ಇರುವುದು ಕಂಡುಬರುತ್ತದೆ. ಇನ್ನೂ ಕೆಲವು ಜನಾಂಗಗಳಲ್ಲಿ ನಿರ್ದಿಷ್ಟವಾದ ರಂಗೋಲಿ ಇಡಬೇಕೆನ್ನುವ ಯಾವುದೇ ಕಟ್ಟು ಪಾಡುಗಳಿಲ್ಲ.

ಸಾಮಾನ್ಯವಾಗಿ ರಂಗೋಲಿ ಚಿತ್ರವನ್ನು ಬಿಡಿಸುವಾಗ ನೆಲವನ್ನು ಸಗಣಿಯಿಂದ ಸಾರಿಸಿ ನೆಲದ ಅಂಚಿಗೆ, ಗೋಡೆಗೆ ಸುಣ್ಣ ಹಾಗೂ ಕೆಮ್ಮಣ್ಣು ಪಟ್ಟಿಯನ್ನು ಎಳೆಯುವದು ವಾಡಿಕೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಬೆಳಿಗ್ಗೆ ಎದ್ದೊಡನೆ ಮೊದಲು ಮಾಡುವ ಕೆಲಸವೆಂದರೆ ಕಸಗೂಡಿಸಿ ಅಂಗಳನ್ನು ಸಾರಿಸಿ ರಂಗೋಲಿ ಹಾಕಿ ಹೊಸ್ತಿಲನ್ನು ಪೂಜಿಸಿ ಮನೆ ಕೆಲಸ ಪ್ರಾರಂಭಿಸುವುದು ಹೆಣ್ಣಮಕ್ಕಳ ಒಂದು ಜೀವನ ಕ್ರಮವಾಗಿ ಕಂಡುಬರುತ್ತದೆ. ರಂಗೋಲಿ ಹಾಕುವ ಯಾವುದೇ ಜನಾಂಗದಲ್ಲಿ ಇರುವ ನಂಬಿಕೆಯಂದರೆ ರಂಗೋಲಿ ಲಕ್ಷ್ಮೀಕರ ಎಂಬ ಭಾವನೆಯಿದೆ.

ಯಾವುದೇ ಪ್ರದೇಶದಲ್ಲಿ ರಂಗೋಲಿಯನ್ನು ಹೆಚ್ಚಾಗಿ ಹೆಣ್ಣುಮಕ್ಕಳೇ ಹಾಕುತ್ತಿದ್ದು ಕೆಲವು ವಿಶೇಷ ಸಂದರ್ಭಗಳಲ್ಲಿ ಪುರುಷರು ಸಹ ರಂಗೋಲಿಯನ್ನು ಹಾಕುತ್ತಾರೆ. ಕರಾವಳಿ ಪ್ರದೇಶದಲ್ಲಿಯ ನಾಗಮಂಡಲದ ಆಚರಣೆಯಲ್ಲಿ ವೈದ್ಯರೆಂಬ ಪಂಗಡದ ಪುರುಷರು ರಂಗೋಲಿ ಹಾಕಬೇಕೆಂಬ ನಿಯಮಗಳಿವೆಯಂತೆ. ಶಿರಟಿಗನ ಬೆಲೆಯ ಗೌಡಜನಾಂಗದಲ್ಲಿ ಮದುವೆ ಸಂದರ್ಭದಲ್ಲಿ ಗಂಡಸರೇ ರಂಗೋಲಿ ಹಾಕುವ ನಿಯಮವಿದೆ. ಕರ್ನಾಟಕದ ಲಂಬಾಣಿ ಜನಾಂಗದಲ್ಲಿಯೂ ಪುರುಷರೇ ರಂಗೋಲಿ ಹಾಕುವ ಸಂಪ್ರದಾಯವಿದೆ. ಮಂತ್ರ ಮಾಟ ವ್ಯಾದಿ ನಿವಾರಣೆ ಭೂತ ಬಿಡಿಸುವ ಕೆಲವು ವಿಶಿಷ್ಟ ಸಂದರ್ಭದಲ್ಲಿ ಪುರುಷರು ರಂಗೋಲಿ ಹಾಕುತ್ತಾರೆ. ಆದರೆ ಮಂಗಳ ಕಾರ್ಯದಲ್ಲಿ ಹಾಕುವ ರಂಗೋಲಿಯನ್ನು ಮುತ್ತೈದೆಯರೇ ಹಾಕಬೇಕೆಂಬ ಸಂಪ್ರದಾಯವಿದೆ. ವಿಧವೆಯರಿಗೆ ಆ ಅವಕಾಶವಿರುವುದಿಲ್ಲ. ಪ್ರೇತಗಳು

ಮನೆಯಲ್ಲಿ ಬಾರದಿರಲಿ ಎಂಬ ನಂಬಿಗೆ ಹೆಚ್ಚು ಪ್ರಚಲಿತದಲ್ಲಿರುವದು ಕಂಡುಬರುತ್ತದೆ. ಸತ್ತ ಮನೆಯಲ್ಲಿ ಹದಿಮೂರು ದಿನಗಳವರೆಗೆ ಕೆಲವರು ರಂಗೋಲಿ ಇಡುವುದಿಲ್ಲ ಕರ್ಮಾಂತರ ಮುಗಿದ ಮೇಲೆಯೇ ರಂಗೋಲಿ ಹಾಕುವುದು ಸಂಪ್ರದಾಯವಾಗಿದೆ. ಇದಕ್ಕೆ ಹಿಂದೆ ಇರುವ ಕಾರಣ ಕರ್ಮಾಂತರಗಳಲ್ಲಿ ಸತ್ತವರ ಆತ್ಮವನ್ನು ಆಹ್ವಾನಿಸುವದರಿಂದ ರಂಗೋಲಿ ದಾಟಿ ಅವು ಬರುವುದಿಲ್ಲ ಎನ್ನುವ ನಂಬಿಗೆಯೇ ಇದಕ್ಕೆ ಕಾರಣವಾಗಿದೆ. ಕೆಲವು ಜನಾಂಗದಲ್ಲಿ ಸತ್ತವ್ಯಕ್ತಿಯ ಮನೆಯಲ್ಲಿ ಒಂದು ವರ್ಷದ ವರೆಗೂ ರಂಗೋಲಿ ಹಾಕುವುದಿಲ್ಲವಂತೆ, ಒಟ್ಟಾರೆ ಅಲಂಕಾರ ಸೌಂದರ್ಯ ಹಾಗೂ ಸುಚಿತ್ವ ಈ ಕಲೆಯ ಹಿಂದೆ ಕೆಲಸಮಾಡಿದೆಯೆಂದು ಹೇಳಬಹುದು.

ರಂಗೋಲಿ ಹಾಕುವ ಅನೇಕ ಜನಾಂಗ ಪಂಗಡಗಳಲ್ಲಿ ರಂಗೋಲಿ ಹಾಕುವ ಸಾಮಗ್ರಿಗಳಲ್ಲಿ ಸಹಜವಾದ ಭಿನ್ನತೆಗಳು ಕಂಡುಬರುತ್ತವೆ. ಆದರೆ ಭಾವನೆಗಳಲ್ಲಿ ಮಾತ್ರ ಏಕತೆ ಇರುವುದು ಗಮನಾರ್ಹ ಅಂಶವಾಗಿದೆ. ಇದ್ದಿಲು ಪುಡಿಯಿಂದ ರಂಗೋಲಿ ಹಾಕಿದರೆ ಶನಿ ಎನ್ನುವ ಭಾವನೆ. ಹಾಗಯೇ ದೆವ್ವಗಳು ಬರುತ್ತವೆ ಎನ್ನುವ ಭಾವನೆಯಿದೆ. ಸುಣ್ಣದಿಂದಲೂ ರಂಗೋಲಿ ಬರೆಯಬಾರದು ಎಂಬೆಲ್ಲ ನಂಬಿಕೆಗಳು ಸಾಮಾನ್ಯವಾಗಿ ಎಲ್ಲ ಪ್ರದೇಶದಲ್ಲಿಯೂ ಇವೆ. ಕೆಲವು ರಂಗೋಲಿಗಳು ಉದ್ದೇಶಕ್ಕೆ ತಕ್ಕಂತೆ ಖಚಿತವಾಗಿ, ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸಬಲ್ಲ ಒಂದು ವಿಶಿಷ್ಟವಾದ ಸಾಮರ್ಥ್ಯವನ್ನು ಪಡೆದಿವೆ. ಗೋಪದ್ಮ ಮದುವೆಯ ರಂಗೋಲಿ ಇವುಗಳಲ್ಲಿ ವೈಚಾರಿಕ ನೆಲೆಗಳನ್ನು ಗುರುತಿಸಬಹುದು. ರಂಗೋಲಿಯ ಸೃಷ್ಟಿ, ದೃಷ್ಟಿ ದೋರಣೆಗಳಲ್ಲಿ ವೈಶಿಷ್ಟ್ಯತೆ ಮತ್ತು ಅಭಿವ್ಯಕ್ತಿಯ ಸತ್ವದ ಸ್ಥರಗಳಲ್ಲಿ ಸಂಕೀರ್ಣತೆ ಕೆಲವು ವೈಚಾರಿಕತೆಗಳಲ್ಲಿ ಬೇರೆ ಬೇರೆ ಯಾಗಿ ನಿಲ್ಲುತ್ತವೆ. ಎಂಬುದಲ್ಲಿ ಎರಡು ಮಾತಿಲ್ಲ. ಇಲ್ಲಿ ಧರ್ಮದ ಹಿನ್ನಲೆಯಲ್ಲಿ ರಚನೆಯಾಗವ ಅಲಂಕಾರಿಕ ರಂಗೋಲಿಗಳಲ್ಲಿ ಸೃಜನಶೀಲತೆಗೆ ವಿಫುಲವಾದ ಅವಕಾಶಗಳಿವೆ.

ಧಾರ್ಮಿಕ ರಂಗೋಲಿಗಳಿಗೆ ಅವುಗಳದೆ ಆದ ನಿರ್ದಿಷ್ಟ ಉದ್ದೇಶಗಳಿವೆ. ನೀತಿ ನಿಯಮಗಳಿವೆ. ಮಡಿ ಹುಡಿಯ ಕಲ್ಪನೆಗಳು ಇಂತವರೇ ಹಾಕಬೇಕು. ಹೀಗೆ ಇರಬೇಕು ಮುತ್ತೈದೆ ಸ್ತ್ರೀಯರೇ ಇರಬೇಕು. ಪುರುಷರೇ ಇರಬೇಕು ಎಂಬೆಲ್ಲ ಕಟ್ಟಳೆಗಳಿವೆ.

ನಿಸರ್ಗದೊಂದಿಗೆ ಸಹಜೀವನವನ್ನು ನಡೆಸುವ ಭಾರತದ ಈ ಕಲೆಯ ಮೇಲೆ, ನಿಸರ್ಗದ ಪ್ರಭಾವ ಅಪಾರ, ಸೂರ್ಯ, ಚಂದ್ರ, ಪಕ್ಷಿಗಳು, ಪುಷ್ಪಗಳು ಮೇಲೆ ನಿಸರ್ಗದ ಪ್ರಭಾವ ಅಪಾರ ಸೂರ್ಯ, ಚಂದ್ರ, ಪಕ್ಷಿಗಳು, ಪುಷ್ಪಗಳು, ಮರಗಳು ಮುಂತಾದ ನೈಸರ್ಗಿಕ ಅಂಶಗಳು ಈ ಕಲೆಯ ಅವಿಭಾಜ್ಯ ಅಂಗಗಳಾಗಿ

ಹೋಗಿವೆ. ನಿಸರ್ಗದಂತೆಯೇ ಧರ್ಮವೂ ಸಹ ಈ ಕಲೆಯನ್ನು ಪ್ರಭಾವಿತ ಗೊಳಿಸಿದೆ. ಧಾರ್ಮಿಕ ಸಾಂಕೇತಗಳನ್ನು ಸ್ವಸ್ತಿಕ್ ನಂತಹ ಚಿನ್ಹೆ ಚೌಕ ಲಕ್ಷ್ಮೀಯ ಪೀಠವಾದರೆ, ಎರಡು ತ್ರಿಕೋನಗಳು ಪರಸ್ಪರ ಸೇರಿದರೆ ಸರಸ್ವತಿಯ ಸಂಕೇತಗಳಾಗುತ್ತವೆ. ಮತ್ತು ಪೂಜಾಸ್ಥಾನಗಳನ್ನು ಪವಿತ್ರಗೊಳಿಸಲು ಈ ರಂಗೋಲಿಯನ್ನು ಹಾಕಲಾಗುತ್ತಿದೆ. ಹೀಗೆ ಭಾರತೀಯ ಧರ್ಮ ಸಂಸ್ಕೃತಿಯೊಂದಿಗೆ ಈ ಕಲೆ ಹಾಸು ಹೊಕ್ಕಾಗಿ ಬೆಳೆದುಬಂದಿದೆ.

ರಂಗೋಲಿ ಚಿತ್ರಗಳು ಸಾಮಾನ್ಯವಾಗಿ ಒಂದು ಕೇಂದ್ರ ಬಿಂದುವಿಲ್ಲಿ ಆರಂಭವಾಗಿ ಕ್ರಮೇಣ ಅದು ವಿಸ್ತಾರಗೊಳ್ಳುತ್ತದೆ. ರೇಖಾ ಗಣಿತದೊಂದಿಗೆ ಒಂದು ರೀತಿಯಲ್ಲಿ ಈ ಕಲೆ ತುಂಬ ಸಮನ್ವಯವನ್ನು ಸಾಧಿಸಿದೆ. ಚೌಕ, ತ್ರೀಕೋನ, ವೃತ್ತ ಅರ್ದವರ್ತುಳ, ಆಯತ, ಬಿಂದು ಸರಳರೇಖೆ ಮತ್ತು ವಕ್ರರೇಖೆಗಳು ಅಷ್ಟಕೋನ, ಷಟ್‌ಕೋನ ಹೀಗೆ ಭೂಮಿತಿಯಾಕೃತಿಯ ಬಹುವಿನ್ಯಾಸಗಳ ಒಂದು ದೊಡ್ಡ ಸೃಜನಶೀಲ ರೇಖಾವಿನ್ಯಾಸಗಳ ಲೋಕವೇ ಈ ಕಲೆಯಲ್ಲಿರುವುದು ಒಂದು ವೈಶಿಷ್ಟ್ಯವಾಗಿದೆ.


ಅಲ್ಪಾಯುಷ್ಯಹೊಂದಿದ ಅಪೂರ್ವವಾದ ಈ ರಂಗೋಲಿ ಕಲ* ನೆಲದ ಮೇಲೆ ಕೆಲವೇ ಸಮಯದವರೆಗೆ ಇದ್ದರೂ ಇದು ಕೊಡುವ ಸಂತೋಷ ಅನುಪಮವಾದುದು ಅನನ್ಯವಾದುದು. ಮನೆಯ ಸಂತೋಷ ಮತ್ತು ಉತ್ಕರ್ಷಗಳ ಸಂಕೇತವಾಗಿ ಬದುಕಿನ ಕ್ಷಣಭಂಗುರತೆಯನ್ನು ಜ್ಞಾಪಿಸಿ, ಬದುಕನ್ನು ಸುಂದರಗೊಳಿಸುವ ಸಂದೇಶ ಈ ಕಲೆಯಲ್ಲಿದೆ ಎಂಬ ಮಾತುಗಳು ಅರ್ಥಪೂರ್ಣವಾದವುಗಳು.

ಜನಸಾಮಾನ್ಯರ ನಡುವೆ ಹುಟ್ಟಿ ಬೆಳೆದು ಬಂದ ಈ ಕಲೆ ಸರಳ ಸುಂದರ ಅಷ್ಟೇ ಗಂಭೀರ. ಭಾರತೀಯ ಜನಪದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಈ ಕಲೆಗೆ ಸಿಗಬೇಕಾದ ಸ್ಥಾನಮಾನ ಮಾತ್ರ ಇನ್ನೂ ಸಿಕ್ಕಿಲ್ಲ. ಈ ದಿಸೆಯಲ್ಲಿ ಹಲವಾರು ರೀತಿಯಲ್ಲಿ ಗಂಭೀರ ಅಧ್ಯಯನಗಳು ನಡೆಯಬೇಕಾಗಿವೆ. ಅಂದಾಗ ಮಾತ್ರ ಈ ಶ್ರೀಮಂತ ಪರಂಪರೆಯ ಅಭಿವ್ಯಕ್ತಿ ಮಾಧ್ಯಮವನ್ನು ಉಳಿಸಿಕೊಳ್ಳಲು ಸಾಧ್ಯ.

● ●

---

(* ಹೆಚ್ಚಿನ ವಿವರಗಳಿಗೆ ಡಾ.ಎಸ್.ಸಿ.ಪಾಟೀಲ ಅವರ ಕರ್ನಾಟಕ ಜನಪದ ಚಿತ್ರಕಲೆ ಗ್ರಂಥವನ್ನು ನೋಡಬಹುದಾಗಿದೆ.)




ರಂಗೋಲಿಯ ವಿವಿಧ ಸಂದರ್ಭದ ಚಿತ್ರಗಳು



ಡಾ. ಎಸ್.ಸಿ. ಪಾಟೀಲರವರು ೧೯೫೫ ರಲ್ಲಿ ಗುಲ್ಬರ್ಗಾ ಜಿಲ್ಲೆಯ ಮಾಣಶಿವಣಗಿಯಲ್ಲಿ ಜನನ. ಎಮ್.ಎ., ಎಮ್.ಈಡಿ., ಎ.ಎಮ್., ಜಿ.ಡಿ. ಆರ್ಟ್ ಇನ್ ಪೇಂಟಿಂಗ್, ಜಿ.ಡಿ. ಆರ್ಟ್ ಇನ್ ಮಾಡೆಲಿಂಗ್ (ಶಿಲ್ಪಕಲೆ) ಪದವಿಗಳನ್ನು ಪಡೆದುದಲ್ಲದೆ, 'ಕರ್ನಾಟಕದ ಜನಪದ ಚಿತ್ರಕಲೆ' ಕುರಿತು ಪಿಎಚ್.ಡಿ. ಪದವಿಯನ್ನು ೧೯೯೧ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಪಡೆದಿದ್ದಾರೆ. ಬಹುಮುಖ ವ್ಯಕ್ತಿತ್ವದ ಪಾಟೀಲರು ಕನ್ನಡ ಸಾಹಿತ್ಯ, ಇತಿಹಾಸ, ಜಾನಪದ, ಶಿಕ್ಷಣ, ಚಿತ್ರಕಲೆ, ಶಿಲ್ಪಕಲೆಯಲ್ಲಿ ವಿಶೇಷ ಪರಿಣತಿಯನ್ನು ಹೊಂದಿದವರಾಗಿದ್ದು, ಕರ್ನಾಟಕದಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಮೊಟ್ಟ ಮೊದಲ ಪಿಎಚ್.ಡಿ ಪದವಿ ಪಡೆದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಏಕವ್ಯಕ್ತಿ ಮತ್ತು ಹಲವಾರು ಸಮೂಹ ಚಿತ್ರಕಲಾ ಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾಶಿಬಿರ ಕಲಾಪ್ರದರ್ಶನ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ.

ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳನ್ನು ಮತ್ತು ಎಪ್ಪತ್ತೈದು ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಅನೇಕ ಜನ ವಿದ್ಯಾರ್ಥಿಗಳು ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಇತ್ತೀಚೆಗೆ ''ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಅಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಡ್ರಾಯಿಂಗ್ ಎಂಡ್ ಪೇಂಟಿಂಗ್'' ಎಂಬ ವಿಷಯದ ತಮ್ಮ ಎರಡನೆಯ ಡಾಕ್ಟರೇಟ್ ಪದವಿಯನ್ನು ಚಿತ್ರಕಲಾ ಕ್ಷೇತ್ರದಲ್ಲಿ ಪಡೆದುಕೊಂಡಿರುವುದು ಒಂದು ಅಪೂರ್ವ ದಾಖಲೆಯಾಗಿದೆ. ಜಿಲ್ಲೆ, ವಿಭಾಗ, ರಾಜ್ಯಮಟ್ಟದ ಶ್ರೇಷ್ಠ ಉಪನ್ಯಾಸಕ ಪ್ರಶಸ್ತಿಗಳು, ಉಡುಪಿಯ ಕು.ಶಿ.ಹರಿದಾಸ ಭಟ್ಟ ಜಾನಪದ ಪ್ರಶಸ್ತಿಗಳಲ್ಲದೆ, ಕರ್ನಾಟಕ ಲಲಿತಕಲಾ ಅಕಾಡೆಮಿ ಇವರ ಎರಡು ಕಲಾಗ್ರಂಥಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಈಗ ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿ ಮತ್ತು ಯು.ಜಿ.ಸಿ.ಯ ನ್ಯಾಕ್ (ಪೀಯರ್ ಟೀಮ್) ಸಮಿತಿಯ ರಾಷ್ಟ್ರೀಯ ಮಟ್ಟದಲ್ಲಿ ಸದಸ್ಯರಾಗಿ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ತಜ್ಞ ಸಲಹಾ ಸಮಿತಿಯ ಸದಸ್ಯರಾಗಿದ್ದಾರೆ. ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗದಲ್ಲಿ ಪ್ರವಾಚಕರಾಗಿ ಮತ್ತು ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002